# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಸೆಪ್ಟೆಂಬರ್ 7 ಭಾನುವಾರ 2025

ಸಂಪುಟ: 46 | ಸಂಚಿಕೆ: 141 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಧರ್ಮಸ್ಥಳ ಪ್ರಕರಣ ಚಿನ್ನಯ್ಯಗೆ 14 ದಿನ ನ್ಯಾಯಾಂಗ ಬಂಧನ

### ಶಿವಮೊಗ್ಗ ಜೈಲಿಗೆ ಶಿಫ್ಟ್



ಚಿನ್ನಯ್ಯ

**ಮಂಗಳೂರು:** ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿರುವುದಾಗಿ ಹೇಳಿದ್ದ ಮುಸುಕುಧಾರಿ 'ಬುರುಡೆ' ಚಿನ್ನಯ್ಯನಿಗೆ ಕೋರ್ಟ್ 14 ದಿನ ನ್ಯಾಯಾಂಗ ಬಂಧನ ವಿಧಿಸಿದ್ದು, ಆರೋಪಿಯನ್ನು ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವಂತೆ ಆದೇಶಿಸಿದೆ. ಚಿನ್ನಯ್ಯನ 15 ದಿನಗಳ ಎಸ್‌ಐಟಿ ಕಸ್ಟಡಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಇಂದು ಆರೋಪಿಯನ್ನು ಬೆಳ್ತಂಗಡಿ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ಕೋರ್ಟ್, ಆರೋಪಿಯನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಭದ್ರತೆ ದೃಷ್ಟಿಯಿಂದ ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಕಳುಹಿಸುವಂತೆ ಪೊಲೀಸರಿಗೆ ಸೂಚನೆ ನೀಡಿದೆ. ▶ 6ನೇ ಪುಟಕ್ಕೆ

## ಜನಾರ್ಧನ ರೆಡ್ಡಿ ವಿರುದ್ಧ ಸೆಂಥಿಲ್ ಮೊಕದ್ದಮೆ



ಜನಾರ್ಧನ ರೆಡ್ಡಿ ಶಶಿಕಾಂತ್ ಸೆಂಥಿಲ್

**ಬೆಂಗಳೂರು:** ಗಂಗಾವತಿ ಶಾಸಕ ಜನಾರ್ಧನ ರೆಡ್ಡಿ ವಿರುದ್ಧ ತಮಿಳುನಾಡಿನ ಕಾಂಗ್ರೆಸ್ ಸಂಸದ ಶಶಿಕಾಂತ್ ಸೆಂಥಿಲ್ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಧರ್ಮಸ್ಥಳದ ಬುರುಡೆ ಪ್ರಕರಣದಲ್ಲಿ ತಮ್ಮ ಹೆಸರು ಪ್ರಸ್ತಾಪಿಸಿ ಆರೋಪ ಮಾಡಿದ್ದಕ್ಕಾಗಿ ಜನಾರ್ಧನರೆಡ್ಡಿ ವಿರುದ್ಧ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಿರುವುದಾಗಿ ಸೆಂಥಿಲ್ ಹೇಳಿದ್ದಾರೆ. ಬೆಂಗಳೂರಿನ 42ನೇ ▶ 6ನೇ ಪುಟಕ್ಕೆ



## ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ–2025

### ಸೆಸ್ಕ್ ಸಹಯೋಗದಲ್ಲಿ ನಡೆದಿದೆ 'ಮನೆ ಪಟ್ಟಿ' ಕಾರ್ಯ

# ಸೆ.22ರಿಂದಷ್ಟೇ ಸಮೀಕ್ಷೆ

- ನಿಖರ ಮಾಹಿತಿ ಸಂಗ್ರಹಣೆಗೆ ಪ್ರತಿ ಮನೆಗೆ ಸ್ಟಿಕ್ಕರ್ ಅಂಟಿಸುತ್ತಿರುವ ಸೆಸ್ಕ್ ಸಿಬ್ಬಂದಿ
- ಸಮೀಕ್ಷೆ ಇನ್ನು ಆರಂಭವಾಗಿಲ್ಲ; ಜನ ಗೊಂದಲಕ್ಕೀಡಾಗದಂತೆ ಮನವಿ




ಮೈಸೂರಿನ ವಿಜಯನಗರ ಬಡಾವಣೆಯ ಮನೆಯೊಂದರ ಗೋಡೆಗೆ ಸಮೀಕ್ಷೆಯ ಸ್ಟಿಕ್ಕರ್ ಅಂಟಿಸಿರುವುದನ್ನು ಕಾಣಬಹುದು.

ಮೈಸೂರು, ಸೆ.6(ಎಸ್‌ಬಿಡಿ)– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ 'ಮನೆ ಪಟ್ಟಿ (ಹೌಸ್ ಲಿಸ್ಟಿಂಗ್)' ಕಾರ್ಯವಷ್ಟೇ ಸದ್ಯ ಪ್ರಗತಿಯಲ್ಲಿದ್ದು, ಸೆ.22ರಿಂದ ಮಾತ್ರವೇ ಮನೆ ಮನೆ ಸಮೀಕ್ಷೆ ಆರಂಭವಾಗಲಿದೆ.

ಸಮೀಕ್ಷೆಯಲ್ಲಿ ಯಾವುದೇ ಮನೆ ಬಿಟ್ಟು ಹೋಗಬಾರದೆಂಬ ಉದ್ದೇಶದಿಂದ ರಾಜ್ಯಾದ್ಯಂತ ವಿದ್ಯುತ್ ಸರಬರಾಜು ನಿಗಮಗಳ ಸಹಕಾರದೊಂದಿಗೆ ಮನೆ ಪಟ್ಟಿ ಕಾರ್ಯ ನಡೆಸಲಾಗುತ್ತಿದೆ. ಹಾಗೆಯೇ ಮೈಸೂರಲ್ಲೂ ಸೆಸ್ಕ್ ಸಿಬ್ಬಂದಿ ಕೈಜೋಡಿಸಿದ್ದಾರೆ. ವಿದ್ಯುತ್ ಮೀಟರ್ ರೀಡರ್‌ಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ವಾಸದ ಮನೆಗಳ ವಿದ್ಯುತ್ ಬಿಲ್ಲಿನ ಆರ್‌ಆರ್ ಸಂಖ್ಯೆ ▶ 6ನೇ ಪುಟಕ್ಕೆ

### ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಮನವಿ

ತಮ್ಮ ಮನೆಗೂ ಸಮೀಕ್ಷೆಯ ಸ್ಟಿಕ್ಕರ್ ಅಂಟಿಸಿರುವ ಬಗ್ಗೆ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯದ ಎಲ್ಲಾ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಈ ಸಮೀಕ್ಷೆ ಕಾರ್ಯದಲ್ಲಿ ಮನೆ ಪಟ್ಟಿ ಅಂದರೆ ಹೌಸ್ ಲಿಸ್ಟಿಂಗ್ ಎಕ್ಸರ್ಸೈಜ್ ಮಾಡಲಾಗುತ್ತಿದೆ. ಇದರ ಭಾಗವಾಗಿ ಇಂದು ಆಯೋಗದ ಸಿಬ್ಬಂದಿ ನನ್ನ ನಿವಾಸಕ್ಕೆ ಭೇಟಿ ನೀಡಿ, ಸ್ಟಿಕ್ಕರ್ ಅಂಟಿಸಿದರು. ಇದೇ ಮಾದರಿಯಲ್ಲಿ ರಾಜ್ಯದ ಪ್ರತಿ ಮನೆಗೆ ಭೇಟಿ ನೀಡಿ ಸ್ಟಿಕ್ಕರ್ ಅಂಟಿಸಿದ ಬಳಿಕ ಶಿಕ್ಷಕರು ಸಮೀಕ್ಷೆ ಕೈಗೊಳ್ಳಲಿದ್ದಾರೆ. ಈ ವೇಳೆ ಅವರಿಗೆ ಸೂಕ್ತ ಮಾಹಿತಿ ಒದಗಿಸಿ ಸಹಕರಿಸುವ ಮೂಲಕ ಈ ಸಮೀಕ್ಷೆಯನ್ನು ಯಶಸ್ವಿಗೊಳಿಸಿಕೊಡಬೇಕು ಎಂದು ಮನವಿ ಮಾಡಿದ್ದಾರೆ.


Siddaramaiah
@siddaramaiah

ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯದ ಎಲ್ಲಾ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಈ ಸಮೀಕ್ಷೆ ಕಾರ್ಯದಲ್ಲಿ ಮನೆ ಪಟ್ಟಿ ಅಂದರೆ ಹೌಸ್ ಲಿಸ್ಟಿಂಗ್ ಎಕ್ಸರ್ಸೈಜ್ ಮಾಡಲಾಗುತ್ತಿದೆ. ಇದರ ಭಾಗವಾಗಿ ಇಂದು ಆಯೋಗದ ಸಿಬ್ಬಂದಿಗಳು ನನ್ನ ನಿವಾಸಕ್ಕೆ ಭೇಟಿನೀಡಿ, ಸ್ಟಿಕ್ಕರ್ ಅಂಟಿಸಿದರು.

ಇದೇ ಮಾದರಿಯಲ್ಲಿ ರಾಜ್ಯದ ಪ್ರತಿ ಮನೆಗೆ ಸಿಬ್ಬಂದಿಗಳು ಭೇಟಿನೀಡಿ ಸ್ಟಿಕ್ಕರ್ ಅಂಟಿಸಿದ ಬಳಿಕ ಶಿಕ್ಷಕರು ಭೇಟಿನೀಡಿ ಸಮೀಕ್ಷೆ ಕೈಗೊಳ್ಳಲಿದ್ದಾರೆ. ಈ ವೇಳೆ ಅವರಿಗೆ ಸೂಕ್ತ ಮಾಹಿತಿ ಒದಗಿಸಿ ಸಹಕರಿಸುವ ಮೂಲಕ ಈ ಸಮೀಕ್ಷೆಯನ್ನು ಯಶಸ್ವಿಗೊಳಿಸಿಕೊಡಬೇಕು ಎಂದು ಕೋರುತ್ತೇನೆ.

#SocialJustice

### ಸೆಸ್ಕ್ ನೌಕರರ ಕಾರ್ಯಕ್ಕೆ ಸಹಕರಿಸಿ...

"ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಕೈಗೊಂಡಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಹೌಸ್ ಲಿಸ್ಟಿಂಗ್ ಮಾಡಲು ಸೆಸ್ಕ್ ಸಹಕಾರ ನೀಡುತ್ತಿದೆ. ವಿದ್ಯುತ್ ಸಂಪರ್ಕದ ಆಧಾರದಲ್ಲಿ ವಾಸದ ಮನೆಗಳ ಮೀಟರ್ ಬಾಕ್ಸ್ ಅಥವಾ ಬಾಗಿಲಿಗೆ ಸ್ಟಿಕ್ಕರ್ ಅಂಟಿಸಿ, ಯುಹೆಚ್‌ಐಡಿ ನಮೂದಿಸಿ ಆ ಸಂಖ್ಯೆಗಳನ್ನು ಆಯೋಗಕ್ಕೆ ಸಲ್ಲಿಸುವುದಷ್ಟೇ ನಮ್ಮ ಕೆಲಸ. ಈ ಬಗ್ಗೆ ಗೊಂದಲಕ್ಕೀಡಾಗದೆ ಸೆಸ್ಕ್ ಸಿಬ್ಬಂದಿ ಕಾರ್ಯಕ್ಕೆ ಸಾರ್ವಜನಿಕರು ಸಹಕರಿಸಬೇಕು.

–ಸುನೀಲ್, ಎಸ್‌ಇ, ಸೆಸ್ಕ್ ಮೈಸೂರು ವೃತ್ತ

### ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ ವಿಚಾರ

## ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ ಮಾಜಿ ಸಂಸದ ಪ್ರತಾಪ್ ಸಿಂಹ





ಪ್ರತಾಪ್ ಸಿಂಹ ಬಾನು ಮುಷ್ತಾಕ್

ಬೆಂಗಳೂರು,ಸೆ.6–ಈ ಬಾರಿ ನಾಡಹಬ್ಬ ದಸರಾ, ಉದ್ಘಾಟನೆ ವಿಚಾರ ವಿವಾದದಿಂದಲೇ ಸದ್ದು ಮಾಡುತ್ತಿದೆ. ದಸರಾ ಉದ್ಘಾಟನೆಗೆಂದು ಲೇಖಕಿ ಬಾನು ಮುಷ್ತಾಕ್ ಅವರಿಗೆ ಆಹ್ವಾನ ಕೊಟ್ಟ ಸರ್ಕಾರದ ಕ್ರಮದ ವಿರುದ್ಧ ಬಿಜೆಪಿ ನಾಯಕರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಆರಂಭದಿಂದಲೂ ಖಂಡಿಸುತ್ತಲೇ ಬಂದ ಮಾಜಿ ಸಂಸದ ಪ್ರತಾಪ್ ಸಿಂಹ, ಇದೀಗ ಸರ್ಕಾರ ಅಧಿಕೃತ ಆಹ್ವಾನ ನೀಡುತ್ತಿದ್ದಂತೆಯೇ ಒಂದು ಹೆಜ್ಜೆ ಮುಂದೆ ಹೋಗಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ದಸರಾ ಉದ್ಘಾಟನೆ ವೇಳೆ ಚಾಮುಂಡೇಶ್ವರಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಬೇಕು. ದಸರಾ ಹಬ್ಬವನ್ನು ವೇದ–ಮಂತ್ರ, ಧಾರ್ಮಿಕ ಆಚರಣೆಗಳೊಂದಿಗೆ ಉದ್ಘಾಟನೆ ಮಾಡುವ ಸಂಪ್ರದಾಯವಿದೆ. ಬಾನು ಮುಷ್ತಾಕ್ ಹಿಂದೂ ವಿರೋಧಿ, ಕನ್ನಡ ವಿರೋಧಿ ಭಾವನೆ ಹೊಂದಿದ್ದಾರೆ ಎಂದು ಮಾಜಿ ಪ್ರತಾಪ್ ಸಿಂಹ ತಮ್ಮ ವಾದ ಮುಂದುವರಿಸಿದ್ದಾರೆ. ರಾಜ್ಯ ಸರ್ಕಾರ ಏಕಪಕ್ಷೀಯವಾಗಿ ಬಾನು ಮುಷ್ತಾಕ್‌ರನ್ನು ಆಯ್ಕೆ ಮಾಡಿದೆ. ಮೈಸೂರಿನ ರಾಜಮನೆತನದವರು ▶ 6ನೇ ಪುಟಕ್ಕೆ

## ಪ್ರಜ್ವಲ್ ರೇವಣ್ಣ ಈಗ ಜೈಲು ಲೈಬ್ರರಿ ಗುಮಾಸ್ತ!

### ಸಂಬಳ ದಿನಕ್ಕೆ 522 ರೂ.



**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಪರಪ್ಪನ ಅಗ್ರಹಾರದಲ್ಲಿ ಸಾಮಾನ್ಯ ಕೈದಿಗಳಂತೆ ಶಿಕ್ಷೆ ಅನುಭವಿಸುತ್ತಿದ್ದಾರೆ. ಜೈಲಾಧಿಕಾರಿಗಳು ಅವರನ್ನು ಲೈಬ್ರರಿ ಕ್ಲರ್ಕ್ ಆಗಿ ನೇಮಿಸಿದ್ದು, ಪುಸ್ತಕಗಳನ್ನು ಕೊಡುವುದು ಹಾಗೂ ನೋಂದಣಿ ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಸದ್ಯ ಒಂದು ದಿನದ ಮಟ್ಟಿಗೆ ಪ್ರಜ್ವಲ್ ರೇವಣ್ಣ ಕೆಲಸ ಮಾಡಿದ್ದು, ದಿನಗೂಲಿಯಾಗಿ ದಿನಕ್ಕೆ 522 ರೂ. ನೀಡಲಾಗುತ್ತದೆ. ಕೆಲಸಕ್ಕೆ ಹಾಜರಾಗದ ದಿನಗಳಲ್ಲಿ ಸಂಬಳ ನೀಡಲಾಗುವುದಿಲ್ಲ. ಟ್ರಯಲ್ ಕೋರ್ಟ್‌ಗೆ ಆಗಾಗ ಹಾಜರಾಗಬೇಕಾಗಿರುವುದರಿಂದ ಹಾಗೂ ವಕೀಲರ ಜೊತೆ ಇತರೇ ಕೇಸ್‌ಗಳ ಸಂಬಂಧ ಚರ್ಚೆ ಮಾಡಬೇಕಾಗಿರುವ ಕಾರಣ ಪ್ರಜ್ವಲ್ ರೇವಣ್ಣ ಅವರನ್ನು ಪೂರ್ತಿ ಕೆಲಸಕ್ಕೆ ನಿಯೋಜಿಸಿಲ್ಲ.

## ಮೊಪೆಡ್, ಕಾರು, ಲಾರಿ ಸರಣಿ ಅಪಘಾತ; ಮೂವರು ಬಾಲಕರ ಸಾವು

### ಮೂವರಿಗೆ ಗಾಯ; ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯಲ್ಲಿ ದುರಂತ




ಚಾಮರಾಜನಗರದ ಗಾಳಿಪುರ ಬಡಾವಣೆಯ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೊಪೆಡ್, ಲಾರಿ ಹಾಗೂ ಕಾರಿನ ನಡುವೆ ಸರಣಿ ಅಪಘಾತ ಸಂಭವಿಸಿರುವುದು.

ಚಾಮರಾಜನಗರ,ಸೆ.6– ನಗರದ ಗಾಳಿಪುರ ಬಡಾವಣೆಯ ಬಳಿ ರಾಷ್ಟ್ರೀಯ ಹೆದ್ದಾರಿ 948ರ ಬೈಪಾಸ್ ರಸ್ತೆಯಲ್ಲಿ ಅಪ್ರಾಪ್ತ ಬಾಲಕರು ಚಲಾಯಿಸುತ್ತಿದ್ದ ಮೊಪೆಡ್, ಲಾರಿ ಹಾಗೂ ಕಾರಿನ ನಡುವೆ ಸಂಭವಿಸಿದ ಸರಣಿ ಅಪಘಾತದಲ್ಲಿ ಮೂವರು ಬಾಲಕರು ಸಾವನ್ನಪ್ಪಿದ್ದು, ದುರಂತದಲ್ಲಿ ಇನ್ನು ಮೂವರು ಗಾಯಗೊಂಡಿದ್ದಾರೆ. ಪಟ್ಟಣದ ಗಾಳಿಪುರ ಬಡಾವಣೆ ನಿವಾಸಿಗಳಾದ ಫರ್ಮಾನ್ ಪುತ್ರ ಮೆಹ್ರಾನ್ (13) ಸ್ಥಳದಲ್ಲೇ ಮೃತಪಟ್ಟರೆ, ಅಯೂಬ್ ಪುತ್ರ ▶ 6ನೇ ಪುಟಕ್ಕೆ

## ಕಮಾಂಡೋ ಪಡೆ ಸರ್ಪಗಾವಲಲ್ಲಿ ಗಜಪಡೆ ತಾಲೀಮು




ಶನಿವಾರ ಸಂಜೆ ಕಮಾಂಡೋ ಪಡೆ ಸರ್ಪಗಾವಲಿನಲ್ಲಿ ಸಾಗುತ್ತಿರುವ ದಸರಾ ಗಜಪಡೆ.


- ಅಶ್ವದಳದ ಬೆಂಗಾವಲು
- ಜನ, ವಾಹನ ಹತ್ತಿರ ಸುಳಿಯಲು ಅವಕಾಶವಿಲ್ಲ

ಮೈಸೂರು,ಸೆ.6(ಪಿಎಂ)– ದಸರಾ ಗಜಪಡೆ ತಾಲೀಮು ವೇಳೆ ಅವುಗಳ ಗಾಂಭೀರ್ಯ ನಡಿಗೆ ಕಣ್ತುಂಬಿಕೊಳ್ಳಲು ಸಾರ್ವಜನಿಕರು ಮುಗಿಬೀಳುವುದು ಒಂದೆಡೆಯಾದರೆ, ಮತ್ತೊಂದೆಡೆ ಆನೆಗಳ ನಡುವೆಯೇ ವಾಹನಗಳು ಸಂಚರಿಸುವ ಮೂಲಕ ಅವುಗಳು ಮುಕ್ತವಾಗಿ ಸಾಗಲು ಉಂಟಾಗುತ್ತಿದ್ದ ಅಡಚಣೆ ತಪ್ಪಿಸಲು ಇದೀಗ ಭದ್ರತೆ ಮತ್ತಷ್ಟು ಬಿಗಿಗೊಳಿಸಲಾಗಿದ್ದು, ಕಮಾಂಡೋ ಪಡೆ ಸರ್ಪಗಾವಲಿನಲ್ಲಿ ತಾಲೀಮು ನಡೆಸಲಾಗುತ್ತಿದೆ. ಶನಿವಾರದಿಂದ ಈ ಕಟ್ಟೆಚ್ಚರದ ಕ್ರಮ ವಹಿಸಲಾಗಿದ್ದು, ಗಜಪಡೆ ಮುಕ್ತವಾಗಿ ಸಾಗಲು ಅನುವು ಮಾಡಿಕೊಡಲಾಗಿದೆ. ▶ 6ನೇ ಪುಟಕ್ಕೆ

# ಮೈಸೂರಿನ ಸಾಂಪ್ರದಾಯಿಕ ಶೈಲಿ ಆನೆಶಿರ ಶಿಲ್ಪ ಸೌಂದರ್ಯಕ್ಕೆ ಧಕ್ಕೆ

### ಕಣ್ಮನ ಸೆಳೆಯುತ್ತಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತದ ಕಾರಂಜಿ ಬಗ್ಗೆ ನಗರಪಾಲಿಕೆ ಆಡಳಿತದ ದಿವ್ಯ ನಿರ್ಲಕ್ಷ್ಯ







ಮೈಸೂರಿನ ಬನ್ನಿಮಂಟಪದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತದಲ್ಲಿರುವ ಐಕಾನಿಕ್ ಆನೆಶಿರ ಶಿಲ್ಪಕ್ಕೆ ಬಿಗಿದಿರುವ ಪ್ಲಾಸ್ಟಿಕ್ ವೈರ್ (ಮೊದಲ ಚಿತ್ರ). ವೃತ್ತದ ಸುತ್ತ ನಿರ್ಮಿಸಿರುವ ಕಬ್ಬಿಣದ ಗ್ರಿಲ್ ಕಳ್ಳರ ಪಾಲಾಗಿರುವುದು (ಮಧ್ಯಚಿತ್ರ)– ಪಾರಂಪರಿಕ ಶೈಲಿಯ ಈ ಆನೆಶಿರ ಶಿಲ್ಪಕ್ಕೆ ಪಾಚಿ ಆವರಿಸಿ, ತನ್ನ ಸೌಂದರ್ಯ ಕಳೆದುಕೊಂಡಿರುವುದನ್ನು (ಕೊನೆ ಚಿತ್ರ) ಕಾಣಬಹುದು.

### ನಗರಪಾಲಿಕೆಯಿಂದ ಶೀಘ್ರವೇ ನವೀಕರಣ

"ಅಬ್ದುಲ್ ಕಲಾಂ ಆಜಾದ್ ವೃತ್ತದ ಕಾರಂಜಿಯನ್ನು ಶೀಘ್ರವೇ ನವೀಕರಿಸುತ್ತೇವೆ. ಈ ಮೊದಲು ಇದ್ದ ಸೌಂದರ್ಯ ಮರುಕಳಿಸಲು ಕ್ರಮ ಕೈಗೊಳ್ಳುತ್ತೇವೆ. ಮೈಸೂರು ನಗರ ಪಾಲಿಕೆ ಈ ಕಾರಂಜಿಯನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಬೇಕಿತ್ತು. ಆದರೆ, ಅದು ಸಾಧ್ಯವಾಗಿಲ್ಲ. ಈಗ ದಸರಾ ಮಹೋತ್ಸವ ಬರುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಕಾರಂಜಿಯನ್ನು ನವೀಕರಿಸಿ, ಇನ್ನು ಮುಂದೆ ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುತ್ತೇವೆ.

–ಶಿವಕುಮಾರ್, ಸಹಾಯಕ ಆಯುಕ್ತರು, ಮೈಸೂರು ನಗರಪಾಲಿಕೆ

ಮೈಸೂರು, ಸೆ.6(ಬಿಎಲ್‌ಯು)– ಮೈಸೂರು ನಗರದ ಹಲವು ವೃತ್ತಗಳಲ್ಲಿ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣವಾಗಿರುವ ಕಾರಂಜಿಗಳು ನಗರಪಾಲಿಕೆ ದಿವ್ಯ ನಿರ್ಲಕ್ಷ್ಯದಿಂದಾಗಿ ತಮ್ಮ ವೈಭವ ಕಳೆದುಕೊಳ್ಳುತ್ತಿವೆ. ನಗರದ ಹಿಂದಿನ ಹೈವೆ ವೃತ್ತ, ಹಾಲಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತದಲ್ಲಿರುವ ಸಾಂಪ್ರದಾಯಿಕ ಆನೆಶಿರ ಶಿಲ್ಪದ ಕಾರಂಜಿ ಇದಕ್ಕೆ ಸ್ಪಷ್ಟ ನಿದರ್ಶನ. ಪಾಲಿಕೆ ಆಡಳಿತ ಸೂಕ್ತ ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ಕಾರಂಜಿ ತನ್ನ ಸೊಬಗನ್ನು ಕಳೆದುಕೊಂಡಿದೆ.

ಸಾಂಸ್ಕೃತಿಕ ನಗರಿ ಮೈಸೂರಿಗೆ ರಾಜ್ಯ ರಾಜಧಾನಿ ಬೆಂಗಳೂರಿಂದ ಬರುವ ಪ್ರವಾಸಿಗರಿಗೆ ಬನ್ನಿಮಂಟಪದ ಅಬ್ದುಲ್ ಕಲಾಂ ಆಜಾದ್ ವೃತ್ತದ ಈ ಸಾಂಪ್ರದಾಯಿಕ ಆನೆಶಿರ ಶಿಲ್ಪ ಮೊದಲು ಎದುರುಗೊಳ್ಳುತ್ತಿತ್ತು. ಈ ವಿಶೇಷ ಕಲಾಕೃತಿ ಕಣ್ಮನ ಸೆಳೆಯುತ್ತಿತ್ತು. ಕಾರಂಜಿಯ ಸುತ್ತಲಿನ ಹಸಿರು ಮನಮೋಹಕವಾಗಿರುತ್ತಿತ್ತು.

ಆನೆಶಿರ ಶಿಲ್ಪ ಕಾರಂಜಿಯನ್ನು 2016ರಲ್ಲಿ ಬ್ರಿಗೇಡ್ ಗ್ರೂಪ್‌ನವರು 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಿ, ಒಂದು ವರ್ಷ ನಿರ್ವಹಣೆಯನ್ನೂ ಮಾಡಿದ್ದರು. ಆ ಸಮಯದಲ್ಲಿ ಆನೆಶಿರ ಶಿಲ್ಪ, ಕಾರಂಜಿ, ಸುತ್ತಲಿನ ಹಸಿರು ಭವ್ಯವಾಗಿತ್ತು. ಆದರೆ, 2017ರಲ್ಲಿ ವೃತ್ತ ಹಾಗೂ ಇಲ್ಲಿನ ಕಾರಂಜಿ ನಿರ್ವಹಣೆಯನ್ನು ಬ್ರಿಗೇಡ್ ಗ್ರೂಪ್‌ನವರು ನಗರಪಾಲಿಕೆಗೆ ಹಸ್ತಾಂತರಿಸಿದರು. ಅಂದಿನಿಂದ ಇಲ್ಲಿವರೆಗೆ ಪಾಲಿಕೆಯವರು ಕಾರಂಜಿ ನಿರ್ವಹಣೆಯನ್ನು ಸೂಕ್ತ ರೀತಿಯಲ್ಲಿ ಮಾಡದ ಕಾರಣ ಇಡೀ ವೃತ್ತ ತನ್ನ ಸೊಬಗನ್ನು ಕಳೆದುಕೊಳ್ಳುತ್ತಾ ಬಂದಿದೆ.

**ಮೈಸೂರು ದಸರಾ ಸಂದರ್ಭದಲ್ಲಿ ಪ್ರತಿಯೊಂದು ವೃತ್ತದ ಕಾರಂಜಿಯನ್ನು ಒಂದು ತಿಂಗಳು ಮುಂಚಿತವಾಗಿ ನವೀಕರಿಸಲಾಗುತ್ತಿತ್ತು. ಆದರೆ ಪ್ರಸಕ್ತ ಸಾಲಿನ ದಸರಾ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದ್ದರೂ ಕಾರಂಜಿಗಳ ನವೀಕರಣಕ್ಕೆ ಪಾಲಿಕೆ ಮುಂದಾಗಿಲ್ಲ.**

ಒಂದು ಕಾಲದಲ್ಲಿ ಕಲಾತ್ಮಕ ಆನೆಶಿರ ಶಿಲ್ಪದ ಕಾರಂಜಿಯ ಸೌಂದರ್ಯ ಪ್ರವಾಸಿಗರ ಕಣ್ಮನ ಸೆಳೆಯುತ್ತಿತ್ತು. ಆದರೆ ಈಗ ಹುಟ್ಟುಹಬ್ಬದ ಶುಭಾಶಯ, ಮರಣ ಹೊಂದಿದವರ ಶ್ರದ್ಧಾಂಜಲಿ ಸಲ್ಲಿಸುವ ವೇದಿಕೆ, ರಾಜಕಾರಣಿಗಳ ಸ್ವಾಗತದ ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್ ಕಟ್ಟುವ ಕಟೆಕಟೆಯಾಗಿಯೂ ಬಳಕೆಯಾಗುತ್ತಿದೆ. ಹಾಗಾಗಿ ಕಾರಂಜಿ ತನ್ನ ಆಕರ್ಷಣೆ ಕಳೆದುಕೊಂಡಿದೆ. ವೃತ್ತದ ಸುತ್ತ ಇದ್ದಂತಹ ಕಬ್ಬಿಣದ ಗ್ರಿಲ್‌ಗಳು ಕಳ್ಳರ ಪಾಲಾಗಿವೆ.

ಜನ ತಮಗೆ ಬೇಕಾದಂತೆ ಬಳಸಿಕೊಳ್ಳಲು ಆನೆಯ ಸೊಂಡಿಲು ಹಾಗೂ ದಂತಕ್ಕೆ ಪ್ಲಾಸ್ಟಿಕ್ ವೈರ್ ಬಿಗಿಯಲಾಗಿದೆ. ಆನೆಶಿರ ಶಿಲ್ಪಕ್ಕೆ ಪಾಚಿ ಆವರಿಸಿದ್ದು, ಸುತ್ತ ಇದ್ದ ಹಸಿರು ಹಾಸು, ಗಿಡಗಳು ಒಣಗಿವೆ. ಕಾರಂಜಿಯ ಮೇಲ್ಭಾಗದಲ್ಲೂ ಗಿಡಗಂಟಿಗಳು ಬೆಳೆದಿವೆ.

ಪ್ರವಾಸಿಗರು ಮೈಸೂರು ನಗರಕ್ಕೆ ಪ್ರವೇಶ ಮಾಡಿದಾಗ ಎದುರುಗೊಳ್ಳುವ ಈ ಆನೆಶಿರ ಶಿಲ್ಪ ಈಗ ಆಕರ್ಷಣೆ ಕಳೆದುಕೊಂಡಿದೆ. ಬ್ರಿಗೇಡ್ ಗ್ರೂಪ್‌ನವರು ನಿರ್ವಹಣೆ ಮಾಡುವಾಗ ಕಣ್ಮನ ಸೆಳೆಯುತ್ತಿದ್ದ ಕಾರಂಜಿಯನ್ನು ಮೈಸೂರು ಮಹಾನಗರಪಾಲಿಕೆಯವರು ಸೂಕ್ತ ರೀತಿ ಏಕೆ ನಿರ್ವಹಣೆ ಮಾಡಲಿಲ್ಲ ಎಂಬುದು ಯಕ್ಷಪ್ರಶ್ನೆ.

# ಇಂದು ದುಂಡುಮೇಜಿನ ಸಭೆ

ಮೈಸೂರು,ಸೆ.6(ಪಿಎಂ)–ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಹಾಗೂ ಜೈಭೀಮ್ ಸಾಮಾಜಿಕ ಪರಿವರ್ತನಾ ವೇದಿಕೆ ಜಂಟಿ ಆಶ್ರಯದಲ್ಲಿ ಸೆ.7ರಂದು ಬೆಳಗ್ಗೆ 11ಕ್ಕೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಲೋಕೋಪಯೋಗಿ ಇಲಾಖೆ ಅತಿಥಿಗೃಹದಲ್ಲಿ 'ಒಳಮೀಸಲಾತಿ ಒಂದು ಕುತಂತ್ರ ಮತ್ತು ಬಲಗೈ ಸಮುದಾಯದ ಸಾಂವಿಧಾನಿಕ ಹಕ್ಕು ಬಾಧ್ಯತೆಗಳ ರಕ್ಷಣೆ' ಕುರಿತು ದುಂಡುಮೇಜಿನ ಸಭೆ ಆಯೋಜಿಸಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಆರ್.ರಾಜು, ಮೈಸೂರು ವಿವಿ ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸಹಾಯಕ ಪ್ರಾಧ್ಯಾಪಕ ಡಾ.ಚಂದ್ರಶೇಖರ ಐಜೂರು, ಒಳಮೀಸಲಾತಿ ಜಾಗೃತಿ ವೇದಿಕೆ ಸಂಚಾಲಕ ನವೀನ್ ಮನಿಯ, ಲೇಖಕ ಸಿ.ಹರಕುಮಾರ್, ದಲಿತ ಮುಖಂಡ ಹರಿಹರ ಆನಂದಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ನಗರ ಸಮಿತಿ ಅಧ್ಯಕ್ಷ ಜೆ.ಪ್ರಭು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಭಿನಂದನೆ...



ಮೈಸೂರಿನ ಹುಲ್ಲಿನ ಬೀದಿಯಲ್ಲಿ ಹಮ್ಮಿಕೊಂಡಿದ್ದ ಗಣೇಶೋತ್ಸವದಲ್ಲಿ ಪಾಲ್ಗೊಂಡಿದ್ದ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಸ್ನೇಹಜೀವಿ ಅರಳಿಕಟ್ಟೆ ಯುವಕರ ಭಕ್ತ ಮಂಡಳಿಯಿಂದ ಅಭಿನಂದಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಎನ್.ಪ್ರದೀಪ್‌ಕುಮಾರ್, ಮಂಡಳಿಯ ರವೀಂದ್ರ, ನಾಗರಾಜ್, ಯಶ್ವಂತ್, ಚಂದನ್, ಅಖಿಲೇಶ್, ಕಾರ್ತಿಕ್, ನಿಖಿಲ್, ಪ್ರಜ್ವಲ್, ಯತೀಂದ್ರ, ಪವನ್, ಮೋಹನ್, ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.

## ಚಿಕ್ಕಮ್ಮ–ದೊಡ್ಡಮ್ಮ ಹಬ್ಬ



ಮೈಸೂರು ಜಿಲ್ಲೆ ಸೋಸಲೆ ಹೋಬಳಿ ಗಾಣಿಗನಕೊಪ್ಪಲಲ್ಲಿ ಚಿಕ್ಕಮ್ಮ–ದೊಡ್ಡಮ್ಮ ಹಬ್ಬ ನೆರವೇರಿತು. ಯಜಮಾನರಾದ ಕೇಶವಮೂರ್ತಿ, ಗೋಪಾಲ, ನಾಡಗೌಡ, ಉಮೇಶ್, ನರಸಿಂಹಯ್ಯ, ಗ್ರಾಮಸ್ಥರು ಉಪಸ್ಥಿತರಿದ್ದರು.




ಮೈಸೂರು ತಾಲೂಕು ಜಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ 30 ಸಾವಿರ ಮೌಲ್ಯದ ಪೀಠೋಪಕರಣಗಳನ್ನು ಕೊಡುಗೆ ನೀಡಿದ ಜಯಪುರ ಉಪವಿಭಾಗ ಸೆಸ್ಕ್‌ನ ಸಹಾಯಕ ಎಂಜಿನಿಯರ್ ಸುರೇಶ್ ಅವರನ್ನು ಸನ್ಮಾನಿಸಲಾಯಿತು. ವೈದ್ಯಾಧಿಕಾರಿ ಡಾ.ಗಾಯತ್ರಿ, ಹಿರಿಯ ವೈದ್ಯಾಧಿಕಾರಿ ಡಾ.ಮಹದೇವಪ್ರಸಾದ್, ದಂತ ವೈದ್ಯರಾದ ಡಾ.ಚೈತ್ರ, ಡಾ.ಶಿವಕುಮಾರ್, ಆಯುಷ್ ವೈದ್ಯರಾದ ಡಾ.ಸವಿತಾ, ಗೋಪಾಲಪುರ ಜಿ.ಸಿ.ವೆಂಕಟೇಶ್ ಮತ್ತು ಸಿಬ್ಬಂದಿ ಹಾಜರಿದ್ದರು.

# ಆಡಳಿತಾರೂಢ ಸರ್ಕಾರ ಪಠ್ಯ ಪುಸ್ತಕದ ಮೂಲಕ ತನ್ನ ಸಿದ್ಧಾಂತವನ್ನು ಮಕ್ಕಳಲ್ಲಿ ತುಂಬುವ ಕೆಲಸ ಮಾಡಬಾರದು

**● ಹಿರಿಯ ಶಾಸಕ ತನ್ವೀರ್ ಸೇಠ್ ಕಿವಿಮಾತು ● ಶಿಕ್ಷಕರ ದಿನಾಚರಣೆ; ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ**




ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಸೆ.6(ಎಂಟಿವೈ)– ಯಾವುದೇ ಸರ್ಕಾರಗಳು ಆಡಳಿತದಲ್ಲಿರುವಾಗ ತನ್ನ ಸಿದ್ಧಾಂತವನ್ನು ಪಠ್ಯಕ್ರಮದ ಮೂಲಕ ಮಕ್ಕಳ ಮನಸ್ಸಲ್ಲಿ ಬಿತ್ತಿ, ಅವರ ದಾರಿ ತಪ್ಪಿಸುವ ಕೆಲಸ ಮಾಡಬಾರದು ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ, ನಿವೃತ್ತ ಶಿಕ್ಷಕರಿಗೆ ಸನ್ಮಾನ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ವಿತರಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಡಳಿತದಲ್ಲಿರುವ ಸರ್ಕಾರಗಳು ತಮ್ಮ ಸಿದ್ಧಾಂತವನ್ನು ಪಠ್ಯದಲ್ಲಿ ಹೇರುವ ಕೆಲಸ ನಿಷೇಧವಾಗಬೇಕು. ಪಠ್ಯಕ್ರಮ ಪರಿಷ್ಕರಣೆ ಆಡಳಿತ ವ್ಯವಸ್ಥೆಗೆ ಸೀಮಿತವಾಗಬಾರದು. ಅದಕ್ಕಾಗಿ ಪ್ರತ್ಯೇಕವಾಗಿ ಸಮಿತಿ ರಚನೆ ಮಾಡಬೇಕು. ನಾನು ಶಿಕ್ಷಣ ಸಚಿವನಾಗಿದ್ದಾಗ ಗಣಿತ ಮತ್ತು ವಿಜ್ಞಾನ ಪುಸ್ತಕಗಳನ್ನು ತಂದೆ. ಇದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಯಿತು ಎಂದು ತಿಳಿಸಿದರು.

ಆಧುನಿಕ ಕಾಲಘಟ್ಟದಲ್ಲಿ ಶಿಕ್ಷಣ ಕ್ಷೇತ್ರವು ಕೇವಲ ಅಂಕಗಳಿಕೆಗೆ ಸೀಮಿತವಾಗಿದೆ. ಶಿಕ್ಷಣ ಕ್ಷೇತ್ರದಿಂದ ರಾಜಕೀಯ, ಆಡಳಿಶಾಹಿ ವ್ಯವಸ್ಥೆ ದೂರವಿದ್ದು, ಮಾನವ ಕುಲಕ್ಕೆ ಮಾನವೀಯತೆ ಕಲಿಸಿ ಪ್ರಕೃತಿ ನಿಯಮದಂತೆ ಜೀವನ ನಡೆಸುವಂತಾಗಬೇಕು. ಶಾಸಕರು ತಮ್ಮ ಶಾಸಕ ನಿಧಿಯಲ್ಲಿ ಸರ್ಕಾರಿ ಶಾಲೆಗಳಿಗೆ ವಿನಿಯೋಗ ಮಾಡಲು ಅವಕಾಶ ಇರಲಿಲ್ಲ. ನಾನು ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ಶೇ.30ರಷ್ಟು ಅನುದಾನವನ್ನು ಶಾಲೆಗಳ ಕಟ್ಟಡ ದುರಸ್ತಿ ಮತ್ತು ಮೂಲಸೌಕರ್ಯಕ್ಕೆ ಕಡ್ಡಾಯವಾಗಿ ಖರ್ಚು ಮಾಡಬೇಕು ಎಂದು ಅಧಿಸೂಚನೆ ಹೊರಡಿಸಿದೆ. ಆದರೆ, ಶಾಲೆಯ ಮುಖ್ಯೋಪಾಧ್ಯಾಯರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಲ್ಲಿರುವ ಮೂಲ ಸಮಸ್ಯೆಗಳ ಪರಿಹಾರಕ್ಕೆ ಶಾಸಕರಿಗೆ ಬೇಡಿಕೆಗಳನ್ನು ಸಲ್ಲಿಸುತ್ತಿಲ್ಲ. ಇದರಿಂದ ಇನ್ನೂ ಅನೇಕ ಶಾಲೆಗಳು ಮೂಲಸೌಕರ್ಯವಿಲ್ಲದೆ ಸೊರಗುತ್ತಿವೆ. ನಿರಂತರವಾಗಿ ಮೂರು ವರ್ಷದಿಂದ ಬಂದ ಪೂರ್ಣ ಪ್ರಮಾಣದ ಅನುದಾನವನ್ನು ನನ್ನ ಕ್ಷೇತ್ರದ ಶಿಕ್ಷಣ ಇಲಾಖೆಗೆ ಕೊಟ್ಟಿದ್ದೇನೆ. ಕೆಲವೇ ವರ್ಷಗಳಲ್ಲಿ ನನ್ನ ಕ್ಷೇತ್ರದ ಎಲ್ಲ ಶಾಲೆಗಳಿಗೆ ಸವಲತ್ತುಗಳು ಸಿಗಲಿವೆ ಎಂದರು.

> **ಮೌಲ್ಯ ಕಲಿಸಿ...**
> ಮಕ್ಕಳು ಹೆಚ್ಚಿನ ಸಮಯವನ್ನು ಶಿಕ್ಷಕರೊಂದಿಗೆ ಕಳೆಯುತ್ತಾರೆ. ಕೇವಲ ಶಿಕ್ಷಣದಿಂದಲೂ ಬದಲಾವಣೆ ಸಾಧ್ಯವಿಲ್ಲ. ಹೀಗಾಗಿ ಮಕ್ಕಳಿಗೆ ಪಠ್ಯದೊಂದಿಗೆ ನೈತಿಕ ಮೌಲ್ಯಗಳನ್ನು ಕಲಿಸಬೇಕು. ಮಕ್ಕಳ ಪೋಷಣೆ ಮಾಡುವ ಸಂಸ್ಥೆಗಳು ಇಂದು ಅಗತ್ಯವಿದೆ. ಇದಕ್ಕಾಗಿ ಶಿಕ್ಷಕರು ಮಕ್ಕಳ ಪೋಷಕರೊಂದಿಗೆ ಸಮಾಲೋಚನೆ ನಡೆಸುವ ಪದ್ಧತಿ ಜಾರಿಗೆ ತರಬೇಕು. –ತನ್ವೀರ್ ಸೇಠ್

ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಮಾತನಾಡಿ, ಶಿಕ್ಷಣ ಎಂಬುದು ಎಲ್ಲರ ವಿಮೋಚನಾ ಅಸ್ತ್ರ. ನನ್ನ ಮೊದಲ ಗುರು ನನ್ನ ತಾತ . ಕನ್ನಡ ಓದಲು ಬರೆಯಲು ಕಾರಣ ಅವರೇ. ದೇಶ ಕಾಯುವ ಸೈನಿಕ, ಅನ್ನ ಕೊಡುವ ರೈತ, ಆರೋಗ್ಯ ಸುಧಾರಿಸುವ ವೈದ್ಯರು ಮತ್ತು ಬಾಳಿಗೆ ಬೆಳಕಾಗುವ ಶಿಕ್ಷಕರನ್ನು ಸದಾ ಸ್ಮರಿಸಬೇಕು ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಆರೋಗ್ಯ ಮತ್ತು ಶಿಕ್ಷಣ ಇಲಾಖೆಯಲ್ಲಿರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಈ ವಿಚಾರವನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತಂದಿದ್ದು, ಮೀಸಲಾತಿ ಜಾರಿಯಾದ ನಂತರ ಹುದ್ದೆಗಳನ್ನು ತುಂಬುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ನನ್ನ ವಿದ್ಯಾರ್ಜನೆಗೆ ಸಣ್ಣಪ್ಪ ಎಂಬ ಶಿಕ್ಷಕರು ನೆರವಾದರು. ಮನೆಯಲ್ಲಿ ಕಷ್ಟವಿದ್ದ ಸಂದರ್ಭದಲ್ಲಿ ಶಾಲಾ ಶುಲ್ಕ ಕಟ್ಟಲಾಗದೆ ವಿದ್ಯಾಭ್ಯಾಸ ನಿಲ್ಲಿಸುವಾಗ ಸಣ್ಣಪ್ಪ ಮೇಷ್ಟ್ರು ಶಾಲೆ ಶುಲ್ಕ ಕಟ್ಟಿ ಓದಿಸಿದರು. ಈಗ ನಾನು ಸಮಾಜದಲ್ಲಿ ಒಳ್ಳೆಯ ಸ್ಥಾನಕ್ಕೆ ಬಂದಿದ್ದೇನೆ ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಬಡವನಾಗಿ ಹುಟ್ಟುವುದು ತಪ್ಪಲ್ಲ. ಬಡವನಾಗಿ ಸಾಯುವುದು ತಪ್ಪು ಎಂದಿದ್ದರು. ಈ ಮಾತನ್ನು ಶಿಕ್ಷಕರು ಅನುಷ್ಠಾನಕ್ಕೆ ತರಲು ಉತ್ತಮ ಶಿಕ್ಷಣ ನೀಡಬೇಕು. ಐಎಎಸ್, ಕೆಎಎಸ್ ಸೇರಿ ಉನ್ನತ ಮಟ್ಟಕ್ಕೆ ವಿದ್ಯಾರ್ಥಿಗಳನ್ನು ಏರಿಸುವುದು ಶಿಕ್ಷಕರೇ ಎನ್ನುವುದನ್ನು ಮರೆಯಬಾರದು. ಶಿಕ್ಷಕರು ಶಿಕ್ಷಣದ ಜೊತೆಗೆ ಸಂಸ್ಕೃತಿ ಕಲಿಸುತ್ತಾರೆ. ಮಕ್ಕಳ ಮೊಬೈಲ್ ಬಳಕೆಯನ್ನು ಬಿಡಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಅಲ್ಲದೆ, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜವರೇಗೌಡ, ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ. ಸೋಮೇಗೌಡ ಇನ್ನಿತರರು ಉಪಸ್ಥಿತರಿದ್ದರು.

## ನಾಳೆ 'ಈ ಸಮಯ ಸಂಗೀತಮಯ' ಚಿತ್ರ ಗೀತೆಗಳ ರಸಮಂಜರಿ

ಮೈಸೂರು, ಸೆ.6–ಮೈಸೂರಿನ ಶ್ರೀ ಸ್ವರಮಾಧುರ್ಯ ಗಾನ ಬಳಗ ಹಾಗೂ ವಿದ್ಯುಲ್ಲಹರಿ ಸಂಯುಕ್ತಾಶ್ರಯದಲ್ಲಿ ಗಾಯಕ ಡಾ.ಎ.ಡಿ.ಶ್ರೀನಿವಾಸನ್ ಸಾರಥ್ಯದಲ್ಲಿ 'ಈ ಸಮಯ ಸಂಗೀತಮಯ' ಶೀರ್ಷಿಕೆಯಡಿಯಲ್ಲಿ ಸೆ.8ರಂದು ಸಂಜೆ 5 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳು ಚಲನಚಿತ್ರಗಳ ನೈಜ ವಾದ್ಯ ಗೋಷ್ಠಿಯೊಂದಿಗೆ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ.

## ಎಂ.ಬಿ.ಮಂಜೇಗೌಡರಿಗೆ ಅಭಿನಂದನೆ...



ಮೈಸೂರಿನಲ್ಲಿ ಶನಿವಾರ ನಡೆದ ಹೆಸರಾಂತ ರೈಲ್ವೆ ಕೋ–ಆಪರೇಟಿವ್ ಬ್ಯಾಂಕಿನ 105ನೇ ಶತಮಾನೋತ್ಸವದ ಸಮಾರಂಭದಲ್ಲಿ ಮಾಜಿ ಸಚಿವರೂ ಆದ ಹಿರಿಯ ಶಾಸಕರಾದ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಬ್ಯಾಂಕಿನ ಅಧ್ಯಕ್ಷ ಎಂ.ಬಿ.ಮಂಜೇಗೌಡ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ, ಎಂ.ಪ್ರಮಿಳಾ, ಹೆಚ್.ಹರೀಶ್‌ಕುಮಾರ್, ಕೆ.ಗಿರೀಶ್, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 9 ರಿಂದ.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಬಸವ ಅಕ್ಕ ಅಕಾಡೆಮಿ, ಬೆಂಗಳೂರು :** ಉಚಿತ ಔಷಧರಹಿತ ಬಣ್ಣ ಚಿಕಿತ್ಸೆ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಬಸವ ಅಕ್ಕ ಅಕಾಡೆಮಿ ಅಧ್ಯಕ್ಷ ಡಾ. ಕೆ. ಬಸವರಾಜು, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಇ. ಚೇತನ್, ಪಾಲಿಕೆ ಮಾಜಿ ಸದಸ್ಯ ಚನ್ನಪ್ಪ, ಬಿಜೆಪಿ ಮುಖಂಡ ರಾಕೇಶ್, ಸ್ಥಳ: ನಂ. 122/ಎ, ಆದಿಚುಂಚನಗಿರಿ ರಸ್ತೆ, ಹೊಸ ನ್ಯಾಯಾಲಯದ ಎದುರು, ಕೆ.ಜಿ. ಕೊಪ್ಪಲು, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಸೋಂಕು ಮತ್ತು ಕಣ್ಣಿನಲ್ಲಿ ಮಾಂಸ ಬೆಳವಣಿಗೆ ಶಿಬಿರ–ಕಣ್ಣು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ಸೋರುವುದು, ಕಣ್ಣು ತುರಿಸುವುದು, ಶುಷ್ಕ ನೇತ್ರ, ಆಭರಣ ಮತ್ತು ಸೌಂದರ್ಯವರ್ಧಕಗಳಿಂದ ಆಗಿರುವ ಚರ್ಮದ ಅಲರ್ಜಿ ಮತ್ತು ಚರ್ಮಕ್ಕೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ, ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಹುಲಿಕಾಡು ರೈತ ಕಂಪನಿ :** ಸೊಪ್ಪು ಮೇಳ, ಸೊಪ್ಪು ತಿಂದವರಿಗಿಲ್ಲ ಮುಪ್ಪು, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.


■ **ಮೈಸೂರು ಬೃಂದಾವನ ಸ್ಕೈ ಟ್ರಸ್ಟ್:** ಗುರು ವೇದಾದ್ರಿ ಮಹರ್ಷಿಯವರ ಧರ್ಮಪತ್ನಿ ಮಾತೆ ಲೋಗಂಬಾಳ್ ಅವರ 11ನೇ ಜನ್ಮ ಶತಮಾನೋತ್ಸವ ಅಂಗವಾಗಿ ಪ್ರಶಂಸೆಯ ದಿನ ಕಾರ್ಯಕ್ರಮ, ಮುಖ್ಯ ಅತಿಥಿಗಳು: ವಿಶ್ವ ಸಮುದಾಯ ಸೇವಾ ಸಂಘದ ಪ್ರಾಧ್ಯಾಪಕ ಕೆ.ಎಸ್. ಪುಷ್ಪಲತಾ, ಟ್ರಸ್ಟ್ ಅಧ್ಯಕ್ಷ ಬಿ.ಪಿ.ಕಾಂತರಾಜು, ಕಾರ್ಯದರ್ಶಿ ಶ್ರೀನಿವಾಸ್ ಅಯ್ಯರ್, ಸಂಸ್ಥಾಪಕ ಡಿ.ಜಿ.ಪ್ರಭಾಕರ್, ಸ್ಥಳ: ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್, ಗೋಕುಲಂ 2ನೇ ಹಂತ, ಬೆಳಗ್ಗೆ 10 ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಯುವ ಸೌರಭ –ನೂತನ ಮಾಲಿಕೆ, ಮುಖ್ಯ ಅತಿಥಿಗಳು: ವೇಣುವಾದಕ ವಿದ್ವಾನ್ ಡಾ.ಸಿ.ಎ.ಶ್ರೀಧರ್, ವಿದುಷಿ ಹರ್ಷಿತಾ ವಿದ್ಯಾ ಅವರಿಂದ ಗಾಯನ, ವಿದ್ವಾನ್ ಕೃತಿಕ್ ಕೌಶಿಕ್–ವಯೋಲಿನ್, ವಿದ್ವಾನ್ ಸುನೀಲ್ ಸುಬ್ರಹ್ಮಣ್ಯ–ಮೃದಂಗ, ವಿದ್ವಾನ್ ಸುಮಧುರ್ ಅನೂರ್–ಖಂಜಿರ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ:** ಶರಣ ಸಂಗಮ–309, ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಜಯಂತಿ ಮಹೋತ್ಸವ, ಭಾವಸಂಗಮದ ವನಿತೆಯರಿಂದ ವೃಂದ ಗಾಯನ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–103, ತಿಂಗಳ ಸಾಧಕರು ರಂಗನಾಥ್ ಮೈಸೂರು, ಉದ್ಘಾಟನೆ: ಹಿರಿಯ ಛಾಯಾಗ್ರಾಹಕ ಬಿ.ಎಸ್. ರಾಜಾರಾಂ, ಮುಖ್ಯ ಅತಿಥಿಗಳು: ಕವಯತ್ರಿ ಡಾ.ಲತಾ ರಾಜಶೇಖರ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಹಾಗೂ ಜೈಭೀಮ್ ಸಾಮಾಜಿಕ ಪರಿವರ್ತನಾ ವೇದಿಕೆ :** 'ಒಳಮೀಸಲಾತಿ ಒಂದು ಕುತಂತ್ರ ಮತ್ತು ಬಲಗೈ ಸಮುದಾಯದ ಸಾಂವಿಧಾನಿಕ ಹಕ್ಕು ಬಾಧ್ಯತೆಗಳ ರಕ್ಷಣೆ' ಕುರಿತು ದುಂಡುಮೇಜಿನ ಸಭೆ, ಮುಖ್ಯ ಅತಿಥಿಗಳು : ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಆರ್.ರಾಜು, ಮೈಸೂರು ವಿವಿ ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸಹಾಯಕ ಪ್ರಾಧ್ಯಾಪಕ ಡಾ.ಚಂದ್ರಶೇಖರ ಐಜೂರು, ಒಳಮೀಸಲಾತಿ ಜಾಗೃತಿ ವೇದಿಕೆ ಸಂಚಾಲಕ ನವೀನ್ ಮನಿಯ, ಲೇಖಕ ಸಿ.ಹರಕುಮಾರ್, ದಲಿತ ಮುಖಂಡ ಹರಿಹರ ಆನಂದಸ್ವಾಮಿ, ಸ್ಥಳ: ಲೋಕೋಪಯೋಗಿ ಇಲಾಖೆ ಅತಿಥಿ ಗೃಹ, ನಜರ್‌ಬಾದ್, ಬೆಳಗ್ಗೆ 11ಕ್ಕೆ.



### ಇಂದಿನ ಪಂಚಾಂಗ

**07.09.2025 ಭಾನುವಾರ, ಮಳೆ ನಕ್ಷತ್ರ: ಪುಬ್ಬ 31.08.2025ರಿಂದ 13.09.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಶತಭಿಷ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ**

■ **ಕೌಸ್ತುಭ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ವಿ. ಕೃಷ್ಣ, ಸ್ಥಳ: ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ :** ಡಿ. ದೇವರಾಜ ಅರಸು ಜನ್ಮ ದಿನೋತ್ಸವ ಆಚರಣೆ, ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಕರಾಮುವಿವಿ ನಿವೃತ್ತ ಡೀನ್ ವಿಕ್ರಂ ಚದುರಂಗ, ಅತಿಥಿಗಳು: ಶ್ರೀ ಗುರು ವೆಂಕಪ್ಪ ಒಡೆಯರು ಸ್ವಾಮಿಗಳು, ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ಅಧ್ಯಕ್ಷತೆ: ಕೆಯುಎಂಸಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್, ಸ್ಥಳ: ಅರಸು ಜಮಖಾನ ಕ್ಲಬ್ ಆವರಣ, ಗೋಕುಲಂ 3ನೇ ಹಂತ, ಬೆಳಗ್ಗೆ 11ಕ್ಕೆ.

■ **ದಸರಾ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು :** ಟೆರಾಕೋಟಾ ಭಿತ್ತಿ ಶಿಲ್ಪಕಲಾ ಶಿಬಿರ, ಸ್ಥಳ: ಕಾವಾ ಕಾಲೇಜು ಆವರಣ, ಬೆಳಗ್ಗೆ 11.30 ರಿಂದ.

■ **ವಿದ್ಯಾಭಾರತಿ ಕರ್ನಾಟಕ :** ಜ್ಞಾನ ವಿಜ್ಞಾನ ಮೇಳದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ವಿದ್ಯಾಭಾರತಿ ಕರ್ನಾಟಕ ಪ್ರಾಂತ ಅಧ್ಯಕ್ಷ ಪರಮೇಶ್ವರ ಹೆಗಡೆ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳು, ಮಧ್ಯಾಹ್ನ 1 ಗಂಟೆಗೆ.

■ **ಪೀಪಲ್ಸ್ ಲೀಗಲ್ ಫೋರಂ ಮತ್ತು ಕೆಎಸ್‌ಐಸಿ ಹೊರಗುತ್ತಿಗೆ ಮತ್ತು ಇತರೆ ನೌಕರರ ಸಂಘ :** ಮತಗಳ್ಳತನ ಮತ್ತು ಪ್ರಜಾಪ್ರಭುತ್ವದ ಸವಾಲುಗಳು ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ: ಸಾಮಾಜಿಕ ಚಿಂತಕ ಡಾ. ಸಾರಾ ಹಕ್, ಪ್ರಾಸ್ತಾವಿಕ ನುಡಿ: ಪೀಪಲ್ಸ್ ಲೀಗಲ್ ಫೋರಂ ನಿರ್ದೇಶಕ ಪಿ.ಪಿ.ಬಾಬುರಾಜ್, ಉಪಸ್ಥಿತರು : ಸಂಘದ ಅಧ್ಯಕ್ಷ ಬಿ. ವಿಜಯೇಂದ್ರ, ವಿಷಯ ಮಂಡನೆ : ಚಿಂತಕ ಶಿವಸುಂದರ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ರಿಂದ.

■ **ನೂಪುರ ನೃತ್ಯಾಲಯ:** ನೂಪುರ ನೃತ್ಯೋತ್ಸವ, ಮುಖ್ಯ ಅತಿಥಿಗಳು: ನೃತ್ಯಗಿರಿ ಪ್ರದರ್ಶಕ ಕಲೆಗಳ ಕೇಂದ್ರದ ನಿರ್ದೇಶಕ ಡಾ. ಕೃಪಾ ಪಡ್ಕೆ, ವಿದ್ವಾನ್ ಕೆ.ಗುರುಪ್ರಸಾದ್, ಶ್ರೀ ಗಣೇಶ ಸಂಗೀತ ನೃತ್ಯಾಲಯ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ನಿರ್ದೇಶಕ ನಾಟ್ಯ ವಿದುಷಿ ಆರತಿ ಅರ್ಜುನ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ದಿ ಅನಾಥಾಲಯ:** ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಪ್ರಶಸ್ತಿ ಮತ್ತು ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿ ಪ್ರದಾನ ಸಮಾರಂಭ, ದಿಕ್ಸೂಚಿ ಭಾಷಣ: ಆಧ್ಯಾತ್ಮಿಕ ಪ್ರವಚನಕಾರ ಡಾ.ವಿ.ಬಿ.ಆರತಿ, ಅಧ್ಯಕ್ಷತೆ: ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್, ಸ್ಥಳ: ತಾತಯ್ಯನವರ ಅನಾಥಾಲಯ ಆವರಣ, ಎನ್.ಎಸ್. ರಸ್ತೆ, ಸಂಜೆ 4ಕ್ಕೆ.

■ **ಧಮ್ಮದೀಪ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್ :** ಬುದ್ಧ ಬೆಳದಿಂಗಳು ದಶಮಾನೋತ್ಸವ ಸಂಭ್ರಮ, ಧ್ಯಾನ–ಗಾಯನ–ವಿಚಾರ ಕಾರ್ಯಕ್ರಮ, ಸಾನ್ನಿಧ್ಯ : ಭಂತೆ ಮನೋರಕ್ಷಿತ, ಭಂತೆ ಸೋಬಾನ್, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ನಟ ಚೇತನ್ ಅಹಿಂಸಾ, ಉಪಸ್ಥಿತರು : ಮಾಜಿ ಮೇಯರ್ ಪುರುಷೋತ್ತಮ್, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಸ್ಥಳ: ಗೌತಮಬುದ್ಧ ಉದ್ಯಾನವನ, ಮಾನಸಗಂಗೋತ್ರಿ, ಸಂಜೆ 5ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 64ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಗಮಕ ವಾಚನ ಕಾರ್ಯಕ್ರಮ, ಕಾವ್ಯ : ಕುಮಾರವ್ಯಾಸ ಭಾರತ–ಭೀಷ್ಮ ಭಕ್ತಿ ಪ್ರಸಂಗ, ವಾಚನ : ವಿದುಷಿ ವಿದುಷಿ ಗಂಗಮ್ಮ ಕೇಶವಮೂರ್ತಿ, ವ್ಯಾಖ್ಯಾನ: ವಿದುಷಿ ಡಾ. ಜ್ಯೋತಿಶಂಕರ್, ಸಂಜೆ 6.45 ರಿಂದ ವಿದ್ವಾನ್ ವಿನಯ್ ಶರ್ವ ಅವರಿಂದ ಗಾಯನ, ವಿದ್ವಾನ್ ಮನ್ನಾರ್ಗುಡಿ ವಿ. ಶಂಕರರಾಮನ್–ಹಾರ್ಮೋನಿಯಂ, ವಿದ್ವಾನ್ ಅಮಿತ್ ನಾಡಿಗ್–ಕೊಳಲು, ವಿದ್ವಾನ್ ಉಮಾಯಾಳಪುರಂ ಕೆ. ಶಿವರಾಮನ್–ಮೃದಂಗ, ವಿದ್ವಾನ್ ಭಾರದ್ವಾಜ್ ಆರ್. ಸಾತವಲ್ಲಿ–ಮೋರ್ಚಿಂಗ್, ವಿದ್ವಾನ್ ಅರುಣ್‌ಕುಮಾರ್–ರಿದಂ ಪ್ಯಾಡ್, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಪರಮಹಂಸಾನಂದ ಅವರಿಂದ ಭಗವದ್ಗೀತೆ ದೃಷ್ಟಿಯಲ್ಲಿ ಚಿತ್ತಶುದ್ಧಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯ ಕಾರ್ಯಕ್ರಮ, ಅಮೋಘ್ ಚಕ್ರವರ್ತಿ ಅವರಿಂದ ದೇಶಿಕಮಂಗಳಮ್ ಕುರಿತು ಉಪನ್ಯಾಸ, ಸ್ಥಳ: ಪರಕಾಲ ಮಠ, ಜಗನ್ಮೋಹನ ಅರಮನೆ ಸಮೀಪ, ಸಂಜೆ 6ಕ್ಕೆ

■ **ರಂಗಾಯಣ:** ಬೆಳಗ್ಗೆ 11ರಿಂದ ಶ್ರೀ ಕಾಲಭೈರವ ಜೋಗಿ ಕಲಾತಂಡ, ಹೊಸೂರು ಸಾಗರ ತಾಲೂಕಿನ ಜೋಗಿ ಸಮುದಾಯದ ಕಲಾವಿದರಾದ ಗುಡ್ಡಪ್ಪ ಜೋಗಿ ಮತ್ತು ಸಂಗಡಿಗರೊಂದಿಗೆ ಜೋಗಿ ಸಮುದಾಯ ಮತ್ತು ಜೋಗಿ ಪದ ಕುರಿತು ಮಾತುಕತೆ, ಸಂಜೆ 6.30ಕ್ಕೆ ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ಶ್ರೀ ಗುಡ್ಡಪ್ಪ ಜೋತಿ ತಂಡದ ಕಲಾವಿದರಿಂದ ಲಕ್ಷಾಪತಿ ರಾಜನ ಕತೆ ಜೋಗಿ ಪದ ಕಾರ್ಯಕ್ರಮ, ಸ್ಥಳ: ರಂಗಾಯಣ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ, ಮುಖ್ಯ ಅತಿಥಿಗಳು : ಹಿರಿಯ ರಂಗ ನಿರ್ದೇಶಕ ಎಚ್. ಜನಾರ್ಧನ್, ರಾಜಶೇಖರ ಕದಂಬ, ಹೆಚ್.ಎಸ್. ಸುರೇಶ್ ಬಾಬು, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ.

**ಸರಗೂರು ತಾಲೂಕಿನಲ್ಲಿಂದು**

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್, ಪಡುವಲು ಶ್ರೀ ವಿರಕ್ತಮಠ, ಬಿಡುಗಲು, ತಾಲೂಕು ಶರಣ ಸಾಹಿತ್ಯ ಪರಿಷತ್ :** ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಜಯಂತಿ ಅಂಗವಾಗಿ ದತ್ತಿ ಉಪನ್ಯಾಸ, ಸಾನ್ನಿಧ್ಯ: ಶ್ರೀ ಮಹದೇವ ಸ್ವಾಮೀಜಿ, ಶ್ರೀ ಅಡವಿ ಸ್ವಾಮೀಜಿ, ಉದ್ಘಾಟನೆ : ಲಿಂಗಾಯತ ಮಹಾಸಭಾ ನಿರ್ದೇಶಕ ಯು.ಎಸ್. ಬಸವರಾಜು, ಅಧ್ಯಕ್ಷತೆ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಮುಖ್ಯ ಅತಿಥಿಗಳು : ಮೈಮುಲ್ ನಿರ್ದೇಶಕ ಬಿ.ಎನ್. ಸದಾನಂದ, ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ. ಗುರುಸ್ವಾಮಿ, ಸ್ಥಳ: ಪಡುವಲು ಶ್ರೀ ವಿರಕ್ತ ಮಠ, ಬಿಡುಗಲು, ಸರಗೂರು ತಾ., ಬೆಳಗ್ಗೆ 11.30ಕ್ಕೆ.

### ಮೈಸೂರು ಆಕಾಶವಾಣಿ




**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ವ್ಯಾಖ್ಯಾನ–ಪ್ರೊ.ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು – ಸುನೀತಾ ಅನಂತಸ್ವಾಮಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಆತ್ಮಹತ್ಯೆ ತಡೆ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಆತ್ಮಹತ್ಯೆ ತಡೆಯೋಣ ಆತ್ಮವಿಶ್ವಾಸ ಬೆಳೆಸೋಣ ಕುರಿತು ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ ಮಾನಸಿಕ ಆರೋಗ್ಯ ತಜ್ಞರಾದ ಡಾ.ಗಜಾನನ ಸುಭಾಷಿತ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH-TRISH and Balty boy- ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಪಾಂಡವಪುರದ ಎಸ್.ಟಿ.ಜಿ ಪಬ್ಲಿಕ್ ಶಾಲೆಯ ಮಕ್ಕಳಿಂದ ಗೀತಗಾಯನ ಕಾರ್ಯಕ್ರಮ, 11.00 ಮಿಶ್ರಮಾಧುರ್ಯ

**ಮಧ್ಯಾಹ್ನ:** 12.05 ವನಿತಾ ವಿಹಾರ-ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹದ ಸಂದರ್ಭದಲ್ಲಿ ಸಮತೋಲನ ಆಹಾರ ಕುರಿತು ಆಹಾರ ತಜ್ಞೆ ಬಿ.ಸಿ.ವಿಶಾಖ ಅವರೊಡನೆ ಸಂದರ್ಶನ, ಸಂದರ್ಶಕರು–ಕೆ.ಎಲ್. ರಾಜೇಶ್ವರಿ, 12.35 ದೇವರನಾಮ, 12.45 ಜನಪದ ಸಂಗೀತ:ಕೆಂಪಮ್ಮ ಮತ್ತು ಸಂಗಡಿಗರಿಂದ ಸಿದ್ದಲಿಂಗೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಕೆ.ಜಿ.ಕನಕಲಕ್ಷ್ಮಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಅರುಣರಾಗ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ ಪ್ರಸಂಗ– ಮಹಿರಾವಣ ಕಾಳಗ, ಪ್ರಸ್ತುತಿ–ಬೆಟ್ಟಂಪಾಡಿಯ ಕರ್ನಾಟಕ ಯಕ್ಷಭಾರತಿ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯ ಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ವಿಸ್ಮಯಕಾರಿ ಕೀಟ ಪ್ರಪಂಚ ಈ ಕುರಿತು ಮಾತನಾಡುತ್ತಾರೆ ಡಾ.ಎ.ಪ್ರಭುರಾಜ್, 8.00 ಫಸ್ಟ್ ಫಿಲ್ಮ್ (First Film)- Opinion based programme, ಪ್ರಸ್ತುತಿ: ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಸುಮಿತ್ರ, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ, ಮೌಸುಮಿ ಕುಂಡು ಠುಮ್ರಿ ದಾದ್ರ ಗಾಯನ

# ಹಾಲು ಉತ್ಪಾದನೆಯಲ್ಲಿ ರಾಜ್ಯದಲ್ಲಿ ಅಗ್ರಸ್ಥಾನಕ್ಕೇರುವ ವಿಶ್ವಾಸ

**● ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವಾರ್ಷಿಕ ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ವಿಶ್ವಾಸ ● ಪ್ರತಿ ಗ್ರಾಮದ ಹಾಲು ಉತ್ಪಾದಕರ ಸಂಘಗಳು ಸ್ವಂತ ಕಟ್ಟಡ ಹೊಂದಲು ಅನುದಾನ ● ಮುಂದಿನ ದಿನಗಳಲ್ಲಿ ಪ್ರತಿದಿನ ಹಾಲು ಉತ್ಪಾದಕರ ಖಾತೆಗೆ ಹಣ ಸಂದಾಯ ವ್ಯವಸ್ಥೆ ಭರವಸೆ**



ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಮೈಮುಲ್)ದ ವಾರ್ಷಿಕ ಸಭೆಯು ಪಡುವಾರಹಳ್ಳಿಯ ವಿನಾಯಕ ಕನ್ವೆಷನ್ ಹಾಲ್‌ನಲ್ಲಿ ಶನಿವಾರ ನಡೆಯಿತು.

ಮೈಸೂರು, ಸೆ.6– ಹಾಲು ಉತ್ಪಾದನೆಯಲ್ಲಿ ಮೈಸೂರು ಜಿಲ್ಲೆ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದ್ದು, ಅಗ್ರಸ್ಥಾನಕ್ಕೇರುವ ನಿಟ್ಟಿನಲ್ಲಿ ಶ್ರಮಿಸುವುದಾಗಿ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಮೈಮುಲ್)ದ ಅಧ್ಯಕ್ಷ ಆರ್.ಚೆಲುವರಾಜು ಹೇಳಿದರು.

ನಗರದ ಪಡುವಾರಹಳ್ಳಿಯ ವಿನಾಯಕ ಕನ್ವೆಷನ್ ಹಾಲ್‌ನಲ್ಲಿ ನಡೆದ ಒಕ್ಕೂಟದ 2024–25ನೇ ಸಾಲಿನ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದ ಒಟ್ಟು ಹಾಲು ಉತ್ಪಾದನೆಯಲ್ಲಿ ಶೇ.10ರಷ್ಟು ಪಾಲು ಮೈಸೂರು ಜಿಲ್ಲೆಯದ್ದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ನಂತರ ಮೈಸೂರು ಎರಡನೇ ಸ್ಥಾನದಲ್ಲಿದೆ. ಅಗ್ರಸ್ಥಾನಕ್ಕೇರುವ ನಿಟ್ಟಿನಲ್ಲಿ ಒಕ್ಕೂಟ ಶ್ರಮಿಸಬೇಕಿದೆ ಎಂದರು.

ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಹೆಚ್ಚಿರುವ ಹಿನ್ನೆಲೆಯಲ್ಲಿ 4.5 ಲಕ್ಷ ಲೀಟರ್ ಹಾಲು ಮಾರಾಟ ಮಾಡಿ, ಉಳಿದ ಹಾಲನ್ನು ಪೌಡರ್ ಆಗಿ ಪರಿವರ್ತಿಸಲಾಗುತ್ತಿದೆ. ಇದಕ್ಕಾಗಿ ಪ್ರತಿವರ್ಷ 25 ಕೋಟಿ ವೆಚ್ಚ ಆಗುತ್ತಿದೆ. ಆದ್ದರಿಂದ ನಮ್ಮಲ್ಲೇ ಪೌಡರ್ ಪ್ಲಾಂಟ್, ಚಾಕ್ಲೆಟ್, ಪನ್ನೀರ್ ಉತ್ಪಾದನೆ ಘಟಕ ಮಾಡುವ ಗುರಿಯನ್ನು ಆಡಳಿತ ಮಂಡಳಿ ಹೊಂದಿದೆ. ಪ್ರತಿ ಗ್ರಾಮದ ಹಾಲು ಉತ್ಪಾದಕರ ಸಂಘವೂ ಸ್ವಂತ ಕಟ್ಟಡ ಹೊಂದಬೇಕೆಂಬ ಉದ್ದೇಶದಿಂದ ಅನುದಾನ ನೀಡಲಾಗುತ್ತಿದೆ ಎಂದು ತಿಳಿಸಿದರು.

ತಮಿಳುನಾಡಿನ ಚೆನ್ನೈನಲ್ಲಿ 50 ಸಾವಿರ ಲೀಟರ್ ಹಾಲು ಮಾರಾಟ ಮಾಡಲಾಗುತ್ತಿದ್ದು, ಈ ಪ್ರಮಾಣವನ್ನು 1 ಲಕ್ಷ ಲೀಟರ್‌ಗೆ ಏರಿಸುವ ಗುರಿ ಹೊಂದಿದ್ದೇವೆ. ಕೇರಳದಲ್ಲೂ 17 ಸಾವಿರ ಲೀಟರ್ ಮಾರಾಟ ಮಾಡಲಾಗುತ್ತಿದೆ. ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಕಲ್ಪಿಸಿ, ಜಿಲ್ಲಾ ಮಕ್ಕಳಿಗೆ ಮಾತ್ರ ಅವಕಾಶ ನೀಡಲು ಚಿಂತಿಸಲಾಗಿದೆ. ಉಪಕಸುಬು ಆಗಿದ್ದ ಹೈನುಗಾರಿಕೆ ಈಗ ಉದ್ಯಮವಾಗಿ ಬೆಳೆದಿದೆ. ಮುಂದಿನ ದಿನಗಳಲ್ಲಿ ಹೈನೋದ್ಯಮಿಗಳಿಗೂ ಉತ್ತಮ ದಿನಗಳು ಬರಲಿವೆ. ಮುಂದಿನ ದಿನಗಳಲ್ಲಿ ಹಾಲು ಉತ್ಪಾದಕರ ಖಾತೆಗಳಿಗೆ ನಿತ್ಯ ಹಣ ಸಂದಾಯ ಮಾಡುವ ವ್ಯವಸ್ಥೆ ತರಲಾಗುವುದು ಎಂದರು.

ಸದಸ್ಯರ ಮರಣ ನಿಧಿಯನ್ನು 15 ಸಾವಿರ ನಿಗದಿಪಡಿಸಿದ್ದು, 60 ವರ್ಷ ಮೇಲ್ಪಟ್ಟವರಾದರೆ 20 ಸಾವಿರ ರೂ. ನೀಡಲು ತೀರ್ಮಾನಿಸಲಾಗಿದೆ. ಪ್ರತಿಯೊಬ್ಬರಿಗೂ 1 ಲಕ್ಷ ರೂ. ಮೊತ್ತದ ವಿಮೆ ಮಾಡಿಸಲು ಆಡಳಿತ ಮಂಡಳಿ ತೀರ್ಮಾನಿಸಿದೆ. ರಾಸುಗಳಿಗೂ ವಿಮೆ ಮಾಡಿಸುವುದನ್ನು ಕಡ್ಡಾಯಗೊಳಿಸಿದ್ದು, ವಿಮೆ ಮೊತ್ತ ಹೆಚ್ಚಳ ಸಂಬಂಧ ಚರ್ಚಿಸಿ ತೀರ್ಮಾನಿಸಲಾಗುವುದು. ಸದ್ಯ ಎರಡು ವರ್ಷಕ್ಕೊಮ್ಮೆ ಇರುವ ವಿಮೆ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಪಡಿಸಿ, ಗೋವಿನ ಬೆಲೆಗೆ ಅನುಸಾರ ವಿಮೆ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಜಾನುವಾರು ಕೊಠಡಿಗಳಲ್ಲಿ ಬಳಸುವ ಮ್ಯಾಟ್‌ಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಸದ್ಯ 2 ಸಾವಿರ ಮ್ಯಾಟ್ ಹಂಚಲಾಗಿದೆ. ಇನ್ನೂ 7 ಸಾವಿರ ಮ್ಯಾಟ್‌ಗಳನ್ನು ಶೀಘ್ರದಲ್ಲೇ ವಿತರಿಸಲಾಗುವುದು. ಚಾಪ್ ಕಟ್ಟರ್‌ಗಳು ಲಭ್ಯವಿದ್ದು ಅಗತ್ಯವಿದ್ದವರು ಕೊಳ್ಳಬಹುದು ಎಂದು ತಿಳಿಸಿದರು.

**ಪ್ರಶಸ್ತಿ ಪ್ರದಾನ:** ಇದೇ ವೇಳೆ ಉತ್ತಮ ಮಹಿಳಾ ಸಂಘ ಪ್ರಶಸ್ತಿಯನ್ನು ಮೈಸೂರು ತಾಲೂಕು ಕೆಂಪೇಗೌಡನಹುಂಡಿಯ ಆರ್.ಮಂಗಳ, ನಂಜನಗೂಡು ತಾಲೂಕು ಕೃಷ್ಣರಾಜಪುರ ಮಂಜುಳ, ತಿ.ನರಸೀಪುರ ತಾಲೂಕು ಮುಡುಕನಪುರ ರಾಜಮ್ಮಣಿ, ಹುಣಸೂರು ಅಗ್ರಹಾರದ ಕೆಂಪಮ್ಮಣಿ, ಕೆ.ಆರ್.ನಗರದ ಶೀಗವಾಳು ಧನಲಕ್ಷ್ಮೀ, ಹೆಚ್.ಡಿ.ಕೋಟೆ ಕೊತ್ತೇಗಾಲ ಜ್ಯೋತಿ, ಪಿರಿಯಾಪಟ್ಟಣ ತಾಲೂಕು ಮಲಗನಕೆರೆ ಸಂಘಕ್ಕೆ ಪ್ರದಾನ ಮಾಡಲಾಯಿತು. ಹೀಗೆಯೇ ಅತೀಹೆಚ್ಚು ಹಾಲು ಸರಬರಾಜು ಮಾಡಿದ ಬಂಡಿಪಾಳ್ಯ ಬಸವರಾಜು, ದೇವನೂರು ಸುಹಾಸ್, ತುರಗನೂರು ಡಿ.ಪಿ.ಅಶೋಕ್ ಕುಲಕರ್ಣಿ, ಬಸವನಹಳ್ಳಿ ಸುರೇಶ್ ಬಾಬು, ಗುಳವಿನ ಅತ್ತೀಗುಪ್ಪೆ ಹನುಮಂತೇಗೌಡ, ಇಂದಿರಾನಗರ ಶಿಜೋಜಾರ್ಜ್, ನವಿಲೂರು ಪಿ.ಡಿ. ಭೂಷಿತ್ ಪ್ರಶಸ್ತಿ ಪಡೆದರು. ಅಲ್ಲದೆ ಉತ್ತಮ ಸೊಸೈಟಿ ಪ್ರಶಸ್ತಿಗೆ ವರಕೂಡಿನ ಪಿ.ಶಂಕರ್, ಸರಗೂರಿನ ಎಂ.ರಾಜೇಶಪ್ಪ, ಜೆ.ರಂಗಸ್ವಾಮಿ, ಮರಳಯ್ಯನ ಕೊಪ್ಪಲು ಬಸವರಾಜು, ನಾರಾಯಣಪುರ ರುದ್ರಸ್ವಾಮಿ, ಜೆ.ಸಿಪಾಳ್ಯದ ದೇವರಾಜ ಅರಸ್, ಆನಂದಗೆರೆ ಅಭಿಲಾಶ್ ಭಾಜನರಾದರು.

ಸಭೆಯಲ್ಲಿ ನಿರ್ದೇಶಕರಾದ ಎ.ಟಿ.ಸೋಮಶೇಖರ, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂ.ಪ್ರಕಾಶ್, ಪಿ.ಎಂ.ಪ್ರಸನ್ನ, ಕೆ.ಈರೇಗೌಡ, ಕೆ.ಎಸ್.ಕುಮಾರ್, ದ್ರಾಕ್ಷಯಿಣಿ ಬಸವರಾಜಪ್ಪ, ಲೀಲಾ ಬಿ.ಕೆ. ನಾಗರಾಜು, ನೀಲಾಂಬಿಕೆ ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಗುರುಸ್ವಾಮಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ ರವಿಕುಮಾರ್, ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್, ಆಡಳಿತ ಮಂಡಳಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

## ವಿದುಷಿ ಭಾರ್ಗವಿ ವಿನೋದ್ ತಂಡದವರಿಂದ ಸಂಗೀತಗಾಯನ



ಮೈಸೂರು, ಸೆ.6–ಮೈಸೂರಿನ ಪರಕಾಲ ಸ್ವಾಮಿ ಮಠದಲ್ಲಿ ಚಾತುರ್ಮಾಸ್ಯ ಅಂಗವಾಗಿ ವಿದುಷಿ ಭಾರ್ಗವಿ ವಿನೋದ್ ನೇತೃತ್ವದ ತಂಡದವರು ಸಂಗೀತಗಾಯನ ಶನಿವಾರ ನಡೆಸಿಕೊಟ್ಟರು. ಬಳಿಕ ನಂತರ ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ಆಶೀರ್ವಾದ ಪಡೆದರು. ಬಳಿಕ ಶ್ರೀಗಳಿಂದ ಸನ್ಮಾನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಶ್ರೀಮಠದ ಶ್ರೀನಿವಾಸ್ ರಾಘವನ್, ಭರತ್, ಆಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮೈಸೂರು ಜಿಲ್ಲಾ ಜಂಟಿ ಕಾರ್ಯದರ್ಶಿ ಟಿ.ಎಸ್ ಅರುಣ್ ಉಪಸ್ಥಿತರಿದ್ದರು.


## 'ಸೂರ್ಯವಂಶಿ' ಖ್ಯಾತಿಯ ಬಾಲಿವುಡ್ ನಟ ಆಶಿಶ್ ವಾರಂಗ್ ನಿಧನ



**ಬೆಂಗಳೂರು:** ಮರಾಠಿ, ಬಾಲಿವುಡ್ ಸಿನಿಮಾಗಳಲ್ಲಿ ಸಕ್ರಿಯರಾಗಿ ನಟಿಸುತ್ತಿದ್ದ, ದೃಶ್ಯಂ, ಸೂರ್ಯವಂಶಿ ಖ್ಯಾತಿಯ ನಟ ಆಶಿಶ್ ವಾರಂಗ್ ನಿಧನರಾಗಿದ್ದಾರೆ. ಅವರಿಗೆ 55 ವರ್ಷ ವಯಸ್ಸಾಗಿತ್ತು.

ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಶುಕ್ರವಾರ ಸಂಜೆ ನಿಧನರಾದರು ಎಂದು ಅವರ ಆಪ್ತರು ಖಚಿತಪಡಿಸಿದ್ದಾರೆ. ಆಶಿಶ್ ಚಿತ್ರರಂಗ ಪ್ರವೇಶಿಸುವ ಮೊದಲು, ಭಾರತೀಯ ವಾಯುಪಡೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿದ್ದರು. ನಂತರ ಸಿನಿಮಾರಂಗಕ್ಕೆ ಬಂದು ಪೋಷಕ ಪಾತ್ರಗಳ ಮೂಲಕ ಗಮನ ಸೆಳೆದರು. ಸೂರ್ಯವಂಶಿ, ದೃಶ್ಯಂ, ಮರ್ದಾನಿ ಸೇರಿದಂತೆ ಹಲವು ಚಿತ್ರಗಳಲ್ಲಿ ಅವರು ಕೆಲಸ ಮಾಡಿದ್ದಾರೆ. 'ಏಕ್ ವಿಲನ್ ರಿಟರ್ನ್ಸ್', ಹಾಗೂ 'ದಿ ಫ್ಯಾಮಿಲಿ ಮ್ಯಾನ್' ವೆಬ್ ಸರಣಿಗಳಲ್ಲಿ ಅವರು ನಟಿಸಿದ್ದರು.

## ಸೈಮಾ ಪ್ರಶಸ್ತಿ ಪ್ರಕಟ: ಸುದೀಪ್ ಅತ್ಯುತ್ತಮ ನಟ, ಉಪೇಂದ್ರ ಅತ್ಯುತ್ತಮ ನಿರ್ದೇಶಕ




ಸುದೀಪ್ ಉಪೇಂದ್ರ ದುನಿಯಾ ವಿಜಯ್

ದುಬೈ, ಸೆ.6– ದಕ್ಷಿಣ ಭಾರತ ಅಂತಾರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ 2025ರಲ್ಲಿ 'ಮ್ಯಾಕ್ಸ್' ಸಿನಿಮಾ ನಟನೆಗೆ ಕಿಚ್ಚ ಸುದೀಪ್ ಅವರಿಗೆ ಅತ್ಯುತ್ತಮ ನಟ ಅವಾರ್ಡ್ ದೊರೆತಿದೆ. ಉಪೇಂದ್ರ ಅವರಿಗೆ 'ಅತ್ಯುತ್ತಮ ನಿರ್ದೇಶಕ' ಪ್ರಶಸ್ತಿ ಸಿಕ್ಕಿದೆ.

ಶುಕ್ರವಾರ ರಾತ್ರಿ ದುಬೈಯಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನೆರವೇರಿದ್ದು, 2024ರಲ್ಲಿ ಬಿಡುಗಡೆಯಾದ ಚಿತ್ರಗಳಿಗೆ ಪ್ರಶಸ್ತಿ ನೀಡಲಾಗಿದೆ. 'ಮ್ಯಾಕ್ಸ್' ಸಿನಿಮಾದಲ್ಲಿ ಸುದೀಪ್ ಅವರು ಪೊಲೀಸ್ ಅಧಿಕಾರಿಯಾಗಿ ಮಿಂಚಿದ್ದರು.

ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ದೊರೆತಿದೆ. ಇನ್ನು, 'ಯುಐ' ನಿರ್ದೇಶನಕ್ಕೆ ಉಪೇಂದ್ರ ಅವರು ಅತ್ಯುತ್ತಮ ನಿರ್ದೇಶಕ ಅವಾರ್ಡ್ ಪಡೆದಿದ್ದಾರೆ. '02' ನಟನೆಗೆ ಆಶಿಕಾ ರಂಗನಾಥ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಸಿಕ್ಕಿದೆ. 'ಭೀಮ' ಸಿನಿಮಾ ನಟನೆಗೆ ದುನಿಯಾ ವಿಜಯ್‌ಗೆ ಅತ್ಯುತ್ತಮ ನಟ (ಕ್ರಿಟಿಕ್ಸ್) ಅವಾರ್ಡ್ ದೊರೆತಿದೆ. 'ಕೃಷ್ಣಂ ಪ್ರಣಯ ಸಖಿ' ಅತ್ಯುತ್ತಮ ಸಿನಿಮಾ ಪ್ರಶಸ್ತಿ ಗಳಿಸಿದೆ.

**ಕನ್ನಡಕ್ಕೆ ಬಂದ ಇತರ ಪ್ರಶಸ್ತಿಗಳು:** ಅತ್ಯುತ್ತಮ ಸಂಗೀತ ಸಂಯೋಜನೆ: ಬಿ. ಅಜನೀಶ್ ಲೋಕನಾಥ್ (ಮ್ಯಾಕ್ಸ್), **ಅತ್ಯುತ್ತಮ ಹಾಸ್ಯನಟ:** ಜಾಕ್ ಸಿಂಗಂ (ಭೀಮ), **ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿ:** ಸಂದೀಪ್ ಸುಂಕದ್ (ಶಾಖಾಹಾರಿ), **ಅತ್ಯುತ್ತಮ ಚೊಚ್ಚಲ ನಟ–** ಸಮರ್ಜಿತ್ ಲಂಕೇಶ್ (ಗೌರಿ), **ಭರವಸೆ ಮೂಡಿಸಿದ ಹೊಸ ಪ್ರತಿಭೆ–** ಸನ್ಯಾ ಅಯ್ಯರ್ (ಗೌರಿ), **ಅತ್ಯುತ್ತಮ ಚೊಚ್ಚಲ ನಟಿ–** ಅಂಕಿತಾ ಅಮರ್ (ಇಬ್ಬನಿ ತಬ್ಬಿದಾ ಇಳೆಯಲಿ), **ಅತ್ಯುತ್ತಮ ಸಾಂಗ್ ಡಿಸೈನ್–** ಇಮ್ರಾನ್ ಎಸ್ ಸರ್ಧಾರಿಯಾ, **ಅತ್ಯುತ್ತಮ ಛಾಯಾಗ್ರಹಣ:** ಶ್ರೀವತ್ಸನ್ ಸೆಲ್ವರಾಜನ್ (ಇಬ್ಬನಿ ತಬ್ಬಿದ ಇಳೆಯಲಿ), **ಅತ್ಯುತ್ತಮ ಹಿನ್ನೆಲೆ ಗಾಯಕಿ:** ಐಶ್ವರ್ಯ ರಂಗರಾಜನ್, **ಅತ್ಯುತ್ತಮ ಗಾಯಕ:** ಜಸ್ಕರನ್, **ಅತ್ಯುತ್ತಮ ಚಿತ್ರ ಸಾಹಿತಿ –** ಡಾ. ವಿ. ನಾಗೇಂದ್ರ ಪ್ರಸಾದ್.

**ದುನಿಯಾ ವಿಜಯ್ ಆಕ್ರೋಶ:** ಸೈಮಾ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮತ್ತೆ ಕನ್ನಡಿಗರಿಗೆ ಅವಮಾನ ಮಾಡಲಾಗಿದೆ ಎಂದು ದುನಿಯಾ ವಿಜಯ್ ಆಕ್ರೋಶ ಹೊರಹಾಕಿದ್ದಾರೆ. ದುಬೈನಲ್ಲಿ ನಡೆದ ಸಮಾರಂಭದಲ್ಲಿ ಬೇಕು ಅಂತಲೇ ಕನ್ನಡಿಗರಿಗೆ ಕೊನೆಯಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂದು ವಿಜಿ ಆರೋಪಿಸಿದ್ದಾರೆ. ಭೀಮಾ ಚಿತ್ರಕ್ಕಾಗಿ ಪ್ರಶಸ್ತಿ ಸ್ವೀಕರಿಸಿದ ನಟ ದುನಿಯಾ ವಿಜಯ್ ವೇದಿಕೆಯಲ್ಲೇ ಆಯೋಜಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಎಲ್ಲಾ ಭಾಷೆಯ ಸಿನಿಮಾ ನಟ, ನಟಿಯರಿಗೆ ಹಾಗೂ ತಂತ್ರಜ್ಞರಿಗೆ ಪ್ರಶಸ್ತಿ ನೀಡಿ ಕೊನೆಗೆ ಕನ್ನಡ ಚಿತ್ರರಂಗದವರಿಗೆ ಪ್ರಶಸ್ತಿ ನೀಡಲಾಗುತ್ತದೆ. ಪ್ರತಿ ಬಾರಿಯೂ ಈ ರೀತಿಯಾಗಿಯೇ ನಡೆದುಕೊಂಡು ಬಂದಿದೆ. ಕೊನೆಗೆ ಪ್ರಶಸ್ತಿ ನೀಡುವಾಗ ಎಲ್ಲರೂ ಎದ್ದು ಹೋಗಿರುತ್ತಾರೆ. ಎಲ್ಲರೂ ಇದ್ದಾಗಲೇ ಕನ್ನಡಿಗರಿಗೂ ಕರೆದು ಅವಾರ್ಡ್ ಕೊಡಿ ಎಂದು ವೇದಿಕೆಯ ಮೇಲೆಯೇ ನಟ ದುನಿಯಾ ವಿಜಯ್ ಗರಂ ಆಗಿದ್ದಾರೆ.

# ಪಿಯು, ಪದವಿ ಮಟ್ಟದಲ್ಲಿ ಕಲೆ, ಸಾಹಿತ್ಯಕ್ಕೆ ಪ್ರತ್ಯೇಕ ಶಿಕ್ಷಕರ ಅಗತ್ಯವಿದೆ

**● ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್ ಪ್ರತಿಪಾದನೆ**
**● ಪಾಶ್ಚಿಮಾತ್ಯ ಗೀಳಿಗೆ ವಿದ್ಯಾರ್ಥಿಗಳು ಬಲಿಯಾಗಿರುವುದು ಒಂದು ದುರಂತ; ವಿಷಾದ**



ನಾಟಕ ಆಧಾರಿತ ರಂಗಭೂಮಿ ಮತ್ತು ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ 2025ರ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಸಂವಿಧಾನ ಪೀಠಿಕೆಯನ್ನು ಅನಾವರಣಗೊಳಿಸುವ ಮೂಲಕ ಉದ್ಘಾಟಿಸಲಾಯಿತು.

> ಈಗ ಸಮಾಜದ ಒಳಿತಿಗೆ, ಸಮಾನತೆಗೆ, ಭಾಷೆ, ದೇಶಭಕ್ತಿ ವಿಚಾರಕ್ಕೆ ಆದ್ಯತೆ ನೀಡಿದವರನ್ನು ಕಡೆಗಣಿಸುವ ಕೆಲಸ ಆಗುತ್ತಿದೆ. ಸಾಹಿತ್ಯ ಕ್ಷೇತ್ರದಲ್ಲಿ ನಮ್ಮ ನಾಡು, ನುಡಿ, ಕಲೆಗೆ ತಮ್ಮದೇ ಕೊಡುಗೆ ನೀಡಿ ಕನ್ನಡಕ್ಕೆ ಬೂಕರ್ ಪ್ರಶಸ್ತಿ ತಂದುಕೊಟ್ಟ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟಕರನ್ನಾಗಿ ಆಯ್ಕೆ ಮಾಡಿರುವುದಕ್ಕೆ ಹಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಜಾತಿ, ಧರ್ಮ, ಲಿಂಗತ್ವದ ಆಧಾರದಲ್ಲಿ ತಾರತಮ್ಯ ಮಾಡುತ್ತಿರುವುದು ಸಮಾಜವೇ ತಲೆ ತಗ್ಗಿಸುವ ಸಂಗತಿ. ಕೇವಲ ರಾಜಕಾರಣಕ್ಕೆ ಹೆಣ್ಣು ಮಗಳ ಶೋಷಣೆ ಮಾಡುವುದು ನಿಲ್ಲಬೇಕು.
>
> ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡವನ್ನು ಬೆಳಗಿದ ಮಹಿಳೆಯಿಂದ ದಸರಾ ಉದ್ಘಾಟನೆ ಆಗುತ್ತಿರುವುದು ದೊಡ್ಡ ಸಂದೇಶವಾಗಿದೆ. ಮುಷ್ತಾಕ್ ಅವರೇ ಉದ್ಘಾಟನೆ ಮಾಡುತ್ತಾರೆ. ಅದರ ವಿರುದ್ಧ ಯಾರೇ ಕಿರುಚಾಡಿದರು ಅದು ನಿಲ್ಲುವುದಿಲ್ಲ. ರಾಜಕೀಯ ಒತ್ತಡಕ್ಕೆ ಮಣಿದು ಸರ್ಕಾರ ಬೇರೆಯವರನ್ನು ಉದ್ಘಾಟಕರನ್ನಾಗಿ ನೇಮಿಸಲು ಹೊರಟರೆ ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ.
>
> -ಪುರುಷೋತ್ತಮ್, ಮಾಜಿ ಮೇಯರ್

ಮೈಸೂರು, ಸೆ.6(ವಿವಿಹೆಚ್)– ಪಿಯುಸಿ, ಪದವಿ ಹಂತದಲ್ಲಿ ವಿದ್ಯಾರ್ಥಿಗಳಿಗೆ ಕಲೆ ಮತ್ತು ಸಾಹಿತ್ಯಕ್ಕೆ ಪ್ರತ್ಯೇಕ ಶಿಕ್ಷಕರ ಅವಶ್ಯಕತೆಯಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದ ಕಿರುರಂಗಮಂದಿರ ಆವರಣದಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ ಸಹಯೋಗದೊಂದಿಗೆ ಶನಿವಾರ ಆಯೋಜಿಸಲಾಗಿದ್ದ ನಾಟಕ ಆಧಾರಿತ ರಂಗಭೂಮಿ ಮತ್ತು ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ 2025ರ ಸಮಾರೋಪ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಬಹುಪಾಲು ಮಕ್ಕಳು ಪುಸ್ತಕಗಳಿಗೆ ಸೀಮಿತವಾಗಿರುತ್ತಾರೆ. ಕಲೆ ಮತ್ತು ಸಾಹಿತ್ಯದೆಡೆಗೆ ವಿದ್ಯಾರ್ಥಿಗಳನ್ನು ಸೆಳೆಯುವ ಕೆಲಸ ಮಾಡಬೇಕು. ಕಲೆ ನೈತಿಕತೆಯನ್ನು ತುಂಬುವ ಕೆಲಸ ಮಾಡುವ ಜೊತೆಗೆ ಮಕ್ಕಳಲ್ಲಿನ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಕಲೆ, ಸಾಹಿತ್ಯ, ನಾಟಕಗಳು ಮಹಾನ್ ದಾರ್ಶನಿಕರ, ಹೋರಾಟಗಾರರ, ಸಮಾಜ ಸುಧಾರಕರ ಜೀವನಾಧಾರಿತ ಕಥೆಗಳನ್ನು ಮಕ್ಕಳೊಳಗೆ ಬೇರೂರುವಂತೆ ಮಾಡುತ್ತದೆ. ಇದರಿಂದ ಸಮಾಜಕ್ಕೆ ಒಳಿತು ಬಯಸುವ ಮನಸ್ಸುಗಳು ಹುಟ್ಟಿಕೊಳ್ಳುತ್ತವೆ ಎಂದರು.

ಇಂದಿನ ದಿನಗಳಲ್ಲಿ ದೇಸಿ ಸಾಹಿತ್ಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ, ಕಲೆ, ಸಂಪ್ರದಾಯಗಳ ನಡುವೆ ಯುದ್ಧ ಆರಂಭವಾಗಿದೆ. ಅನಾಗರಿಕ ಪಾಶ್ಚಿಮಾತ್ಯ ಕಲೆಯಿಂದ ಯುವ ಸಮೂಹವನ್ನು ದಾರಿತಪ್ಪಿಸುವ ಕೆಲಸ ಆಗುತ್ತಿದೆ. ರೀಲ್ಸ್ ಗೀಳಿಗೆ ಇಂದಿನ ಸಮಾಜ ಮಾರುಹೋಗುತ್ತಿರುವುದು ದುರಂತ. ಇಂತಹವರಿಂದ ಕಲೆ, ಸಾಹಿತ್ಯ ಕಟ್ಟಲು ಸಾಧ್ಯವಿಲ್ಲ ಎಂದು ಬೇಸರಿಸಿದರು.

ನಾಡಹಬ್ಬ ದಸರಾದಲ್ಲಿಯೂ ಪಾಶ್ಚಿಮಾತ್ಯ ಸಂಗೀತ, ಕಲೆ ಪ್ರಭಾವ ಹೆಚ್ಚಾಗಿದ್ದು, ಕೇವಲ 1 ಗಂಟೆ, 2 ಗಂಟೆಗಳ ಕಾರ್ಯಕ್ರಮ ನೀಡಲು ಅಂದಾಜು 5 ಕೋಟಿ ರೂ. ವರೆಗೂ ಹಣಕ್ಕಾಗಿ ಬೇಡಿಕೆ ಇಡುತ್ತಾರೆ. ಈ ಹಣದಲ್ಲಿ ರಾಜ್ಯದ ಎಲ್ಲಾ ಶಾಲಾ ಕಾಲೇಜು ಮಕ್ಕಳಿಂದ ನಮ್ಮ ಮೂಲ ಸಂಸ್ಕೃತಿಯನ್ನು ಅನಾವರಣಗೊಳಿಸಬಹುದು. ಸರ್ಕಾರಗಳು ಇಂತಹ ಪ್ರಮುಖ ವೇದಿಕೆಗಳಲ್ಲಿ ನಮ್ಮದೇ ಕಲೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗುತ್ತದೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಪರಕೀಯರ ಹಾವಳಿಯ ನಡುವೆಯೂ ನಮ್ಮ ಮೂಲ ಸಂಸ್ಕೃತಿಯನ್ನು ಕಲಿಯುವ ಉದ್ದೇಶದಿಂದ ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಿಬಿರಗಳಲ್ಲಿ ಭಾಗವಹಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗೌತಮ ಟ್ರಸ್ಟ್‌ನ ಸಂಸ್ಥಾಪಕ ಕೃಷ್ಣಮೂರ್ತಿ ತಲಕಾಡು, ಶ್ರೀಧರ್ ಮೂರ್ತಿ, ಜನಪದ ಕಲಾವಿದ ವಿಶ್ವನಾಥ್ ಎಲ್. ಚಂಗಚಹಳ್ಳಿ, ಗಾಯಕಿ ಸಿಂಚನಾ ಇತರರು ಉಪಸ್ಥಿತರಿದ್ದರು.

ಗೌತಮ ಟ್ರಸ್ಟ್ ಶಿಬಿರಾರ್ಥಿಗಳಿಂದ ಗೌತಮ ಬುದ್ಧ, ಬಸವಣ್ಣ, ನಾಲ್ವಡಿ ಕೃಷ್ಣರಾಜ ಒಡೆಯರ್, ಅಂಬೇಡ್ಕರ್ ಅವರ ನಾಟಕ ಪ್ರದರ್ಶನ ಮಾಡಲಾಯಿತು.

# ಒಳಗೊಂದು–ಹೊರಗೊಂದು ಮಾತನಾಡುವವರಿಂದಲೇ ಕುವೆಂಪುಗೆ ಸಲ್ಲಬೇಕಾದಂತಹ ಗೌರವ ಸಂದಿಲ್ಲ

**● ಮೈಸೂರು ವಿವಿ ಕಲಾನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್ ಗಂಭೀರ ವಿಚಾರ ಪ್ರಸ್ತಾಪ ● ಹಲವರು ಕುವೆಂಪು ವಿಚಾರಧಾರೆಗಳನ್ನು ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ ● ಕುವೆಂಪು ಜಾತಿಶ್ರೇಣಿ ಮೀರಿದ ಪಾತ್ರಗಳ ಸೃಷ್ಟಿಸಿ ಸಮಾನತೆ ಸಂದೇಶ ಸಾರಿದವರು**



ಮೈಸೂರಿನ ಅದಮ್ಯ ರಂಗಶಾಲೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಶನಿವಾರ ನಡೆದ ಸಾಹಿತಿ ನಾಡೋಜ ಡಾ.ದೇಜಗೌ ಸಂಸ್ಮರಣೆ ಕಾರ್ಯಕ್ರಮದಲ್ಲಿ 'ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಸೆ.6(ಎಸ್‌ಬಿಡಿ)– ಜಗತ್ತಿಗೆ ವಿಶ್ವಮಾನವ ಸಂದೇಶ ಸಾರಿದ ದಾರ್ಶನಿಕ ಕುವೆಂಪು ಅವರ ಅಸ್ಮಿತೆ ಹಿಂದಕ್ಕೆ ಸರಿಯದಂತೆ ಜಾಗ್ರತೆ ವಹಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಮೈಸೂರು ವಿಶ್ವವಿದ್ಯಾಲಯ ಕಲಾ ನಿಕಾಯದ ಡೀನ್ ಪ್ರೊ.ಎಂ.ಎಸ್.ಶೇಖರ್ ಹೇಳಿದರು.

ಮೈಸೂರಿನ ವಿಜಯನಗರದಲ್ಲಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಅದಮ್ಯ ರಂಗಶಾಲೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಶನಿವಾರ ನಡೆದ ಪ್ರಸಿದ್ಧ ಸಾಹಿತಿ ನಾಡೋಜ ಡಾ.ದೇಜಗೌ ಸಂಸ್ಮರಣೆ, ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ ಪ್ರದಾನ ಹಾಗೂ ಶಿಕ್ಷಕ ಕವಿಗಳ ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕುವೆಂಪು ಅವರ ಶಕ್ತಿಶಾಲಿ ವಿಚಾರಧಾರೆಗಳನ್ನು ಸ್ವಾರ್ಥಕ್ಕೆ ಬಳಸುವವರಿದ್ದಾರೆ. ಕುವೆಂಪು ಬಗ್ಗೆ ಒಳಗೊಂದು ಹೊರಗೊಂದು ಮಾತನಾಡುವ ಗುಂಪಿದೆ. ಇಂತಹವರಿಂದಲೇ ರಾಷ್ಟ್ರಕವಿ ಕುವೆಂಪು ಅವರಿಗೆ ಸಲ್ಲಬೇಕಿರುವ ಗೌರವ ಸಂದಿಲ್ಲವೆನ್ನಿಸುತ್ತದೆ. ಆದರೆ ದಾರ್ಶನಿಕ ಎಂಬ ಪದ ಕುವೆಂಪು ವ್ಯಕ್ತಿತ್ವಕ್ಕೆ ಹೆಚ್ಚು ಸೂಕ್ತ ಎಂಬ ಅರಿವಿರಬೇಕು. ಕುವೆಂಪು ಅವರ ನಿಜವಾದ ಅಸ್ಮಿತೆ ಹಿಂದಕ್ಕೆ ಸರಿಯದಂತೆ ಜಾಗ್ರತೆ ವಹಿಸಬೇಕು ಎಂದರು.

ಕುವೆಂಪು ಅವರು ಒಂಟಿ ಸಲಗವಾಗಿದ್ದರು. ಸಂಸ್ಕೃತ ಕಲಿಸಲು ನಿರಾಕರಿಸಿ ಅವಮಾನಿಸಿದರೂ ಹಠದಿಂದ ವಿದ್ವತ್ ಪಡೆದು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಸೃಷ್ಟಿಸಿದರು. ಕುವೆಂಪು ಅವರು ಗದ್ಯ ಸೃಷ್ಟಿಯಲ್ಲಿ ಟಾಲ್‌ಸ್ಟಾಯ್ ಹಂತಕ್ಕೆ ಏರಬಲ್ಲ ಮಹಾಪ್ರತಿಭೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಜಾತಿಶ್ರೇಣಿ ಮೀರಿದ ಪಾತ್ರಗಳ ಮೂಲಕ ಸಮಾನತೆ ಸಂದೇಶ ನೀಡಿದರು. ಆದರೆ ಕುವೆಂಪು ಅವರ ಸಾಹಿತ್ಯದಲ್ಲಿರುವ ಆಶಯವನ್ನು ಜಾಗತಿಕ ಮಟ್ಟಕ್ಕೆ ತಲುಪಿಸುವಲ್ಲಿ ವಿಮರ್ಶಕರು ಹಾಗೂ ಅನುವಾದಕರಿಂದ ಸಾಧ್ಯವಾಗಲಿಲ್ಲವೇ ಎಂಬ ಬೇಸರ ಇದೆ ಎಂದು ಹೇಳಿದರು.

ನೂರು ದೇವರನ್ನೆಲ್ಲಾ ನೂಕಾಚೆ ದೂರ ಎಂದು ಬರೆಯುವುದರ ಹಿಂದೆ ಸಾಂಸ್ಕೃತಿಕ ಸಿಟ್ಟಿತ್ತು. ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕುವೆಂಪು ಅವರು ನಿರ್ಭೀತಿಯಿಂದ ಹೇಳಿರುವುದನ್ನು ಬೇರೆಯವರು ಹೇಳಲು ಸಾಧ್ಯವೇ ಇಲ್ಲ. 70ರ ದಶಕದಲ್ಲಿ ಸಚಿವರಾಗಿದ್ದ ಬಸವಲಿಂಗಪ್ಪ ಅವರು ಕನ್ನಡ ಚಳವಳಿಯಲ್ಲಿ ಬೂಸಾ ಶಕ್ತಿಗಳಿವೆ ಎಂದಿದ್ದು ಕನ್ನಡ ಸಾಹಿತ್ಯದಲ್ಲಿ ಬೂಸಾಗಳಿವೆ ಎಂದು ಪ್ರಚಾರವಾಯಿತು. ಅದರಿಂದ ರಾಜ್ಯವೇ ಹೊತ್ತಿ ಉರಿಯಿತು. ಒತ್ತಾಯಕ್ಕೆ ಮಣಿದು ಬಸವಲಿಂಗಪ್ಪ ಅವರ ರಾಜೀನಾಮೆ ಪಡೆಯಲಾಯಿತು. ಅಂತಹ ಉದ್ವಿಗ್ನ ಪರಿಸ್ಥಿತಿಯಲ್ಲಿ ಬಸವಲಿಂಗಪ್ಪ ಅವರ ಪರ ನಿಂತು ಹೇಳಿಕೆ ನೀಡಿದ್ದು ಕುವೆಂಪು ಮಾತ್ರ ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು 1950 ಜ.20 ದೇಶಕ್ಕೆ ಸಂವಿಧಾನ ಅರ್ಪಿಸಿದ ವಾರ್ತೆಯನ್ನು ತಮ್ಮ ನಿವಾಸ 'ಉದಯರವಿ'ಯಲ್ಲಿ ಕುಳಿತು ಆಕಾಶವಾಣಿಯಲ್ಲಿ ಕೇಳಿದ ಕುವೆಂಪು, ಅಂದೇ 'ಹೊಸ ಬಾಳಿನ ಗೀತೆ' ಬರೆದು ಸಂಭ್ರಮವನ್ನು ವಿಶಿಷ್ಟವಾಗಿ ದಾಖಲು ಮಾಡಿದರು. ಅಂಬೇಡ್ಕರ್ ಅವರಿಗೆ ಬಹುದೊಡ್ಡ ಗೌರವ ನೀಡಿರುವ ಕುವೆಂಪು ಅವರನ್ನು ಆಳವಾಗಿ ತಾಳ್ಮೆಯಿಂದ ಕಾಣಬೇಕು. ದಾರ್ಶನಿಕರಾದ ಕುವೆಂಪು ಅವರ ಬಗ್ಗೆ ಮಾತನಾಡುವಾಗ, ಬರೆಯುವಾಗ, ಪ್ರಶಸ್ತಿ ನೀಡುವಾಗ ಸಣ್ಣ ಎಚ್ಚರಿಕೆ ಇದ್ದೇ ಇರಬೇಕು ಎಂದು ಸಲಹೆ ನೀಡಿದರು.

**ದೇಜಗೌ ಟ್ರಸ್ಟ್‌ಗೆ ಒತ್ತಾಯ:** ಅದಮ್ಯ ರಂಗಶಾಲೆ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಮಾತನಾಡಿ, ಕನ್ನಡದಲ್ಲಿ 350 ಕ್ಕೂ ಹೆಚ್ಚು ಪುಸ್ತಕ ಬರೆದ ಬೆರಳೆಣಿಕೆ ಸಾಹಿತಿಗಳಲ್ಲಿ ದೇಜಗೌ (ದೇ.ಜವರೇಗೌಡರು) ಪ್ರಮುಖರು. ಕನ್ನಡವನ್ನು ಕ್ರಿಯಾತ್ಮಕ ನೆಲೆಗಟ್ಟಿನಲ್ಲಿ ಸಂಘಟಿಸಿದ ಅವರ ಹೆಸರಿನಲ್ಲಿ ಸರ್ಕಾರ ಟ್ರಸ್ಟ್ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

**ಪ್ರಶಸ್ತಿ ಪ್ರದಾನ:** ದೇವರಾಜ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲ ಎಂ.ಜಿ.ರಮಾನಂದ, ಹೆಚ್.ಡಿ.ಕೋಟೆ ತುಂಬಸೋಗೆ ಎಂಎಂಕೆ ಸ್ವತಂತ್ರ ಪಿಯು ಕಾಲೇಜಿನ ಪ್ರಾಂಶುಪಾಲ ಎಸ್.ಪಿ. ಪ್ರಕಾಶ್, ಅರಕಲಗೂಡು ಬಿಜಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಹೆಚ್.ಬಿ. ಮಹೇಶ್, ತುಮಕೂರಿನ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ರವಿಕುಮಾರ್ ನೀಹ, ಮೈಸೂರಿನ ಕುವೆಂಪುನಗರದ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಎಂ.ಮಹೇಶ, ಬನ್ನೂರಿನ ಬಾಲಕಿಯರ ಸರ್ಕಾರಿ ಪಿಯು ಕಾಲೇಜು ಉಪನ್ಯಾಸಕಿ ಸಿ.ಚಲುವಮ್ಮ, ಮಹಾರಾಜ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಕೆ.ಎನ್.ಷಣ್ಮುಖ, ಹುಣಸೂರಿನ ಸಂತ ಜೋಸೆಫರ ಪಿಯು ಕಾಲೇಜಿನ ಉಪನ್ಯಾಸಕ ಕೆ.ನಂಜುಂಡಸ್ವಾಮಿ ಅವರಿಗೆ 'ಕುವೆಂಪು ಶಿಕ್ಷಣ ಚೇತನ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ.ಡಿ.ಕೆ.ರಾಜೇಂದ್ರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ, ಅದಮ್ಯ ರಂಗಶಾಲೆ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಮತ್ತಿತರರು ಉಪಸ್ಥಿತರಿದ್ದರು.

## ನ್ಯಾ. ಯಶವಂತ್ ವರ್ಮಾ ಹಗರಣದ ತನಿಖಾ ಸಮಿತಿ ಕಾರ್ಯದರ್ಶಿಯಾಗಿ ಉತ್ತರ ಕನ್ನಡದ ಗಣಪತಿ ಭಟ್ ನೇಮಕ

ಬೆಂಗಳೂರು, ಸೆ. 6– ಆದಾಯ ತೆರಿಗೆ (ಕರ್ನಾಟಕ ಮತ್ತು ಗೋವಾ ಪ್ರದೇಶ)ಯ ಪ್ರಧಾನ ಮುಖ್ಯ ಆಯುಕ್ತರಾಗಿ ನಿವೃತ್ತರಾದ ಉತ್ತರ ಕನ್ನಡ ಮೂಲದ ಮಾಜಿ ಐಆರ್‌ಎಸ್ ಅಧಿಕಾರಿ ಗಣಪತಿ ಭಟ್ ಅವರನ್ನು ಅಕ್ರಮ ಹಣ ಆರೋಪ ಎದುರಿಸುತ್ತಿರುವ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ಆರೋಪಗಳ ತನಿಖೆಗಾಗಿ ರಚಿಸಲಾದ ಮೂವರು ಸದಸ್ಯರ ಸಮಿತಿಗೆ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಮಾರ್ಚ್‌ನಲ್ಲಿ ನಡೆದ ಬೆಂಕಿ ಅವಘಡದ ನಂತರ ದೆಹಲಿಯಲ್ಲಿರುವ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಅಧಿಕೃತ ನಿವಾಸದಿಂದ ಸುಟ್ಟುಹೋದ ಕಂತೆಗಟ್ಟಲೆ ನೋಟುಗಳು ಪತ್ತೆಯಾಗಿತ್ತು ಅವರ ವಿರುದ್ಧದ ಆರೋಪಗಳ ತನಿಖೆಗಾಗಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ತ್ರಿಸದಸ್ಯ ಸಮಿತಿಯನ್ನು ಘೋಷಿಸಿದ್ದರು.

ನ್ಯಾಯಮೂರ್ತಿಗಳ ವಿರುದ್ಧದ ದೋಷಾರೋಪಣೆಗೆ 146 ಸಂಸದರು ಸಹಿ ಮಾಡಿದ ಪ್ರಸ್ತಾವನೆಯನ್ನು ಅಂಗೀಕರಿಸಿದ ಸ್ಪೀಕರ್, ಈ ಸಮಿತಿಯು ಸಾಧ್ಯವಾದಷ್ಟು ಬೇಗ ತನ್ನ ವರದಿಯನ್ನು ಸಲ್ಲಿಸುತ್ತದೆ. ವರದಿ ಬರುವವರೆಗೆ ಪ್ರಸ್ತಾವನೆ ಬಾಕಿ ಇರುತ್ತದೆ ಎಂದು ಹೇಳಿದ್ದರು. ನ್ಯಾಯಾಧೀಶರ ವಿರುದ್ಧದ ದೋಷಾರೋಪಣೆಗೆ ಕಾರ್ಯವಿಧಾನವನ್ನು ಸಂವಿಧಾನದ 124(4)ನೇ ವಿಧಿಯ ಅಡಿಯಲ್ಲಿ ನಿಗದಿಪಡಿಸಲಾಗಿದೆ. ಲೋಕಸಭೆಯಿಂದ ರಚಿಸಲ್ಪಟ್ಟ ಸಮಿತಿಯು ತನ್ನ ವರದಿಯನ್ನು ಸ್ಪೀಕರ್‌ಗೆ ಸಲ್ಲಿಸುತ್ತದೆ. ನಂತರ ಅವರು ಅದನ್ನು ಸದನದ ಮುಂದೆ ಇಡುತ್ತಾರೆ.

## ನಕ್ಕರೆ ಅದೇ ಸ್ವರ್ಗ

ಅಧಿಕಾರಿ (ಕೆಲಸಗಾರರನ್ನುದ್ದೇಶಿಸಿ):
ನೋಡ್ರಿ, ಆಫೀಸನ್ನು ದೇವಸ್ಥಾನ ಅಂತ ತಿಳಿದುಕೊಂಡು ಕೆಲ್ಸ ಮಾಡಬೇಕು...
ಗುಂಡ : ಸರಿ ಸಾರ್... ಹಾಗೇ ಯಾರಾದರೂ ದಕ್ಷಿಣೆ ಕೊಟ್ಟರೆ ಸ್ವೀಕರಿಸಬಹುದಾ?

ಮೈಸೂರು ಮಿತ್ರ
ಭಾನುವಾರ, 7 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ......

ಮಾತಾಡಿದಂತೆ ಜೀವಿಸಲು ಆಗೋದಿಲ್ಲ. ಬರೆದಿಟ್ಟಂತೆ ಬದುಕಲೂ ಆಗೋದಿಲ್ಲ. ನಮ್ಮಿಂದ ಬೇರೆಯವರಿಗೆ ತೊಂದರೆಯಾಗದಂತೆ ಬದುಕಿದರೆ ಸಾಕು ಅದೇ ಸಂತೃಪ್ತ ಬದುಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಟ್ಟು ಗುಣ ಸುಟ್ಟರೂ ಹೋಗಲ್ಲ

## ನಿಮ್ಮ ಪತ್ರಗಳು

### ■ ವೈರಿಂಗ್ ಬಾಕ್ಸ್ ದುರಸ್ತಿಗೊಳಿಸಿ

ಮಾನ್ಯರೆ,



ಮೈಸೂರಿನ ಕೆ.ಜಿ.ಕೊಪ್ಪಲಿನ ಚಂದ್ರ ಮೌಳೇಶ್ವರ ದೇವಸ್ಥಾನದ ಬಳಿ ಇರುವ ಹೈ ಮಾಸ್ಟ್ ಲೈಟ್‌ನ ವಿದ್ಯುತ್ ಸಂಪರ್ಕ ಕ್ಕಾಗಿ ಅಳವಡಿಸಿರುವ ವೈರಿಂಗ್ ಕನೆಕ್ಷನ್ ಬಾಕ್ಸ್ ನೆಲಮಟ್ಟದಲ್ಲಿದ್ದು, ಬಾಕ್ಸ್ ಸರಿಯಿಲ್ಲ. ಅದರ ಮುಚ್ಚಳ ಸರಿಯಾಗಿ ಮುಚ್ಚಲಾಗುತ್ತಿಲ್ಲ.

ಅಲ್ಲದೆ, ಪಕ್ಕದಲ್ಲೇ ಬಜ್ಜಿ ಬೋಂಡ ಮಾಡುವ ತಳ್ಳುಗಾಡಿ ಇರುವುದರಿಂದ ಅಲ್ಲಿ ಹೆಗ್ಗಣಗಳು ಆಹಾರದ ಆಕರ್ಷಣೆಗೆ ಬಂದು ಈ ಬಾಕ್ಸ್‌ನಲ್ಲಿ ಬಿಲ ಮಾಡಿಕೊಂಡಿವೆ. ಪರಿಣಾಮ ಸಂಪೂರ್ಣ ಬಾಕ್ಸ್ ಮಣ್ಣಿನಿಂದ ತುಂಬಿ ಹೋಗಿದ್ದು, ಮುಚ್ಚಳವನ್ನು ಹಾಕಲು ಸಹ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ, ಯಾವುದೇ ಕ್ಷಣದಲ್ಲಿ ಶಾರ್ಟ್ ಸರ್ಕ್ಯೂಟ್ ಅಥವಾ ಗ್ರೌಂಡಿಂಗ್ ಆಗುವ ಅಪಾಯವಿದೆ. ಇದು ಸಾರ್ವಜನಿಕರ ಜೀವಕ್ಕೆ ಮಾರಕವಾಗಬಹುದು. ಆದ್ದರಿಂದ ಈ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ವೈರಿಂಗ್ ಬಾಕ್ಸನ್ನು ನೆಲಮಟ್ಟದಿಂದ ಎರಡು ಮೂರು ಅಡಿ ಎತ್ತರಕ್ಕೆ ಅಳವಡಿಸಿ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕಿದೆ.

**–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

### ■ ಕನಿಷ್ಠ ಸೌಲಭ್ಯ ಕಾಣದ ಸರ್ಕಾರಿ ಶಾಲೆ

ಮಾನ್ಯರೆ,

ಮೈಸೂರು ಜಿಲ್ಲೆಯ ಅತೀ ಹಿಂದುಳಿದ ತಾಲೂಕಾದ ಎಚ್.ಡಿ. ಕೋಟೆಯ ಕಾಕನಕೋಟೆ ಹತ್ತಿರ ಇರುವ ಆನೆಮಾಳ ಗಿರಿಜನ ಮಕ್ಕಳ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕನಿಷ್ಠ ಸೌಲಭ್ಯವೂ ಇಲ್ಲದೆ ಮಕ್ಕಳು ಪರಿತಪಿಸುತ್ತಿವೆ. ಪ್ರತಿ ವರ್ಷವೂ ಮೈಸೂರು ವಿಭಾಗದ ಎಲ್‌ಐಸಿ ಪೆನ್ಷನರ್ಸ್ ಅಸೋಸಿಷಿಯೇಷನ್ ವತಿಯಿಂದ ಜಿಲ್ಲೆಯ ಅತಿ ಹಿಂದುಳಿದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಉಚಿತವಾಗಿ ಅವರ ವಿದ್ಯಾಭ್ಯಾಸಕ್ಕಾಗಿ ಬೇಕಾಗುವ ಸಲಕರಣೆಗಳನ್ನು (ಪೆನ್ಸಿಲ್, ಪೆನ್ನು, ನೋಟ್ ಬುಕ್, ಶೂಸ್, ಬಟ್ಟೆಗಳು ಇನ್ನೂ ಮುಂತಾದ ಸಲಕರಣೆ) ನೀಡುತ್ತಾ ಬಂದಿರುವುದು ಶ್ಲಾಘನೀಯ. ಈ ಶಾಲೆಯಲ್ಲಿ ಸುಮಾರು 40 ರಿಂದ 50 ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಕನಿಷ್ಠ ಸೌಲಭ್ಯವೂ ಇಲ್ಲದೆ ಒಂದೇ ಕೊಠಡಿಯಲ್ಲಿ (ಮಳೆಗಾಲದಲ್ಲಿ ನೀರು ಸೋರುತ್ತಿದೆ) ಪಾಠ ಪ್ರವಚನಗಳನ್ನು ಕಲಿಯಬೇಕಾಗಿರುವುದು ವಿಪರ್ಯಾಸವೇ ಸರಿ. ನಮ್ಮ ಸಂವಿಧಾನದಲ್ಲಿ ಹೇಳಿರುವಂತೆ ಶಿಕ್ಷಣ ಮೂಲಭೂತ ಹಕ್ಕು ಹಾಗೂ ಸಂವಿಧಾನ ಜಾರಿಯಾದ 10 ವರ್ಷದ ಅವಧಿಯೊಳಗೆ ದೇಶದ ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಉಚಿತವಾಗಿ ಮತ್ತು ಕಡ್ಡಾಯವಾಗಿ ನೀಡುವಂತಹದ್ದು ಎಂದು ತಿಳಿಸಿದ್ದರೂ ಇಲ್ಲಿನ ಮಕ್ಕಳು ಅದರಿಂದ ವಂಚಿತರಾಗಿದ್ದಾರೆ ಎನ್ನುವುದು ಇಲ್ಲಿನ ಜನರ ಅಭಿಪ್ರಾಯ. ಇನ್ನೂ ಮುಂದಾದರೂ ಸಂಬಂಧಪಟ್ಟ ಅಧಿಕಾರಿ ವರ್ಗ ಹಾಗೂ ಜನಪ್ರತಿನಿಧಿಗಳು ಗಮನ ಹರಿಸುವುದು ಅತ್ಯಗತ್ಯ.

**–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.**

### ■ ನಿರ್ಲಕ್ಷ್ಯವೋ ಅಥವಾ ಕಳಪೆ ಕಾಮಗಾರಿಯೋ



ಮಾನ್ಯರೆ,

ವಿಶ್ವ ವಿಖ್ಯಾತ ದಸರಾ ಹಬ್ಬದ ಪ್ರಯುಕ್ತ ಗುಂಡಿ ಬಿದ್ದ ರಸ್ತೆಗಳು ಡಾಂಬರು ಕಾಣುತ್ತಿವೆ. ಮಾನಂದವಾಡಿ ಮುಖ್ಯರಸ್ತೆಯ ಶಿವಪುರ ರೇಷ್ಮೆ ಇಲಾಖೆ ಎದುರುಗಡೆ ದೊಡ್ಡ ಗುಂಡಿಗೆ ಡಾಂಬರು ಮಾಡಿರುವ ರೀತಿ ಇದು. ದಸರಾಗೆ ಇನ್ನೂ ಇಪ್ಪತ್ತು ದಿನಗಳು ಇವೆ. ಡಾಂಬರ್ ಹಾಕಿದ ಐದಾರೂ ದಿನಕ್ಕೆ ಈ ರೀತಿ ಹಾಳಾಗಿದೆ. ಇದು ನಿರ್ಲಕ್ಷ್ಯವೋ ಅಥವಾ ಕಳಪೆ ಕಾಮಗಾರಿಯೋ ಇದನ್ನು ಗುತ್ತಿಗೆ ಪಡೆದವರೇ ಹೇಳಬೇಕು. ಇದೇ ತರಹನಾಗಿ ರಸ್ತೆಯ ಮುಂದಿನ ತಿರುವಿನಲ್ಲೂ ಆಗಿದೆ. ಸಂಬಂಧಪಟ್ಟ ಅಧಿಕಾರಿ ವರ್ಗ ಇದನ್ನು ಸುಧಾರಿಸಲು ಈಗಲೇ ಪ್ರಯತ್ನಿಸಿದರೆ ಸಮಸ್ಯೆ ಬೇಗ ಪರಿಹಾರವಾಗುತ್ತದೆ.

**–ಮಂಜೇಶ್ ದೇವಗಳ್ಳಿ, ಮೈಸೂರು**

### ■ ಸಚಿವ ಸಂಪುಟದ ಗಮನಕ್ಕೆ!

ಮಾನ್ಯರೆ,

ನಮ್ಮ ರಾಜ್ಯ ಪೊಲೀಸರು ಹಾಗೂ ಸರಕಾರವು ಲಘು ಸ್ವರೂಪದ ಪ್ರಕರಣಗಳನ್ನು ಗಂಭೀರವಾಗಿಯೂ,ಗಂಭೀರ ಸ್ವರೂಪದ ಪ್ರಕರಣಗಳನ್ನು ಲಘುವಾಗಿಯೂ ಪರಿಗಣಿಸುತ್ತಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗುವ ಸಂಭವ ಹೆಚ್ಚಾಗುತ್ತಿದೆ!

ವಿವಿಧ ಸಂದರ್ಭಗಳಲ್ಲಿ ರಾಜ್ಯದ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 15ಕ್ಕೂ ಹೆಚ್ಚಿನ ಪ್ರಕರಣಗಳು, ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಪೊಲೀಸ್ ಠಾಣೆ ಮೇಲೆಯೇ ಕಲ್ಲು ತೂರಿ ದಾಂಧಲೆ ಎಬ್ಬಿಸಿದ್ದ ಪ್ರಕರಣ ಸೇರಿ 60 ಪ್ರಕರಣಗಳನ್ನು ಹಿಂಪಡೆಯಲು ಗುರುವಾರದ ಸಚಿವ ಸಂಪುಟ ಸಭೆ ನಿರ್ಧರಿಸಿದೆಯಂತೆ! ಇವೆಲ್ಲವೂ ಗಂಭೀರ ಸ್ವರೂಪದ ಅಪರಾಧೀ ಪ್ರಕರಣಗಳು!

ರಾಜ್ಯಾದ್ಯಂತ 'ಹೆಲ್ಮೆಟ್ ರಹಿತ ವಾಹನ ಸವಾರಿ' ಹಾಗೂ 'ಸೀಟ್ ಬೆಲ್ಟ್ ರಹಿತ ವಾಹನ ಚಾಲನೆ'ಯಂತಹ ಸಣ್ಣ ಪುಟ್ಟ ಸಂಚಾರ ನಿಯಮ ಉಲ್ಲಂಘಿಸಿದ ಲಕ್ಷಾಂತರ ಲಘು ಪ್ರಕರಣಗಳಿವೆ. ಪ್ರತಿನಿತ್ಯ ಇಂತಹವರಿಂದ ಕೋಟ್ಯಂತರ ರೂಪಾಯಿ ದಂಡವನ್ನು ನಿರ್ದಾಕ್ಷಿಣ್ಯವಾಗಿ ನಮ್ಮ ಪೊಲೀಸರು ವಸೂಲು ಮಾಡುತ್ತಾ ಗರ್ವದಿಂದ ಬೀಗುತ್ತಿದ್ದಾರೆ!

ಗಂಭೀರ ಸ್ವರೂಪದ ಅಪರಾಧ ಎಸಗಿದವರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯುವ ಬದಲಾಗಿ ಸಣ್ಣ ಪುಟ್ಟ ಸಂಚಾರಿ ನಿಯಮ ಉಲ್ಲಂಘಿಸಿದವರ ವಿರುದ್ಧ ದಾಖಲಾಗಿರುವ ಲಘು ಪ್ರಕರಣಗಳನ್ನು ಸಚಿವ ಸಂಪುಟವು ಹಿಂಪಡೆದು ಅವರನ್ನು ದಂಡದಿಂದ ಋಣಮುಕ್ತರಾಗಿಸಿದ್ದರೆ ರಾಜ್ಯದ ಲಕ್ಷಾಂತರ ಜನಸಾಮಾನ್ಯರಿಗೆ ನ್ಯಾಯ (!) ದೊರಕಿಸಿದಂತಾಗುತ್ತದೆ. ಜೊತೆಗೆ ಅವರೆಲ್ಲರ ಮನಗೆದ್ದಂತಾಗುತ್ತದೆ.

**–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು**



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

# ಕೃಷ್ಣನಿಗೂ ಸಂಗೀತ ಸೇವೆ



ಸಂಗೀತ ಪ್ರೇಮಿಗಳಿಗೆ ಆ ನಾದ ಸೌರಭವನ್ನು ಆಸ್ವಾದಿಸಲು ಒಂದು ನೆವ ಬೇಕು ಅಷ್ಟೆ, ಅದು ಯಾವುದೇ ಹಬ್ಬ-ಹರಿದಿನ, ಉತ್ಸವ, ಮದುವೆ, ಮುಂಜಿ, ಸಮ್ಮೇಳನ, ಆರಾಧನೆ ಯಾವುದಾದರೇನು? ಒಟ್ಟು ಸಂಗೀತವನ್ನು ಆಸ್ವಾದಿಸಲು ಮನ ಹಾತೊರೆಯುತ್ತದೆ ಎಂಬುದಂತೂ ದಿಟ, ನಿಜ.

ನಾದದ ಮೋಡಿಯೇ ಅಂತಹುದು. ಅದರ–ಅಂದರೆ ಸ್ವರಗಳ–ಸಂಗೀತದ ಆಳ–ಅಗಲ ಗಳನ್ನು ಅರಿತವರು ಅದನ್ನೇ ತಮ್ಮ ಉಪಾಸನಾ ಮಾರ್ಗವನ್ನಾಗಿ ಸ್ವೀಕರಿಸಿದರು. ಅದರ ಮೂಲಕ ಮೋಕ್ಷವನ್ನು ಪಡೆಯಬಹುದೆಂಬ ಕಲ್ಪನೆಯೇ ಮೈನವಿರೇಳಿಸುವಂತಹುದು. ನಾದದಲ್ಲಿ ಲೀನವಾಗುವ ಸ್ಥಿತಿಯನ್ನು ಪಡೆವುದೊಂದೇ ಬಾಕಿ. ಮಿಕ್ಕೆಲ್ಲವೂ ತಾನಾಗಿಯೇ ಘಟಿಸುವಂತಹುದು. ಆದರೆ ಆ ಸ್ಥಿತಿಯನ್ನು ಪಡೆಯಲು ಬೇಕಾದುದು ನಿರಂತರ ಸಾಧನೆ, ನಿಷ್ಠೆ ಮತ್ತು ಗುರುಕೃಪೆ.

ಮೈಸೂರಿನಲ್ಲಿ ಶ್ರೀ ರಾಮನವಮಿಯನ್ನು ಹತ್ತು ದಿನಗಳ ಸಂಗೀತೋತ್ಸವಕ್ಕೆ ತಿರುಗಿಸಿದ ಖ್ಯಾತಿ ಮೈಸೂರು ಸದಾಶಿವರಾಯರಿಗೆ ಸಲ್ಲುತ್ತದೆ. ಹತ್ತು ದಿನಗಳ ಕಾಲ ನಿರಂತರವಾಗಿ ಆ ಶ್ರೀರಾಮನಿಗೆ ಸಂಗೀತ ಸೇವೆ ಸಲ್ಲುತ್ತಿತ್ತು. ಅದನ್ನು ನೋಡಿದ್ದ ಅವರ ಶಿಷ್ಯರಾಗಿದ್ದ ವೀಣೆ ಶೇಷಣ್ಣನವರು ತಮ್ಮ ಕಾಲದಲ್ಲಿ ಹತ್ತು ದಿನಗಳ ಕಾಲ ಕೃಷ್ಣೋತ್ಸವವನ್ನು ಆಚರಿಸುವ ಸಂಪ್ರದಾಯವನ್ನು ಪ್ರಾರಂಭಿಸಿದರು. ತಮ್ಮ ಮನೆಯಲ್ಲೇ ಆಚರಿಸುತ್ತಿದ್ದ ಈ ಸಂಗೀತೋತ್ಸವವು ಭಾರತದ ಎಲ್ಲ ಕಡೆಗಳಿಂದಲೂ ಕಲಾವಿದರನ್ನು ಆಕರ್ಷಿಸುತ್ತಿತ್ತು. ಒಂದು ವೇಳೆ ಕಲಾವಿದರು ಬರಲಿಲ್ಲವೇ? ತಾವೇ ಒಂದು ದಿನ ವೀಣೆ, ಮತ್ತೊಂದು ದಿನ ಪಿಟೀಲು, ಮಗದೊಂದು ದಿನ ಸ್ವರಬತ್, ಪಿಯಾನೊ ಹೀಗೆ ತಮ್ಮ ವಾದನದಿಂದ ರಸಿಕರನ್ನು ತೃಪ್ತಿ ಪಡಿಸಿಯೇ ಕಳುಹಿಸುತ್ತಿದ್ದುದು.

ಸ್ವರ್ಣ ಮಹೋತ್ಸವವನ್ನು ಆಚರಿಸುವತ್ತ ದಾಪುಗಾಲು ಹಾಕುತ್ತಿರುವ, ಮೈಸೂರಿನ ಹಳೆಯ ಸಂಗೀತ ಸಭೆಗಳಲ್ಲಿ ಒಂದಾದ ಗಾನ ಭಾರತಿಯು ವೀಣೆ ಶೇಷಣ್ಣನವರ ಹೆಸರಿನ ಭವನವನ್ನು ಕಟ್ಟಿಸಿ, ಅಲ್ಲಿ, ಅವರಿಂದ ಆರಂಭಿಸಲ್ಪಟ್ಟ ಕೃಷ್ಣ ಜನ್ಮಾಷ್ಟಮಿಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಮೂರು ದಿನದ ಈ ಉತ್ಸವದಲ್ಲಿ ಸಂಗೀತ ನೃತ್ಯ ಕಛೇರಿಗಳಲ್ಲದೆ ಮೂರನೆಯ ದಿನ ಹಿರಿಯ ಕಲಾವಿದರನ್ನು, ಸಂಗೀತ ಪೋಷಕರನ್ನು ಸನ್ಮಾನಿಸುವ ಸತ್ಕಾರ್ಯವನ್ನೂ ಪಾಲಿಸಿಕೊಂಡು ಬರುತ್ತಿದೆ. ಆಗಸ್ಟ್ 22, 23 ಮತ್ತು 24ರಂದು ನಡೆದ ಈ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವು ಅತ್ಯಂತ ಸುಂದರವಾದ, ಮನೋಜ್ಞವಾದ ಕಾರ್ಯಕ್ರಮಗಳಾಗಿ ಮೂಡಿಬಂದಿತು.

ಮೊದಲ ದಿನ ಎಂದಿನಂತೆ ಕೃಷ್ಣನು ಕೈಯಲ್ಲಿ ಹಿಡಿದಿರುವ ಕೊಳಲ ಕಛೇರಿ. ಅದನ್ನು ನಡೆಸಿಕೊಟ್ಟವರು ವಿದ್ವಾನ್ ಹೇರಂಭ ಮತ್ತು ಹೇಮಂತ ಎಂಬ ಸುಪ್ರಸಿದ್ಧ ಅವಳಿ ಸಹೋದರರು. ಇವರಿಗೆ ತುಮಕೂರು ರವಿಶಂಕರ್ ಅವರು ಮೃದಂಗದಲ್ಲಿ ಮತ್ತು ಗುರುಪ್ರಸನ್ನ ಅವರು ಖಂಜರಿಯಲ್ಲಿ ಪಕ್ಕವಾದ್ಯ ಸಹಕಾರ ನೀಡಿದರು. ಆಂದೋಳಿಕ ರಾಗದ ತ್ಯಾಗರಾಜರ ರಚನೆ ರಾಗಸುಧಾರಸ ಎಂಬ ಭಕ್ತಿಭರಿತ ಕೃತಿಯೊಂದಿಗೆ ತಮ್ಮ ಕಛೇರಿಯನ್ನು ಆರಂಭಿಸಿದ ಸಹೋದರರು ತಮ್ಮ ಲವಲವಿಕೆಯ ನುಡಿಸುವಿಕೆಯಿಂದ ಕಛೇರಿಗೆ ಉತ್ತಮ ಆರಂಭವನ್ನು ಒದಗಿಸಿದರು. ಮಾಧವ ಮಾಮವ ದೇವ ಕೃಷ್ಣ (ನೀಲಾಂಬರಿ ರಾಗ), ಅಪ್ಪ ರಾಮಭಕ್ತಿ(ಕಾಮವರ್ಧಿನಿ ರಾಗ) ಮುಂತಾದ ರಚನೆಗಳೊಂದಿಗೆ ವಿನಿಕೆ ಮುಂದುವರೆಯಿತು. ಥಟ್ಟನೆ ಮಾಡುವ ದಾಟು ಸ್ವರ ಪ್ರಯೋಗಗಳು, ಆಳವಾದ ಗಮಕಗಳು, ಸಾವಕಾಶವಾಗಿ ಮೆಟ್ಟಿಲು ಮೆಟ್ಟಿಲಾಗಿ ರಾಗವನ್ನು ವಿಸ್ತರಿಸುವ ಪರಿ ಕೇಳುಗರನ್ನು ಪರವಶಗೊಳಿಸುತ್ತಿತ್ತು. ಕಾಮವರ್ಧಿನಿಯಲ್ಲಿ ಸ್ವರಗಳೊಡನೆ ಆಟವಾಡಿದರೆ, ಮುಂದಿನ ಕಾಪಿ ರಾಗದಲ್ಲಿ ಅವರೀರ್ವರೂ ಅದರ ಪ್ರತೀ ಸ್ವರದೊಳಗಿನ ಶುದ್ಧತೆಯನ್ನು, ಮಾಧುರ್ಯವನ್ನು ಅನುಭವಿಸುತ್ತಾ ಕೇಳುಗರೂ ಸಹ ಅದರಲ್ಲಿ ಲೀನವಾಗುವಂತೆ ಮಾಡಿದುದು ವಿಶೇಷ. ಅದರೊಡನೆ ತಾನದ ಮೆರುಗೂ ಜೊತೆಗೂಡಿತು. ಮುರಹರ ಗದಾಧರ ಗಿರಿಧರ ದಾಮೋದರ ಗೋಪಿಕಾ ಮನೋಹರ ಎಂಬ ತಿಶ್ರಜಾತಿ ಅಟ್ಟತಾಳದ ಪಲ್ಲವಿಯು ಶ್ರೀರಂಜಿನಿ, ಕದನಕುತೂಹಲ, ಬಿಂದುಮಾಲಿನಿ ಮುಂತಾದ ರಾಗಮಾಲಿಕೆಯೊಡನೆ ವಿಜೃಂಭಿಸಿತು. ಇಬ್ಬರು ಲಯವಾದ್ಯಕಾರರು ಸೊಗಸಾಗಿ ನುಡಿಸಿ, ಕೇಳುಗರ ಮೆಚ್ಚುಗೆಗೆ ಪಾತ್ರರಾದರು.

> “ ಸ್ವರ್ಣ ಮಹೋತ್ಸವವನ್ನು ಆಚರಿಸುವತ್ತ ದಾಪುಗಾಲು ಹಾಕುತ್ತಿರುವ, ಮೈಸೂರಿನ ಹಳೆಯ ಸಂಗೀತ ಸಭೆಗಳಲ್ಲಿ ಒಂದಾದ ಗಾನ ಭಾರತಿಯು ವೀಣೆ ಶೇಷಣ್ಣನವರ ಹೆಸರಿನ ಭವನವನ್ನು ಕಟ್ಟಿಸಿ, ಅಲ್ಲಿ, ಅವರಿಂದ ಆರಂಭಿಸಲ್ಪಟ್ಟ ಕೃಷ್ಣ ಜನ್ಮಾಷ್ಟಮಿಯ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಮೂರು ದಿನದ ಈ ಉತ್ಸವದಲ್ಲಿ ಸಂಗೀತ ನೃತ್ಯ ಕಛೇರಿಗಳಲ್ಲದೆ ಮೂರನೆಯ ದಿನ ಹಿರಿಯ ಕಲಾವಿದರನ್ನು, ಸಂಗೀತ ಪೋಷಕರನ್ನು ಸನ್ಮಾನಿಸುವ ಸತ್ಕಾರ್ಯವನ್ನೂ ಪಾಲಿಸಿಕೊಂಡು ಬರುತ್ತಿದೆ.

ಎರಡನೆಯ ದಿನ ಒಂದು ವಿನೂತನ ಪ್ರಯೋಗವಿತ್ತು. ಕನ್ನಡ ವಾಙ್ಮಯದಲ್ಲಿ ಸಿಗುವ ಕೃಷ್ಣನ ಕುರಿತಾದ ರಚನೆಗಳನ್ನು ಹಾಡಿದವರು ವಿದ್ವಾನ್ ಮಾನಸನಯನ ಅವರು. ಅವರಿಗೆ ಜೊತೆಯಲ್ಲಿ ಅಚ್ಯುತರಾವ್(ಪಿಟೀಲು), ಆನೂರು ಅನಂತಕೃಷ್ಣಶರ್ಮ (ಮೃದಂಗ) ಮತ್ತು ಆನೂರು ಸುನಾದ್(ಖಂಜಿರ) ಅವರುಗಳು ಸಹಕರಿಸಿದರು. ಶ್ರೀಪಾದರಾಜರ ರಚನೆ ಬಾರೋ ನಮ್ಮ ಮನೆಗೆ ಕೃಷ್ಣದಿಂದ ಆರಂಭಿಸಿದ ಮಾನಸನಯನ ಅವರು ಕುಮಾರವ್ಯಾಸನಿಂದ ಹಿಡಿದು ಇತ್ತೀಚಿನ ಕವಿಗಳವರೆಗಿನ ಹರಹಿನಲ್ಲಿ ರಚನೆಗಳನ್ನು ಆಯ್ಕೆ ಮಾಡಿಕೊಂಡದ್ದು ಅವರ ವ್ಯಾಪಕ ಓದಿಗೆ ಸಾಕ್ಷಿಯಾಗಿತ್ತು.

ಮಾನಸನಯನ ಅವರು ಕೇವಲ ಶಾಸ್ತ್ರೀಯ ಸಂಗೀತದ ವಾಗ್ಗೇಯಕಾರರ ರಚನೆಗಳಿಗಷ್ಟೇ ಅಂಟಿಕೊಳ್ಳದ, ಹೊಸಹೊಸ ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಂಡವರು. ಶಾಸ್ತ್ರೀಯ ಸಂಗೀತದ ಚೌಕಟ್ಟಿನಲ್ಲೇ ಯಾವುದೇ ರಚನೆಗೆ ಶಾಸ್ತ್ರೀಯ ರೂಪ ಕೊಡಬಲ್ಲ ವಿದ್ವತ್ ಉಳ್ಳವರು. ಸಹಜವಾಗಿಯೇ ಅಂದು ಅವರು ಹಾಡಿದ ಎಚ್.ಎಸ್.ವೆಂಕಟೇಶಮೂರ್ತಿಗಳ ಜಾರುಬೆಣ್ಣೆ ಇದೆ ಕೈಯೊಳಗೆ, ಕುಮಾರವ್ಯಾಸನ ಗತಿವಿಹೀನರಿಗಕಟ ನೀನೆ ಗೋವಿಂದಾ, ಪು.ತಿ. ನರಸಿಂಹಾಚಾರ್ಯರ ಅಕೋ ಶ್ಯಾಮ ಅವಳೇ ರಾಧೆ. ಬೇಂದ್ರೆಯವರ ಕೊಳಲನೂದಿದನೇನ ಕೃಷ್ಣ, ಸಿ.ಎನ್.ಶಿವಕುಮಾರರ ನನ್ನೆದೆಯ ತುಂಬೆಲ್ಲ, ಎನ್.ಎಸ್.ಲಕ್ಷ್ಮಿನಾರಾಯಣ ಭಟ್ಟರ ಎಲ್ಲಿ ಹೋಗಲೆ ಹೇಗೆ ಕಾಣಲೆ, ಮಾಸ್ತಿ ವೆಂಕಟೇಶ ಅಯಂಗಾರರ ಗೀತೆ ಇವೆಲ್ಲವೂ ಕೇಳುಗರಿಗೆ ಒಂದು ವಿನೂತನ ಅನುಭವ ನೀಡಿದುದರಲ್ಲಿ ಸಂಶಯವೇ ಇಲ್ಲ. ವರಾಳಿ, ಖಮಾಚ್, ಮುಖಾರಿ, ಪೂರ್ವಿಕಲ್ಯಾಣಿ, ಹಿಂದೋಳ ಮುಂತಾದ ಪರಿಚಿತ ರಾಗಗಳಲ್ಲಿ ಶಾಸ್ತ್ರೀಯ ವೇದಿಕೆಯಲ್ಲಿ ಕೇಳಿಬಾರದ ಆದರೆ ಬರಬೇಕಾದ ಕನ್ನಡ ವಿವಿಧ ಕವಿಗಳ ರಚನೆಯು ನಿಜಕ್ಕೂ ಸ್ವಾಗತಾರ್ಹವಾಗಿತ್ತು. ಮಾನಸನಯನ ಅವರ ಮನೋಧರ್ಮವನ್ನು ಅರ್ಥೈಸಿಕೊಂಡು ಅಚ್ಯುತರಾವ್ ಅವರು ಅವರಿಗೆ ಇಂಬಾಗಿ ನುಡಿಸಿದರು. ಅನಂತಕೃಷ್ಣ ಶರ್ಮ ಮತ್ತು ಸುನಾದ್ ಅವರ ಲಯ ಸಹಕಾರವೂ ಅಷ್ಟೇ ಉತ್ಸಾಹಭರಿತವಾಗಿತ್ತು.

ಮೂರನೆಯ ದಿನ ವಿದುಷಿ ಎಂ.ಎಸ್.ಶೀಲಾ, ಕೊಳಲು ವಿದ್ವಾನ್ ಸಿ.ಎ.ಶ್ರೀಧರ್ ಮತ್ತು ನಾಟಕ ರಂಗದ ಎಚ್.ಎಸ್.ಉಮೇಶ್ ಅವರುಗಳನ್ನು ಗಾನಭಾರತಿಯು ಸನ್ಮಾನಿಸಿತು. ಶ್ರೀ ನಿರಂಜನ ವಾನಳ್ಳಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಈ ಸನ್ಮಾನ ಕಾರ್ಯಕ್ರಮದ ನಂತರ ಮತ್ತೊಂದು ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ತಾಯಿ ಮಗಳ ಜೋಡಿಯ ನೃತ್ಯ. ಮೈಸೂರಿನ ಹೆಸರಾಂತ ನೃತ್ಯಗುರು ವಿದುಷಿ ಕೃಪಾ ಫಡಕೆ ಮತ್ತು ಅವರ ಪುತ್ರಿ ಕುಮಾರಿ ಪೂಜಾ ಸುಗಮ್ ಅವರ ಯುಗಳ ನರ್ತನವು ಇಡೀ ಮೂರು ದಿನಗಳ ಜಯಂತ್ಯೋತ್ಸವಕ್ಕೆ ಕಲಶವಿಟ್ಟಂತಿತ್ತು. ಕೃಷ್ಣನ ಮೇಲಿನ ಕೃತಿಗಳನ್ನೇ ಆಯ್ದುಕೊಂಡಿದ್ದ ಅವರೀರ್ವರು ತಮ್ಮ ಸೊಗಸಾದ ಅಭಿನಯ ಮತ್ತು ನರ್ತನ ಕೌಶಲದಿಂದ ರಸಿಕರ ಮನಸ್ಸನ್ನು ತಣಿಸಿದರು. ಪ್ರಾರ್ಥನಾ ರೂಪದ ಅಷ್ಟಪದಿಯ ನಂತರ ಪೂಜಾ ಆಯ್ಕೆ ಮಾಡಿಕೊಂಡಿದ್ದ ಪದವರ್ಣವು ಆಕೆಯ ನೃತ್ಯ ಪ್ರತಿಭೆಗೆ, ಸಾಮರ್ಥ್ಯಕ್ಕೆ ಮತ್ತು ಸಾಧನೆಗೆ ಹಿಡಿದ ಕೈಗನ್ನಡಿಯಾಗಿತ್ತು. ಡಿ.ವಿ.ಪ್ರಸನ್ನಕುಮಾರರ ಒಂದು ಜಾವಳಿಗೆ ಕೃಪಾ ಅವರು ನೀಡಿದ ಅಭಿನಯವು ಬಲು ಮನೋಜ್ಞವಾಗಿತ್ತು. ವಾದಿರಾಜರ ದೇವರನಾಮಕ್ಕೆ ಮಾಡಿದ್ದ ನೃತ್ಯ ಸಂಯೋಜನೆಯು ನೆನಪಿನಲ್ಲಿ ಉಳಿಯುವಂತಹುದು. ಅವರಿಗೆ ನಟುವಾಂಗದಲ್ಲಿ ಸಮೀಕ್ಷ, ಗಾಯನದಲ್ಲಿ ರಾಜೀವ್, ಮೃದಂಗದಲ್ಲಿ ನಾಗರಾಜ್ ಮತ್ತು ಕೊಳಲಿನಲ್ಲಿ ಜಯರಾಂ ಕಿಕ್ಕೇರಿಯವರು ಸೊಗಸಾದ ಹಿಮ್ಮೇಳವನ್ನು ಒದಗಿಸಿದರು. ಒಟ್ಟಾರೆ ಗಾನಭಾರತಿಯ ಈ ಶ್ರೀ ಕೃಷ್ಣ ಜಯಂತಿಯು ಅರ್ಥಪೂರ್ಣವಾಗಿತ್ತು.

# ತಾತಯ್ಯನವರ ಅನಾಥಾಲಯ ಸಾಧಕರ ಆಲಯ

## ಇಲ್ಲಿ ಆಶ್ರಯ ಪಡೆದು ಜೀವನದಲ್ಲಿ ನೆಲೆಕಂಡುಕೊಂಡವರ ಕೃತಜ್ಞತೆ ಭಾವನುಡಿ













ಸತ್ಯನಾರಾಯಣ ರವಿಶಂಕರ್ ಉಮಾ ಆರತಿ

**ಮೈಸೂರು:** ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯ ಆರಂಭಿಸಿದ ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಅವರ 181ನೇ ಜನ್ಮ ದಿನೋತ್ಸವದ ಅಂಗವಾಗಿ ಭಾನುವಾರ (ಸೆ.7) ಸಂಜೆ 4ಕ್ಕೆ ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ವಾರ್ಷಿಕ ಉಷಾ ಕಿರಣ್ ಕಣ್ಣಿನ ಆಸ್ಪತ್ರೆಯ ಸಂಸ್ಥಾಪಕ ದಂಪತಿಗಳಾದ ಡಾ.ಉಮಾ ರವಿಶಂಕರ್ ಮತ್ತು ಡಾ.ರವಿಶಂಕರ್ ಅವರಿಗೆ ಹಾಗೂ ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿಯನ್ನು ಜೀವಮಾನ ಸಾಧನೆಗಾಗಿ ಸಂಸ್ಕೃತ ವಿದ್ವಾಂಸ ಟಿ.ವಿ.ಸತ್ಯನಾರಾಯಣ ಅವರಿಗೆ ನೀಡಲಾಗುತ್ತಿದೆ. ಇದೇ ವೇಳೆ ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ವಿ.ಬಿ.ಆರತಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಹಿರಿಯ ವಕೀಲ ಎ.ಎಸ್. ನಟರಾಜ್ ಸಮಾರಂಭದ ಗೌರವ ಅತಿಥಿಗಳಾಗಿರುವರು. ಅನಾಥಾಲಯದ ಅಧ್ಯಕ್ಷರೂ ಆದ ಭಾರತ ಸರ್ಕಾರದ ಮಾಜಿ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಇದರ ಪೂರ್ವಭಾವಿಯಾಗಿ ತಾತಯ್ಯನವರ 181ನೇ ಜನ್ಮ ದಿನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಉದ್ದೇಶದಿಂದ ಅಧ್ಯಕ್ಷರಾದ ಸಿ.ವಿ.ಗೋಪಿನಾಥ್ ಅವರು ಹಳೆಯ ವಿದ್ಯಾರ್ಥಿ ದಿನೇಶ್ ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ಎನ್.ವಿ. ದಿನೇಶ್ ಸಹಕಾರದೊಂದಿಗೆ ಕಳೆದ ತಿಂಗಳು ಆಯೋಜಿಸಿದ್ದ 'ಹಳೆಯ ವಿದ್ಯಾರ್ಥಿಗಳ ಸಂಗಮ', ಹಳೆಯ ನೆನಪುಗಳೊಂದಿಗೆ ವಿಚಾರ ಮಂಥನದ ವೇದಿಕೆಯಾಗಿತ್ತು. ನೆರೆದಿದ್ದವರು ತಮ್ಮ ಜೀವನ ರೂಪಿಸಿದ ಅನಾಥಾಲಯದ ಬಗ್ಗೆ ಹೇಳುವಾಗ ಭಾವುಕರಾದರು. ಸಂಸ್ಥೆಯ ಅಭಿವೃದ್ಧಿಗೆ ಪೂರಕವಾದ ಮಹತ್ವದ ಸಲಹೆ-ಸೂಚನೆಗಳನ್ನೂ ನೀಡಿದರು.

ಎನ್.ವಿ.ದಿನೇಶ್ ಅವರು ಅನಾಥಾಲಯದಿಂದ ಕಲಿತ ಮಾನವೀಯ ಮೌಲ್ಯಗಳು, ವ್ಯಕ್ತಿತ್ವ ನಿರ್ಮಾಣದಂಥ ಅಮೂಲ್ಯ ಪಾಠಗಳು ತಮಗೆ ದಾರಿದೀಪ ಎಂದರು. ಸರ್ಕಾರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ 81ರ ಪ್ರಾಯದ ಕೆ.ಭುಜಂಗರಾವ್ ಅವರು 'ಓಂ ನಮೋ ತಾತಯ್ಯ' ಎಂಬ ಮಂತ್ರದಿಂದಲೇ ನಾನು ದಿನ ಆರಂಭಿಸುತ್ತೇನೆ ಎಂದು ಧನ್ಯತಾ ಭಾವದಿಂದ ಹೇಳಿಕೊಂಡರು. ಭಾರತೀಯ ರೈಲ್ವೆಯಲ್ಲಿ ಮುಖ್ಯ ಲೋಕೋ ಪೈಲೆಟ್ ಆಗಿದ್ದ ರವಿಶಂಕರ್, 1990–93ರ ಸಮಯದಲ್ಲಿ ಇಲ್ಲಿ ವಿದ್ಯಾರ್ಥಿಯಾಗಿದ್ದೆ. ಬದುಕು ಕಲ್ಪಿಸಿ ಕೊಟ್ಟ ಈ ಅನಾಥಾಲಯಕ್ಕೆ ಆಭಾರಿಯಾಗಿದ್ದೇನೆ ಎಂದು ಕಣ್ಣೀರಾದರು.

ಹಾಲಿ ಅಧ್ಯಕ್ಷ ಗೋಪಿನಾಥ್ ಅವರು, ತಮ್ಮಲ್ಲಿ ಸ್ವಾಭಿಮಾನ, ಛಲ, ಗುರಿ ಮುಟ್ಟಬೇಕೆಂಬ ಮಹದಾಶಯವನ್ನು ಮೂಡಿಸಿದ್ದೇ ಈ ಅನಾಥಾಲಯ. ಇದಕ್ಕೆ ಸಹಕರಿಸಿದವರು ಡಾ.ಗುರುಮೂರ್ತಿ ಯವರು ಎಂದು ಸ್ಮರಿಸಿಕೊಂಡರು. ಭಾರತೀಯ ರಕ್ಷಣಾ ಸೇವೆಯಲ್ಲಿ ರಾಷ್ಟ್ರಪತಿ ಪದಕ ಪಡೆದಿರುವ ಸುಬ್ರಹ್ಮಣ್ಯಂ, ಯು.ಜಿ. ಗಣೇಶ್, ಅಶೋಕ್ ಹೆಗಡೆ, ಪರಮಾಣು ವಿಜ್ಞಾನಿ ಡಾ.ಗುರುಮೂರ್ತಿ, ಆರ್‌ಎಂಪಿಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದ ಕಾಶಿನಾಥ್, ರವಿಂದ್ರ, ಆಡಿಟರ್ ಕೃಷ್ಣ ಪ್ರಸಾದ್, ಶ್ರೀಮತಿ ಲಕ್ಷ್ಮೀ, ವಕೀಲೆ ಪೃಥ್ವಿಭಟ್, ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಸ್ಪತ್ರೆ ನಡೆಸುತ್ತಿರುವ ಡಾ.ಉದಯ ಶಂಕರ, ಡಾ.ಕಾರ್ತಿಕ್ ಉಡುಪ, ರಾಘವೇಂದ್ರ, ಶಿವಮೊಗ್ಗದ ದಿನೇಶ್, ಶೃಂಗೇರಿಯ ರಾಮಮೂರ್ತಿ, ರಿಸರ್ವ್ ಬ್ಯಾಂಕಿನ ನಿತ್ಯಾನಂದ, ನಾಗೇಂದ್ರ, ಉದ್ಯಮಿ ಪೃಥ್ವಿ ಶರ್ಮಾ, ಅಂಕಿತ್ ಸೇರಿದಂತೆ ಹಲವಾರು ಮಂದಿ ಬದುಕು ರೂಪಿಸಿದ ಅನಾಥಾಲಯ ಬಣ್ಣಿಸಿದರು.

ಹಾಲಿ ಅಧ್ಯಕ್ಷ ಗೋಪಿನಾಥ್ ಅನಾಥಾಲಯವನ್ನು ಬಣ್ಣಿಸಿದರು. ಮೈಸೂರಿನ ಪತ್ರಿಕಾರಂಗದ ಭೀಷ್ಮ ಹಾಗೂ ತಾತಯ್ಯ ಎಂದೇ ಖ್ಯಾತರಾಗಿದ್ದ ಎಂ.ವೆಂಕಟಕೃಷ್ಣಯ್ಯನವರು ಆರಂಭಿಸಿದ ಅನಾಥಾಲಯ, ಸರಸ್ವತಿ ಸಮ್ಮಾನ್ ಪುರಸ್ಕೃತ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ, ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದ ಸಿ.ನರಸಿಂಹ ಮೂರ್ತಿ, ಕೇಂದ್ರ ಸರ್ಕಾರದ ಹೆಚ್ಚುವರಿ ಮಾಜಿ ಕಾರ್ಯದರ್ಶಿಯಾಗಿದ್ದ ಸಿ.ವಿ.ಗೋಪಿನಾಥ್ (ಅನಾಥಾಲಯದ ಹಾಲಿ ಅಧ್ಯಕ್ಷ) ಸೇರಿದಂತೆ ಹಲವಾರು ದಿಗ್ಗಜರನ್ನು ಸಮಾಜಕ್ಕೆ ಕೊಡುಗೆ ನೀಡಿದೆ.

# ಇವಿಎಂನಿಂದ ಬ್ಯಾಲೆಟ್ ಪೇಪರ್‌ಗೆ ಮರಳುವುದು ಉತ್ತಮ

ಬೆಂಗಳೂರು, ಸೆ.6–ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಎಲೆಕ್ಟ್ರಾನಿಕ್ ಮತಯಂತ್ರಗಳಿಂದ ಮತಪತ್ರಗಳಿಗೆ ಹಿಂತಿರುಗುವುದು ಹಿಮ್ಮುಖ ಕ್ರಮವಲ್ಲ. ಏಕೆಂದರೆ ಅದು ಪ್ರಜಾಪ್ರಭುತ್ವದ ಅತ್ಯುತ್ತಮ ಪದ್ಧತಿಗಳಲ್ಲಿ ಒಂದಾಗಿದೆ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಹೇಳಿದ್ದಾರೆ.

ಮತಪತ್ರದ ಮೂಲಕ ಮತದಾನ ನಡೆಸುವುದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಸವಾಲಿನದ್ದೆಂದು ಭಾವಿಸಬಾರದು. ಮತಗಳನ್ನು ಎಣಿಸಲು ಸ್ವಲ್ಪ ಹೆಚ್ಚುವರಿ



ಜಿ.ಎಸ್.ಸಂಗ್ರೇಶಿ

ಸಮಯ ತೆಗೆದುಕೊಳ್ಳಬಹುದು. ಬಹುಶಃ ಎರಡು–ಮೂರು ಗಂಟೆಗಳು ಹೆಚ್ಚಾಗಬಹುದು. ವಾಸ್ತವವಾಗಿ ಇದು ಪ್ರಜಾಪ್ರಭುತ್ವದ ಅತ್ಯುತ್ತಮ ಪದ್ಧತಿಗಳಲ್ಲಿ ಒಂದಾಗಿದೆ. ಮತಪತ್ರಗಳನ್ನು ಇಪ್ಪತ್ತು

**ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ**

ವರ್ಷಗಳ ಹಿಂದೆ ಬಳಸಲಾಗುತ್ತಿತ್ತು. ಯುಎಸ್ ಸೇರಿದಂತೆ ಕೆಲವು ಅಭಿವೃದ್ಧಿ ಹೊಂದಿದ ದೇಶಗಳು ಇನ್ನೂ ಈ ವಿಧಾನವನ್ನು ಬಳಸುತ್ತವೆ. ಸರ್ಕಾರವು ಕೆಲವು ಕಾಯಿದೆಗಳನ್ನು ತಿದ್ದುಪಡಿ ಮಾಡಿ ಸಾಕಷ್ಟು ಸಿಬ್ಬಂದಿ ಮತ್ತು ಹಣವನ್ನು ಒದಗಿಸಿದರೆ, ರಾಜ್ಯ ಚುನಾವಣಾ ಆಯೋಗ ಮತಪತ್ರಗಳಿಗೆ ಬದಲಾಯಿಸಲು ಸಿದ್ಧವಾಗಿದೆ. ಚುನಾವಣೆಗಳನ್ನು ಇವಿಎಂಗಳ ಮೂಲಕ ನಡೆಸಬೇಕೇ ಅಥವಾ ಮತಪತ್ರಗಳ ಮೂಲಕ ನಡೆಸಬೇಕೇ ಎಂದು ಸಂವಿಧಾನವು ಹೇಳುವುದಿಲ್ಲ, ಆಯ್ಕೆಯನ್ನು ಚುನಾವಣಾ ಆಯೋಗಗಳಿಗೆ ಬಿಡುತ್ತದೆ ಎಂದರು.

ರಾಜ್ಯ ಸರ್ಕಾರವು ಸಂಪುಟದ ನಿರ್ಧಾರದ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಡಿಯಲ್ಲಿರುವ 5 ನಿಗಮಗಳು ಸೇರಿದಂತೆ ಪಂಚಾಯತ್‌ಗಳು, ಸ್ಥಳೀಯ ಸಂಸ್ಥೆಗಳ ಚುನಾವಣಾ ಪಟ್ಟಿ ಸಿದ್ಧಪಡಿಸಲು ಮತ್ತು ಇವಿಎಂಗಳ ಬದಲಿಗೆ ಮತಪತ್ರಗಳನ್ನು ಬಳಸಿ ಚುನಾವಣೆ ನಡೆಸಲು ಎಸ್‌ಇಸಿಗೆ ಶಿಫಾರಸು ಮಾಡಿದೆ.

**ನಕಲಿ ಮತದಾರರ ಪಟ್ಟಿ ಸಿದ್ಧ ಪಡಿಸುತ್ತೇವೆ:** ಕಾಯ್ದೆಗಳನ್ನು ತಿದ್ದುಪಡಿ ಮಾಡಿ ರಾಜ್ಯಪಾಲರು ಸುಗ್ರೀವಾಜ್ಞೆಗೆ ಒಪ್ಪಿಗೆ ನೀಡಿದ ನಂತರ, ಎಸ್‌ಇಸಿ ಮತದಾರರ ಪಟ್ಟಿ ತಯಾರಿಕೆಯೊಂದಿಗೆ ಮುಂದುವರಿಯುತ್ತದೆ. ಇದು 2–3 ತಿಂಗಳುಗಳನ್ನು ತೆಗೆದುಕೊಳ್ಳಬಹುದು. ಉದಾಹರಣೆಗೆ ಜಿಬಿಎಯಲ್ಲಿ, 9,000 ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಇದ್ದರು. ಅವರ ಸಂಖ್ಯೆ ದ್ವಿಗುಣಗೊಳಿಸಬೇಕು ಎಂದರು.

ಸುಪ್ರೀಂಕೋರ್ಟ್ ಆದೇಶವನ್ನು ಅನುಸರಿಸಿ ಸರ್ಕಾರವು ನ.1ರೊಳಗೆ ವಾರ್ಡ್‌ಗಳ ಮರುವಿಂಗಡೀಕರಣ ಪೂರ್ಣಗೊಳಿಸಬೇಕು. ನ.30ರೊಳಗೆ ಮೀಸಲಾತಿ ಮ್ಯಾಟ್ರಿಕ್ಸ್ ಅನ್ನು ಸರಿಪಡಿಸಬೇಕು ಎಂದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಬಸವನಗಿರಿ ಹಾಡಿಯಲ್ಲಿ ಬುಡಕಟ್ಟು ಜನರ ಸ್ಥಿತಿಗತಿ ಸಮೀಕ್ಷೆ ನಡೆಸಿದ ಸಂಶೋಧನಾ ವಿದ್ಯಾರ್ಥಿಗಳು



ಪರಿಶಿಷ್ಟ ಪಂಗಡಗಳ ಸಂಶೋಧನಾ ವಿದ್ಯಾರ್ಥಿಗಳು ಹೆಚ್.ಡಿ.ಕೋಟೆ ತಾಲೂಕು ಬಸವನಗಿರಿ ಹಾಡಿಯ ಮನೆ-ಮನೆಗೆ ತೆರಳಿ ಸಮೀಕ್ಷೆ ನಡೆಸಿ, ಬುಡಕಟ್ಟು ಜನರ ಸ್ಥಿತಿಗತಿ ಬಗ್ಗೆ ಮಾಹಿತಿ ಕಲೆಹಾಕಿದರು.

ಮೈಸೂರು, ಸೆ.6(ಎಂಟಿವೈ)- ಪರಿಶಿಷ್ಟ ಪಂಗಡಗಳ ಸಂಶೋಧನಾ ವಿದ್ಯಾರ್ಥಿಗಳು ಹೆಚ್.ಡಿ.ಕೋಟೆ ತಾಲೂಕಿನ ಬಸವನ ಗಿರಿ ಹಾಡಿಯ ಮನೆ-ಮನೆಗೆ ತೆರಳಿ ಸಮೀಕ್ಷೆ ನಡೆಸಿ, ಬುಡಕಟ್ಟು ಜನರ ಸ್ಥಿತಿಗತಿ ಬಗ್ಗೆ ಮಾಹಿತಿ ಕಲೆಹಾಕಿದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಆಯೋಜಿಸಿರುವ ಸಂಶೋಧನಾ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಇಂದು ಬಸವನಗಿರಿ ಹಾಡಿಗೆ ಭೇಟಿ ನೀಡಿದರು. ಅಲ್ಲಿನ ಜನರಿಗೆ ಮನೆ ಇದೆಯೇ? ರಸ್ತೆ, ಕುಡಿಯುವ ನೀರು, ಆಧಾರ್ ಕಾರ್ಡ್, ಪಡಿತರ ಚೀಟಿ, ಜಮೀನು, ಜಾನುವಾರು, ಟಿವಿ, ಬೈಕ್, ವಿದ್ಯಾವಂತರು ಇರುವಿಕೆ ಬಗ್ಗೆ ಮಾಹಿತಿ ಕಲೆ ಹಾಕಿದರು. ಅಲ್ಲದೆ, ಬುಡಕಟ್ಟು ಜನ ಮಾಡುವ ಕೆಲಸ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ, ರಾಜಕೀಯವಾಗಿ ಅವರ ಜೀವನ ನಿರ್ವಹಣೆ ಹೇಗಿದೆ ಎಂಬ ಸಮಗ್ರ ಮಾಹಿತಿಯ ದತ್ತಾಂಶವನ್ನು ಸಂಗ್ರಹಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಮಾತನಾಡಿ, ಈ ಸರ್ವೆಯಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗಿದೆ. ಇವರು ಸಂಗ್ರಹಿಸಿರುವ ದತ್ತಾಂಶವನ್ನು ಇಲಾಖೆಗೆ ಕಳಿಸಲಾಗುವುದು. ಇದು ಪುನರ್ವಸತಿ ಹಾಡಿಯಾಗಿದ್ದು, ನಾಳೆ ಪುನರ್‌ವಸತಿಯಾಗಿಲ್ಲದ ಡಿ.ಬಿ. ಕುಪ್ಪೆ ಹಾಡಿ ವ್ಯಾಪ್ತಿಯಲ್ಲಿ ಸರ್ವೆ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲೆಕ್ಕಾಧಿಕಾರಿ ಬಿ.ಎಸ್. ಭವ್ಯ, ಸಂಶೋಧಕರಾದ ಡಾ.ಮೋಹನ್ ಕುಮಾರ್, ಡಾ. ಮಂಜುನಾಥ್, ಡಾ.ಎಸ್.ರವಿಕುಮಾರ್, ಡಾ.ಲೀಲಾವತಿ, ಡಾ.ರತ್ನಮ್ಮ, ಡಾ. ಮಧು ಗುಂಡ್ಲುಪೇಟೆ, ಗಂಗಾಧರ್, ರಮೇಶ್ ಕೆ. ಉಪಸ್ಥಿತರಿದ್ದರು.

# ಅನುದಾನಕ್ಕೆ ಶಾಸಕರು ಸಿಎಂ ಬಳಿ ಅಂಗಲಾಚುವ ಪರಿಸ್ಥಿತಿ ನಿರ್ಮಾಣ

## ವಿಪಕ್ಷ ನಾಯಕ ಆರ್. ಅಶೋಕ್ ವ್ಯಂಗ್ಯ



ಬೆಂಗಳೂರು, ಸೆ. 6(ಕೆಎಂಶಿ)-ನಾಲ್ಕು ಬಾರಿ ಶಾಸಕರಾದವರು, ಕೃಷಿ ಸಚಿವರು, ತಮ್ಮ ಕ್ಷೇತ್ರದ ಪರಿಶಿಷ್ಟ ಪಂಗಡಗಳ ಕಾಲೋನಿ ಅಭಿವೃದ್ಧಿಗೆ ಕೇವಲ 2 ಕೋಟಿ ರೂ. ಅನುದಾನಕ್ಕೆ ಮುಖ್ಯಮಂತ್ರಿ ಬಳಿ ಅಂಗಲಾಚಬೇಕೆಂದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಎಷ್ಟರ ಮಟ್ಟಿಗೆ ದಿವಾಳಿ ಆಗಿದೆ ಎಂಬುದನ್ನು ಜನರು ಊಹಿಸಬಹುದಾಗಿದೆ ಎಂದು ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ.


ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕೋಲಾರ ಶಾಸಕ ಕೊತ್ತೂರು ಮಂಜುನಾಥ್ ಅನುದಾನಕ್ಕಾಗಿ ಮುಖ್ಯಮಂತ್ರಿ ಕಾಲಿಗೆ ಬೀಳಬೇಕು ಎನ್ನುತ್ತಾರೆ. ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ನಿಮಗೆ ರಸ್ತೆ ಬೇಕಾದ್ರೆ ಗ್ಯಾರಂಟಿ ಯೋಜನೆ ಬಂದ್ ಮಾಡ್ತೀವಿ ಎನ್ನುತ್ತಾರೆ.

ಶಾಸಕ ಗವಿಯಪ್ಪ, ಪಾಪ ಒಂದು ಹೆಜ್ಜೆ ಮುಂದೆ ಹೋಗಿ, ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ವಿಧಾನ ಸೌಧದ ಮುಂದೆ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ ಎಂಬ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಬಿ.ಆರ್.ಪಾಟೀಲ್, ರಾಜುಕಾಗೆ ಸೇರಿದಂತೆ ಅನೇಕ ಶಾಸಕರು ಅನುದಾನವಿಲ್ಲದೆ ತಮ್ಮ ಕ್ಷೇತ್ರಗಳಲ್ಲಿ ತಲೆ ಎತ್ತಿಕೊಂಡು ಓಡಾಡಲೂ ಆಗುತ್ತಿಲ್ಲ ಎಂಬುದಾಗಿ 'ಸೂಪರ್ ಸಿಎಂ' ರಣದೀಪ್ ಸಿಂಗ್ ಸುರ್ಜೇವಾಲಾಗೆ ದೂರು ಕೊಟ್ಟಿದ್ದನ್ನೂ ಮಾಧ್ಯಮಗಳು ಬಿತ್ತರಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಇನ್ನೆಷ್ಟು ದಿನ ಈ ಭಂಡ ಬಾಳು ಬಾಳುತ್ತೀರಿ. ರಾಜೀನಾಮೆ ಕೊಟ್ಟು ರಾಜ್ಯ ಉಳಿಸಿ ಎಂದಿದ್ದಾರೆ.

# ದಿಢೀರ್ ಅಸ್ವಸ್ಥ; ಆಸ್ಪತ್ರೆಗೆ ದಾಖಲಾದ ಸಿಬಿಐ ನಿರ್ದೇಶಕ



ಹೈದರಾಬಾದ್, ಸೆ.6- ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ನಿರ್ದೇಶಕ ಪ್ರವೀಣ್ ಸೂದ್ ಅವರು ಹಠಾತ್ ಅಸ್ವಸ್ಥಗೊಂಡು ಶನಿವಾರ ಇಲ್ಲಿನ ಆಸ್ಪತ್ರೆಗೆ ದಾಖಲಾದರು.

ಶ್ರೀಶೈಲದಿಂದ ಹೈದರಾಬಾದ್‌ಗೆ ವಾಪಸ್ಸಾಗುತ್ತಿದ್ದ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಯಿತು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಸದ್ಯ ಅವರ ಆರೋಗ್ಯ ಸ್ಥಿರ ವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಪ್ರವೀಣ್ ಸೂದ್ ಅವರು ಶ್ರೀಶೈಲದ ಭ್ರಮರಾಂಬಿಕಾ ಮತ್ತು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಗಳಿಗೆ ಭೇಟಿ ನೀಡಿ ಮರಳುತ್ತಿದ್ದರು. ಹೈದರಾಬಾದ್‌ನ ಜ್ಯೂಬಿಲಿ ಹಿಲ್‌ನಲ್ಲಿರುವ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.

# ನಟಿ ಭಾವನಾ ಒಂದು ಮಗು ಸಾವು; ಮತ್ತೊಂದು ಮಗು ಕ್ಷೇಮ



ಬೆಂಗಳೂರು, ಸೆ.6- ಕನ್ನಡದ ನಟಿ ಭಾವನಾ ರಾಮಣ್ಣ ಅವರು ಹೆಣ್ಣು ಮಗುವಿಗೆ ತಾಯಿಯಾಗಿದ್ದು, ಅವರು ಸದ್ಯ ಆರೋಗ್ಯವಾಗಿದ್ದಾರೆ. ಒಂದು ಮಗು ಸಾವಿಗೀಡಾಗಿದ್ದು, ಮತ್ತೊಂದು ಮಗು ಕ್ಷೇಮವಾಗಿದೆ. ಐವಿಎಫ್ ಮೂಲಕ ತಾಯಿ ಆದ ನಟಿ ಭಾವನಾ ಅವರು ಇತ್ತೀಚೆಗೆ ಸೀಮಂತ ಮಾಡಿಕೊಂಡಿದ್ದರು. ವೈದ್ಯರ ಸೂಚನೆಯಂತೆ ಹೆರಿಗೆ ಮಾಡಲಾಗಿದ್ದು, ಒಂದು ಮಗುವಿನಲ್ಲಿ ಏಳು ತಿಂಗಳ ನಂತರ ಸಮಸ್ಯೆ ಕಾಣಿಸಿಕೊಂಡ ಕಾರಣ 8 ತಿಂಗಳಿಗೆ ಹೆರಿಗೆ ಮಾಡಿಸಲಾಗಿದೆ. ಸದ್ಯ ತಾಯಿ ಮಗು ಇಬ್ಬರು ಕ್ಷೇಮವಾಗಿದ್ದಾರೆ ಎನ್ನಲಾಗಿದೆ.

ನನ್ನ ಮಕ್ಕಳಿಗೆ ತಂದೆ ಇಲ್ಲದಿರಬಹುದು, ಆದರೆ ಅವರು ಕಲೆ, ಸಂಗೀತ, ಸಂಸ್ಕೃತಿ ಮತ್ತು ಬೇಷರತ್ತಾದ ಪ್ರೀತಿಯಿಂದ ತುಂಬಿದ ಮನೆಯಲ್ಲಿ ಬೆಳೆಯುತ್ತಾರೆ. ತಮ್ಮ ಬಗ್ಗೆ ಹೆಮ್ಮೆ, ಆತ್ಮವಿಶ್ವಾಸ ಆಗುವ ರೀತಿಯಲ್ಲಿ ಅವರನ್ನು ಬೆಳೆಸಲಾಗುವುದು. ಬಂಡಾಯದ ಕಾರಣಕ್ಕೆ ನಾನು ಈ ದಾರಿ ಆಯ್ಕೆ ಮಾಡಿಕೊಂಡಿಲ್ಲ. ನನ್ನ ಸತ್ಯವನ್ನು ಗೌರವಿಸುವ ಸಲುವಾಗಿ ಆಯ್ಕೆ ಮಾಡಿಕೊಂಡೆ ಎಂದು ಇದಕ್ಕೂ ಮುನ್ನ ನಟಿ ಭಾವನಾ ಪೋಸ್ಟ್ ಹಾಕಿದ್ದರು.

# ಮಲ್ಯ, ನೀರವ್ ಮೋದಿ ಶೀಘ್ರವೇ ಭಾರತಕ್ಕೆ ಶಿಫ್ಟ್

## ಬ್ರಿಟನ್ ತಂಡದಿಂದ ತಿಹಾರ್ ಜೈಲು ಪರಿಶೀಲನೆ



ವಿಜಯ್ ಮಲ್ಯ ನೀರವ್ ಮೋದಿ

ನವದೆಹಲಿ, ಸೆ.6- ಭಾರತದಲ್ಲಿ ಹಣಕಾಸು ವಂಚನೆ ಮಾಡಿ ದೇಶ ಬಿಟ್ಟು ಬ್ರಿಟನ್ ದೇಶಕ್ಕೆ ಪರಾರಿ ಯಾಗಿರುವ ವಿಜಯ್ ಮಲ್ಯ, ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿ, ಕ್ರಿಮಿನಲ್ ಪ್ರಕರಣಗಳನ್ನು ವಿಚಾರಣೆ ನಡೆಸುವ ಯುನೈಟೆಡ್ ಕಿಂಗ್ಡಮ್‌ನ ಪ್ರಾಥಮಿಕ ಸಂಸ್ಥೆಯಾದ ಬ್ರಿಟನ್‌ನ ಕ್ರೌನ್ ಪ್ರಾಸಿಕ್ಯೂಷನ್ ಸರ್ವಿಸ್ (ಸಿಪಿಎಸ್) ತಂಡವು ನವದೆಹಲಿಯ ತಿಹಾರ್ ಜೈಲಿಗೆ ಭೇಟಿ ನೀಡಿ ಅಲ್ಲಿ ಕೈದಿಗಳಿಗೆ ನೀಡುವ ಸೌಲಭ್ಯಗಳನ್ನು ಪರಿಶೀಲಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಜುಲೈನಲ್ಲಿ ನಡೆದ ಈ ಭೇಟಿಯು, ಭಾರತೀಯ ಜೈಲುಗಳಲ್ಲಿನ ಪರಿಸ್ಥಿತಿಗಳ ಬಗ್ಗೆ ಬ್ರಿಟಿಷ್ ನ್ಯಾಯಾಲಯಗಳು ಎತ್ತಿದ ಕಳವಳಗಳಿಗೆ ನೇರ ಪ್ರತಿಕ್ರಿಯೆಯಾಗಿತ್ತು ಎನ್ನಲಾಗಿದೆ. ಆ ತಂಡದಲ್ಲಿ ಬ್ರಿಟಿಷ್ ಹೈಕಮಿಷನ್ ಪ್ರತಿನಿಧಿಗಳು ಸೇರಿದಂತೆ ಐದು ಸದಸ್ಯರು, ಭದ್ರತಾ ಸೌಲಭ್ಯಗಳು ಕುರಿತು ಕೈದಿಗಳೊಂದಿಗೆ ನೇರ ಸಂಭಾಷಣೆಯಲ್ಲಿ ತೊಡಗಿದ್ದರು ಎನ್ನಲಾಗುತ್ತಿದೆ. ಈ ತಂಡವು ಭಾರತಕ್ಕೆ ಹಸ್ತಾಂತರಿ ಸಲ್ಪಟ್ಟ ಯಾವುದೇ ವ್ಯಕ್ತಿಯನ್ನು ತಿಹಾರ್ ಜೈಲಿನಲ್ಲಿ ಸುರಕ್ಷಿತ, ಮಾನವೀಯ ಮತ್ತು ಸೂಕ್ತ ವಾತಾವರಣದಲ್ಲಿ ಇರಿಸಲಾಗುವುದು ಎಂದು ಬ್ರಿಟಿಷ್ ನ್ಯಾಯಾಲಯಗಳಿಗೆ ಖಚಿತವಾದ ಭರವಸೆ ನೀಡುವುದು ಈ ಭೇಟಿಯ ಪ್ರಮುಖ ಉದ್ದೇಶವಾಗಿತ್ತು.

# ಮೈಸೂರಲ್ಲಿ ಎರಡು ದಿನಗಳ ಸೊಪ್ಪು ಮೇಳ

## •ನಾನಾ ಸೊಪ್ಪುಗಳನ್ನು ಸೇವಿಸುವುದರಿಂದ ಆರೋಗ್ಯ ಸಮೃದ್ಧ; ರಾಜ್ಯ ಮುಕ್ತ ವಿವಿ ಪ್ರಸಾರಾಂಗದ ನಿರ್ದೇಶಕ ಡಾ॥ ಆರ್. ಸಂತೋಷ್ ನಾಯಕ್ ಅಭಿಮತ •ಕಳೆನಾಶಕ ಬಳಕೆಯಿಂದ ಅಮೂಲ್ಯ ಸೊಪ್ಪು ಸಂತತಿ ಸರ್ವನಾಶ

ಮೈಸೂರು,ಸೆ.6(ಎಂಟಿವೈ)- ನೈಸರ್ಗಿಕವಾಗಿ ಬೆಳೆದ ವಿವಿಧ ಬಗೆಯ ಸೊಪ್ಪನ್ನು ಆಹಾರವಾಗಿ ಬಳಸುವುದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಂಡು, ಆರೋಗ್ಯವಂತ ಸಮಾಜ ನಿರ್ಮಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಡಾ.ಆರ್.ಸಂತೋಷ್ ನಾಯಕ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಸಹಜ ಸಮೃದ್ಧ ಸಂಸ್ಥೆ, ಹುಲಿಕಾಡು ರೈತ ಉತ್ಪಾದಕರ ಕಂಪನಿ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಎರಡು ದಿನಗಳ 'ಸೊಪ್ಪು ಮೇಳ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಹೊಲದಲ್ಲಿ ಬೆಳೆಯುತ್ತಿದ್ದ ವಿವಿಧ ಸೊಪ್ಪನ್ನು ಆಹಾರ ಪದಾರ್ಥವಾಗಿ ಬಳಸಲಾಗುತ್ತಿತ್ತು. ಈ ಸೊಪ್ಪುಗಳ ಆಹಾರ ಪದ್ಧತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮ ದೇಹಕ್ಕೆ ಯಾವ ಯಾವ ಸೊಪ್ಪು ಬೇಕಾಗುತ್ತದೆ ಎಂದು ಪತ್ತೆಹಚ್ಚಲು ಈ ಹಿಂದೆ ಸಾಕಷ್ಟು ಜನ ಪ್ರಯೋಗ ಮಾಡಿದ್ದಾರೆ. ಈ ಪ್ರಯೋಗದ ವೇಳೆ ಕೆಲವರು ಅಸುನೀಗಿದ್ದು, ಅದರಿಂದ ಯಾವ ಸೊಪ್ಪನ್ನು ತಿನ್ನಬಹುದು, ಯಾವುದನ್ನು ತಿನ್ನಬಾರದು ಎಂದು ಪೂರ್ವಿಕರೇ ಗುರುತಿಸಿದ್ದಾರೆ. ಅಂತಹ ಆಹಾರ ಪದ್ಧತಿಯಲ್ಲಿ ಬಳಸುವ ಸೊಪ್ಪುಗಳನ್ನು ತಿಂದರೆ ಆರೋಗ್ಯವಂತರಾಗಿರಬಹುದು ಎಂದರು.

ಪೂರ್ವಿಕರು ಆಹಾರ ಪದ್ಧತಿಗಳಲ್ಲಿ ಗುರುತಿಸಿರುವ ಸೊಪ್ಪುಗಳಿಗೆ ನಮ್ಮ ದೇಹ, ನಮ್ಮ ಡಿಎನ್‌ಎ ಒಗ್ಗಿಕೊಂಡಿದೆ. ಕೆಲ ವರ್ಷಗಳಿಂದ ಸೊಪ್ಪುಗಳ ಬಳಕೆ ಕಡಿಮೆಯಾಗಿರುವುದರಿಂದ ಜನರು ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ಆರೋಗ್ಯ ಕಾಪಾಡಿಕೊಳ್ಳಲು ಆಸ್ಪತ್ರೆಗಳಿಗೆ ಅಲೆಯುವಂತಾಗಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯವಂತರಾಗಿರಲು ಬೇಕಾದ ವಿಟಮಿನ್, ಪೋಷಕಾಂಶವುಳ್ಳ ಸೊಪ್ಪುಗಳನ್ನು ಆಹಾರವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಶನಿವಾರ ಎರಡು ದಿನಗಳ ಸೊಪ್ಪು ಮೇಳಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಡಾ.ಆರ್.ಸಂತೋಷ್ ನಾಯಕ್ ಚಾಲನೆ ನೀಡಿದರು.

ಈ ಹಿಂದೆ ಹೊಲದಲ್ಲಿಯೇ ಸೊಪ್ಪು ಹೆಚ್ಚಾಗಿ ಬೆಳೆಯುತ್ತಿತ್ತು. ಅಲ್ಲದೆ, ಬೆಳೆಗಳ ನಡುವೆಯೂ ಸೊಪ್ಪು ಬೆಳೆಯುತ್ತಿದ್ದವು. ಆದರೆ, ಕೆಲ ವರ್ಷಗಳಿಂದೀಚೆಗೆ ಹೊಲಗಳು, ಗದ್ದೆ ಅಥವಾ ತೋಟವಾಗಿ ಮಾರ್ಪಡುತ್ತಿವೆ. ಇದರಿಂದ ಸೊಪ್ಪು ಬೆಳೆಯುತ್ತಿಲ್ಲ. ಅಲ್ಲದೆ, ರೈತರು ಏಕಬೆಳೆ ಬೆಳೆಯಲು ಮುಂದಾಗುತ್ತಿರುವುದರಿಂದ ನೈಸರ್ಗಿಕವಾಗಿ ಬೆಳೆಯುತ್ತಿದ್ದ ಸೊಪ್ಪು ಕಣ್ಮರೆಯಾಗುತ್ತಿದೆ ಎಂದು ವಿಷಾದಿಸಿದರು.

ಇದಕ್ಕೂ ಮುನ್ನ ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಜಿ.ಕೃಷ್ಣಪ್ರಸಾದ್ ಮಾತನಾಡಿ, ಸಾಂಪ್ರದಾಯಿಕ ಆಹಾರ ಪದ್ಧತಿಗಳಲ್ಲಿ ಒಂದಾಗಿರುವ ಸೊಪ್ಪುಗಳ ಸಂತತಿ ನಾಶವಾಗುತ್ತಿವೆ. ಮನೆ ಸುತ್ತಮುತ್ತ, ಹೊಲ-ಗದ್ದೆಗಳ ಬದುಗಳ ಮೇಲೆ ಕಳೆಗಿಡ ಬೆಳೆಯದಂತೆ ತಡೆಗಟ್ಟಲು ಕ್ರಿಮಿನಾಶಕ ಸಿಂಪಡಿಸುತ್ತಿರುವುದರಿಂದ ಸೊಪ್ಪುಗಳ ಸಂತತಿ ನಾಶವಾಗುತ್ತಿದೆ. ಮಿತಿ ಮೀರಿದ ಕಳೆನಾಶಕ ಬಳಸುತ್ತಿರುವುದರಿಂದ ಜನ ಕ್ಯಾನ್ಸರ್‌ಗೆ ತುತ್ತಾಗುವಂತಾಗಿದೆ. ಈ ಹಿನ್ನೆಲೆಯಲ್ಲಿ ಇನ್ನಾದರೂ ಕಳೆನಾಶಕ ಬಳಕೆ ಕಡಿಮೆ ಮಾಡಿ, ನೈಸರ್ಗಿಕವಾಗಿ ಬೆಳೆಯುವ ಸೊಪ್ಪುಗಳನ್ನು ಬೆಳೆಸಬೇಕು ಎಂದರು.

**ಸೊಪ್ಪಿನ ಆಹಾರ ಪದಾರ್ಥ:** ಸೊಪ್ಪು ಮೇಳದಲ್ಲಿ ವಿವಿಧ ಸೊಪ್ಪು ಹಾಗೂ ಬಾಳೆ ದಿಂಡಿನಿಂದ ತಯಾರಿಸಿರುವ ವಿವಿಧ ಆಹಾರ ಪದಾರ್ಥಗಳು, ಪಾನೀಯ, ಕರಿದ ತಿನಿಸು ಸೇರಿದಂತೆ ವಿವಿಧ ಆಹಾರ ಮಳಿಗೆಗಳಿದ್ದು, ಆರೋಗ್ಯಕ್ಕೆ ಪೂರಕವಾದ ಆಹಾರ ಪದಾರ್ಥಗಳನ್ನು, ಸೊಪ್ಪು ಮೇಳದಲ್ಲಿ ಸವಿಯಬಹುದಾಗಿದೆ.

ಈ ಸಂದರ್ಭದಲ್ಲಿ ಇಲವಾಲದ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಜಿ.ಜನಾರ್ಧನ್, ಶಿವಮೊಗ್ಗದ ಪರಿಸರ ಅಧ್ಯಯನ ಕೇಂದ್ರದ ಸಂಶೋಧಕ ಮುರಳೀಧರ ಗುಂಗುರುಮಳೆ, ಹುಲಿಕಾಡು ರೈತ ಉತ್ಪಾದಕರ ಕಂಪನಿ ನಿರ್ದೇಶಕರಾದ ನಾಗಮ್ಮ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಬಿ.ಎನ್.ಜ್ಞಾನೇಂದ್ರ ನಟ ಶಿವಾಜಿರಾವ್ ಜಾದವ್, ಸಹಜ ಸಮೃದ್ಧ ಸಂಸ್ಥೆಯ ಸೀಮಾ ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

### ಮೇಳದಲ್ಲಿ ದೊರೆತ ಸೊಪ್ಪುಗಳು

ಸೊಪ್ಪು ಮೇಳದಲ್ಲಿ ನುಗ್ಗೆ, ಸೀಗೆ, ಬಳ್ಳೆ, ಹೊನಗೊನೆ, ಅಣ್ಣೆಸೊಪ್ಪು, ಹಾಲುಸೊಪ್ಪು, ಕೀರೆ, ಕಿಲ್ಕೀರೆ, ದಂಟು ಕೀರೆ, ರಾಜಕೀರೆ, ಮೆಂತ್ಯ, ಪಾಲಾಕ್, ಗೋಣಿಸೊಪ್ಪು, ಹಾಲೆಸೊಪ್ಪು, ಬಸ್ಲೆ, ಕಾಡುಮಲ್ಲಿಗೆ, ಹಾಕರಿಕೆ, ಪುಂಡಿ, ಸಣ್ಣಗೋಣಿ ಸೇರಿದಂತೆ ಇನ್ನಿತರ ಸೊಪ್ಪುಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿತ್ತು. ಅಲ್ಲದೆ, ವಿವಿಧ ಎಣ್ಣೆ-ಕಾಳುಗಳು, ಸಿರಿಧಾನ್ಯಗಳು, ದಿನಸಿ ಪದಾರ್ಥಗಳನ್ನು ಮಾರಾಟಕ್ಕಿಡಲಾಗಿದೆ. ವಿವಿಧ ಹಣ್ಣುಗಳ ಗಿಡಗಳನ್ನು ಸಹ ಮಾರಾಟ ಮಾಡಲಾಗುತ್ತಿದೆ.




**ಆಕರ್ಷಕ ಹಸಿರು ಹಾರ:** ಸೊಪ್ಪು ಮೇಳದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗಣ್ಯರು ಕೆಲ ಸೊಪ್ಪಿನ ಬಳ್ಳಿಗಳ ಕೊರಳಿಗೆ ಹಾಕಿಕೊಂಡಿದ್ದು, ಮನುಷ್ಯನ ಆರೋಗ್ಯಕ್ಕೆ ಸೊಪ್ಪು ಎಷ್ಟು ಮಹತ್ವಕಾರಿ ಎಂಬುದನ್ನು ಸಾರಿ ಹೇಳುವಂತಿತ್ತು. ಸಾಮಾನ್ಯವಾಗಿ ಹೂ ಹಾರ ಹಾಕಿಕೊಳ್ಳುವುದನ್ನು ನೋಡಿದ್ದ ಜನ, ಈ ಹಸಿರು ಸರವನ್ನು ನೋಡಿ ಅಚ್ಚರಿ ವ್ಯಕ್ತಪಡಿಸಿದರು.

# ರಸಗೊಬ್ಬರ ಮಾರಾಟದಲ್ಲಿ ರೈತರಿಗೆ ವಂಚನೆ; ಎರಡು ಮಳಿಗೆ ಲೈಸೆನ್ಸ್ ಅಮಾನತು





ಮೈಸೂರು ತಾಲೂಕಿನ ತಿ.ನರಸೀಪುರ ರಸ್ತೆಯಲ್ಲಿರುವ ಮೇಗಳಾಪುರ ಗ್ರಾಮದ ಶ್ರೀ ನಂಜುಂಡೇಶ್ವರ ಟ್ರೇಡರ್ಸ್ ಹಾಗೂ ತಾಲೂಕಿನ ಕಡಕೊಳ ಗ್ರಾಮದ ಶ್ರೀ ಮಹದೇಶ್ವರ ಫರ್ಟಿಲೈಸರ್ಸ್ ಚಿಲ್ಲರೆ ರಸಗೊಬ್ಬರ ಮಾರಾಟ ಮಳಿಗೆ ಮೇಲೆ ಕೃಷಿ ಅಧಿಕಾರಿಗಳು ದಾಳಿ ಮಾಡಿ, ಪರಿಶೀಲಿಸುತ್ತಿರುವುದು.

ಮೈಸೂರು, ಸೆ.6(ಎಂಟಿವೈ)- ರೈತರಿಗೆ ನಿಗದಿಗಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡುವ ಹಾಗೂ ಎನ್‌ಪಿಕೆ ಸಹಾಯಧನದ ರಸಗೊಬ್ಬರ ಮಾರಾಟದಲ್ಲಿ ವಂಚನೆ ಮಾಡುತ್ತಿರುವ ಮಳಿಗೆಗಳ ಮೇಲೆ ಕೃಷಿ ಅಧಿಕಾರಿಗಳು ದಾಳಿ ಆರಂಭಿಸಿದ್ದು, ಎರಡು ಮಳಿಗೆ ಮಾಲೀಕರಿಗೆ ಬಿಸಿ ಮುಟ್ಟಿಸಿದ್ದಾರೆ.

ರೈತರು ನೀಡಿದ ದೂರಿನ ಮೇರೆಗೆ ಕೃಷಿ ಅಧಿಕಾರಿಗಳು ರಸಗೊಬ್ಬರ ಮಳಿಗೆಗಳಿಗೆ ತೆರಳಿ ಪರಿಶೀಲಿಸಿದಾಗ ಎರಡು ಮಳಿಗೆಗಳಲ್ಲಿ ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ. ಮೈಸೂರು ತಾಲೂಕಿನ ತಿ.ನರಸೀಪುರ ರಸ್ತೆಯ ಮೇಗಳಾಪುರ ಗ್ರಾಮದ ಶ್ರೀ ನಂಜುಂಡೇಶ್ವರ ಟ್ರೇಡರ್ಸ್ ಹಾಗೂ ಮೈಸೂರು ತಾಲೂಕಿನ ಕಡಕೊಳ ಗ್ರಾಮದ ಶ್ರೀ ಮಹದೇಶ್ವರ ಫರ್ಟಿಲೈಸರ್ಸ್ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ರಸಗೊಬ್ಬರ ನಿಯಂತ್ರಣ ಆದೇಶ 1985 ರ ಕ್ಲಾಸ್ 4, 5 ಮತ್ತು 35 ರಲ್ಲಿನ ಸೂಚನೆಗಳ ಉಲ್ಲಂಘನೆ ಆಗಿರುವುದು ದೃಢಪಟ್ಟಿದೆ.

ಈ ಚಿಲ್ಲರೆ ರಸಗೊಬ್ಬರ ಮಾರಾಟಗಾರರು ಎನ್‌ಪಿಕೆ ಸಹಾಯಧನದ ರಸಗೊಬ್ಬರಗಳನ್ನು ಮಾರಾಟ ಮಾಡುವ ವೇಳೆ ರೈತರ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ರಸಗೊಬ್ಬರ ನೀಡದೇ ವಂಚಿಸಿರುವುದು ಕಂಡುಬಂದಿದೆ. ಅಲ್ಲದೆ, ಉದ್ದೇಶಪೂರ್ವಕವಾಗಿ ರಸಗೊಬ್ಬರ ದಾಸ್ತಾನು ನಿರ್ವಹಣೆಯಲ್ಲಿ ವ್ಯತ್ಯಾಸ ಮಾಡಿದ್ದಾರೆ. ನಿಗದಿಗಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಲಾಗುತ್ತಿದೆ. ದಾಸ್ತಾನು ಇದ್ದರೂ ಉದ್ದೇಶಪೂರ್ವಕವಾಗಿ ರಸಗೊಬ್ಬರ ನೀಡುತ್ತಿಲ್ಲ ಎಂದು ರೈತರು ಆರೋಪಿಸಿರುವ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ.

ಪರವಾನಗಿ ಪ್ರಾಧಿಕಾರ ಹಾಗೂ ಸಹಾಯಕ ಕೃಷಿ ನಿರ್ದೇಶಕ ಬಿ.ಡಿ.ಜಯರಾಮ ಅವರು ಈ ಎರಡು ಮಳಿಗೆಗಳ ಮಾಲೀಕರು ರಸಗೊಬ್ಬರ ಮಾರಾಟ, ದಾಸ್ತಾನು ವಿಚಾರದಲ್ಲಿ ಲೋಪ ಮಾಡಿರುವುದರಿಂದ ಮಳಿಗೆಗಳ ಪರವಾನಗಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿ ಆದೇಶಿಸಿದ್ದಾರೆ. ತಾಲೂಕಿನ ಎಲ್ಲಾ ಚಿಲ್ಲರೆ ರಸಗೊಬ್ಬರ ಮಾರಾಟಗಾರರು ರಸಗೊಬ್ಬರ ನಿಯಂತ್ರಣ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ತಪ್ಪಿದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದೆಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಂತ್ರಿಕ ಅಧಿಕಾರಿ ಪಿ.ಎಸ್. ಜೀವನ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಅಗತ್ಯ ವಸ್ತುಗಳ ಸುಲಭವಾಗಿ ಖರೀದಿಸಲು ಅಂಗವಿಕಲರಿಗಾಗಿ ಕೇಂದ್ರದ ಮಾರ್ಗಸೂಚಿ

ನವದೆಹಲಿ, ಸೆ.6- ಅಂಗವಿಕಲರಿಗೆ ಅಗತ್ಯ ವಸ್ತುಗಳು ಸುಲಭವಾಗಿ ದೊರಕಲು ಸಹಾಯವಾಗುವಂತೆ ಕೇಂದ್ರ ಸರ್ಕಾರವು ಕರಡು ಮಾರ್ಗಸೂಚಿಯನ್ನು ಸಿದ್ಧಪಡಿಸಿದೆ.

ಅಂಗವಿಕಲರು ವಸ್ತುಗಳನ್ನು ಮುಕ್ತವಾಗಿ ಖರೀದಿಸಲು ಸಹಾಯಕವಾಗುವಂತೆ ದೈನಂದಿನ ಬಳಕೆಯ ವಸ್ತುಗಳಲ್ಲಿ ಸಾರ್ವತ್ರಿಕ ಮತ್ತು ಸರಳ ವಿನ್ಯಾಸ, ಸ್ಪರ್ಶ ಸಂಬಂಧಿ ಲಕ್ಷಣಗಳು ಮತ್ತು ಸ್ಪಷ್ಟವಾದ ಲೇಬಲಿಂಗ್‌ಗಳು ಇರಬೇಕೆಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ 2016 ಮತ್ತು ಸುಪ್ರೀಂಕೋರ್ಟ್ ನಿರ್ದೇಶನಗಳಿಗೆ ಅನುಗುಣವಾಗಿ ಅಂಗವಿಕಲರ ಸಬಲೀಕರಣ ಇಲಾಖೆ ಸಿದ್ಧಪಡಿಸಿದ ಕರಡು, ಜಾಗತಿಕವಾಗಿ ಗುರುತಿಸಲ್ಪಟ್ಟ 'ಪಿಒಯುಆರ್' ಆಧಾರವಾಗಿಟ್ಟುಕೊಂಡಿದೆ.

ಪಾತ್ರೆ, ಆಹಾರ, ಬಟ್ಟೆ, ಮಕ್ಕಳ ಉತ್ಪನ್ನ, ಪೀಠೋಪಕರಣ, ವೈದ್ಯಕೀಯ ಉತ್ಪನ್ನಗಳು ಸೇರಿದಂತೆ ಅನೇಕ ವಸ್ತುಗಳನ್ನು ಸುಲಭವಾಗಿ ಗ್ರಹಿಸುವಂತೆ ಮಾರ್ಪಾಡು ಮಾಡಬೇಕು. ಆ ಮೂಲಕ ಅಂಗವಿಕಲರಿಗೆ ವಸ್ತು ಖರೀದಿಗೆ ನೆರವಾಗುವಂತೆ ತಿಳಿಸಿದೆ. ಮಾರ್ಗಸೂಚಿಯಲ್ಲಿ ದೈನಂದಿನ ಬಳಕೆಯ ಪ್ರಮುಖ ವಸ್ತುಗಳ 20 ವರ್ಗಗಳ ಮೇಲೆ ನಿಯಮ ರೂಪಿಸಲಾಗಿದೆ.

## ಪ್ರಗತಿಪರ ಸಂಘಟನೆಗಳ ವಿರುದ್ಧ ಆರೋಪ

# ಸೆ.10ರಂದು ಮೈಸೂರಲ್ಲಿ ಪ್ರತಿಭಟನೆಗೆ ನಿರ್ಧಾರ

ಮೈಸೂರು,ಸೆ.6(ಪಿಎಂ)- ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಅವರ ವಿರುದ್ಧ ಧರ್ಮಸ್ಥಳದ ವಿಚಾರದಲ್ಲಿ ಸುಳ್ಳು ವದಂತಿ ಹಬ್ಬಿಸಿರುವ ಮತ್ತು ಪ್ರಗತಿಪರರ ಸಂಘಟನೆಯವರನ್ನು ದುಷ್ಟಕೂಟ ಎಂದು ಅವಹೇಳನ ಮಾಡಿರುವ ವಸಂತ್ ಗಿಳಿಯಾರ್ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಮತ್ತು ಧರ್ಮಸ್ಥಳದಲ್ಲಿ ನಡೆದಿರುವ ಅತ್ಯಾಚಾರ, ಕೊಲೆ ಪ್ರಕರಣಗಳ ಸುಬಂಧ ಸೂಕ್ತ ಹಾಗೂ ತ್ವರಿಗತಿಯಲ್ಲಿ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಸೆ.10ರಂದು ಪ್ರತಿಭಟನೆ ಹಮ್ಮಿಕೊಳ್ಳಲು ನಿರ್ಣಯಿಸಲಾಗಿದೆ ಎಂದು ಪ್ರಗತಿಪರ ಸಂಘಟನೆಗಳ ಮುಖಂಡ ಉಗ್ರನರಸಿಂಹೇಗೌಡ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಚರ್ಚೆಯ ನಂತರ ಅಂತಿಮವಾಗಿ ನಿರ್ಣಯಗಳನ್ನು ಮಂಡಿಸಿದ ಅವರು, ಸೆ.10 ರಂದು ಮೈಸೂರಿನ ಚಿಕ್ಕಗಡಿಯಾರ ವೃತ್ತದಲ್ಲಿ ಪ್ರಗತಿಪರ, ರೈತ, ಮಹಿಳಾ, ದಲಿತಪರ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಸಭೆ ನಡೆಸಲಾಯಿತು.

ಧರ್ಮಸ್ಥಳದಲ್ಲಿ ನಡೆದಿರುವ ಅತ್ಯಾಚಾರ, ಕೊಲೆಗಳ ಬಗ್ಗೆ ಸರಿಯಾಗಿ ತನಿಖೆಯಾಗದೇ ಅಪರಾಧಿಗಳು ಪತ್ತೆಯಾಗಿಲ್ಲ. ಈಗಿನ ಸರ್ಕಾರ ಎಸ್‌ಐಟಿ ರಚಿಸಿದ್ದು, ಸೌಜನ್ಯ ಪ್ರಕರಣ ಸೇರಿದಂತೆ ಅಲ್ಲಿನ ಎಲ್ಲಾ ಅತ್ಯಾಚಾರ, ಕೊಲೆ ಪ್ರಕರಣಗಳ ಸಮಗ್ರ ತನಿಖೆಯಾಗಬೇಕು. ಹೀಗೆಂದು ಆಗ್ರಹಿಸುತ್ತಿರುವ ಪ್ರಗತಿಪರರ ಸಂಘಟನೆ ಮತ್ತು ಮುಖಂಡರನ್ನು ವಸಂತ ಗಿಳಿಯಾರ್ ಎನ್ನುವವರು ದುಷ್ಟಕೂಟ, ಎಡಚರು ಮತ್ತು ಬುಡಮೇಲು ಮಾಡುವವರು ಎಂಬಿತ್ಯಾದಿಯಾಗಿ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಈ ರೀತಿಯಲ್ಲಿ ಹಗುರವಾಗಿ ಮಾತನಾಡುವುದು, ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ. ಈ ರೀತಿ ಸುಳ್ಳು ಆರೋಪ ಮಾಡುತ್ತಿರುವವರೇ ಸಮಾಜದಲ್ಲಿ ಎಲ್ಲಾ ಬುಡಮೇಲು ಕೃತ್ಯ ಮಾಡುತ್ತಿದ್ದು, ರಾಜ್ಯ ಸರ್ಕಾರ ಇವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.

ಮಹೇಶ್‌ಶೆಟ್ಟಿ ತಿಮ ರೋಡಿ ಅವರು ಮೈಸೂರಿಗೆ ಆಗಮಿಸಿದ್ದಾಗಿನಿಂದ ಒಡನಾಡಿಯ ಸ್ಟ್ಯಾನ್ಲಿ ಹಾಗೂ ಪರಶು ಸೇರಿದಂತೆ ನಾವೆಲ್ಲರೂ ಅವರೊಂದಿಗೆ ನಿಂತಿದ್ದೇವೆ. ಸ್ಟ್ಯಾನ್ಲಿ ಅವರು ನಿರಂತರವಾಗಿ ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದಾರೆ. ಈಗ ವಸಂತ್ ಗಿಳಿಯಾರ್ ಎಂಬುವವರು ಸ್ಟ್ಯಾನ್ಲಿಯವರನ್ನು ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರೆಂದು ಉಲ್ಲೇಖಿಸಿ, ಇವರು ಹಿಂದೂ ಧರ್ಮದ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ ಎನ್ನುವಂತೆ ಮಾತನಾಡುತ್ತಿದ್ದು, ಇದು ಖಂಡನೀಯ ಎಂದು ಕಿಡಿಕಾರಿದರು.

ಸ್ಟ್ಯಾನ್ಲಿ, ಪರಶು, ಒಡನಾಡಿ ಹಾಗೂ ಪ್ರಗತಿಪರರ ಸಂಘಟನೆಗಳ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ವಸಂತ್ ಗಿಳಿಯಾರ್‌ಗೆ ಇಲ್ಲ. ಏಕೆಂದರೆ ಇವರು ಹಿಂದುಪರ ಎನ್ನುತ್ತಾರೆ. ಆದರೆ ಹಿಂದು ಹೆಣ್ಣು ಮಕ್ಕಳ ಮೇಲೆ ಆಗಿರುವ ದೌರ್ಜನ್ಯದ ವಿರುದ್ಧವೇ ಇವರು ಧ್ವನಿ ಎತ್ತುತ್ತಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದ ನಳೀನ್‌ಕುಮಾರ್ ಕಟೀಲ್ ಅವರು ಎರಡೂವರೆ ವರ್ಷಗಳ ಹಿಂದೆ ಸೌಜನ್ಯ ಪ್ರಕರಣವನ್ನು ಸಿಐಡಿ, ಸಿಬಿಐ ತನಿಖೆಗೆ ವಹಿಸುವಲ್ಲಿ ನಮ್ಮದೇ ಪ್ರಮುಖ ಪಾತ್ರ ಎಂದಿದ್ದರು. ಆದರೆ ಈಗಿನ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಸಿ.ಟಿ.ರವಿ ಮೊದಲಾದವರು ಅದಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಇದಕ್ಕೆ ಕಾರಣ ಏನೆಂದು ತನಿಖೆಯಾಗಬೇಕು ಎಂದು ಆಗ್ರಹಿಸಿದರು.


ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಪರಶು, ಪತ್ರಕರ್ತ ಗುರುರಾಜ್, ಡೀಡ್ ಸಂಸ್ಥೆ ನಿರ್ದೇಶಕ ಡಾ.ಎಸ್.ಶ್ರೀಕಾಂತ್, ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜು, ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ, ವಕೀಲ ಎ.ಆರ್.ಕಾಂತರಾಜ್, ಮುಖಂಡರಾದ ಸವಿತಾ ಪ.ಮಲ್ಲೇಶ್, ಕೆ.ಸುಶೀಲಾ, ಲತಾ ಕೆ.ಬಿದ್ದಪ್ಪ, ಈ.ಧನಂಜಯ ಎಲಿಯೂರು, ಪ್ರಮೋದ್ ನಾರಾಯಣ್, ಡಾ.ನಟರಾಜ್ ಶಿವಣ್ಣ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

> ಧರ್ಮಸ್ಥಳದಲ್ಲಿ ಅತ್ಯಾಚಾರ, ಕೊಲೆ ಹಾಗೂ ದೌರ್ಜನ್ಯದಿಂದ ನೊಂದಿರುವವರ ಪರವಾಗಿ ಹೋರಾಟ ಮಾಡುತ್ತಿರುವವರನ್ನು ಆಹ್ವಾನಿಸಿ ಮೈಸೂರಿನಲ್ಲಿ ದೊಡ್ಡ ಮಟ್ಟದಲ್ಲಿ ಒಂದು ದಿನದ ಕಾರ್ಯಕ್ರಮ ಆಯೋಜಿಸುವ ಉದ್ದೇಶವಿದೆ. ಜೊತೆಗೆ ಆದಷ್ಟು ಶೀಘ್ರದಲ್ಲಿ ಪ್ರಗತಿಪರ ಸಂಘಟನೆಗಳನ್ನು ದುಷ್ಟಕೂಟ ಎಂದು ಅವಹೇಳನ ಮಾಡಿರುವ ಹಾಗೂ ಸ್ಟ್ಯಾನ್ಲಿ ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿರುವ ವಸಂತ್ ಗಿಳಿಯಾರ್ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು. ರೈತ ಸಂಘ, ಪ್ರಗತಿಪರ ಸಂಘಟನೆಗಳು, ದಲಿತಪರ ಸಂಘಟನೆಗಳು ಎಲ್ಲರೂ ಒಟ್ಟಾಗಿ ದೂರು ನೀಡುತ್ತೇವೆ. ಧರ್ಮಸ್ಥಳದಲ್ಲಿ ನಡೆದಿರುವ ಅತ್ಯಾಚಾರ, ಕೊಲೆ ಪ್ರಕರಣಗಳ ಸಂಬಂಧ ಸರಿಯಾದ ತನಿಖೆಯಾಗಿ ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ನೊಂದ ಕುಟುಂಬಗಳಿಗೆ ನ್ಯಾಯ ದೊರೆಯಬೇಕು. -ಉಗ್ರನರಸಿಂಹೇಗೌಡ

ಮೈಸೂರು ಮಿತ್ರ ಭಾನುವಾರ 7 ಸೆಪ್ಟೆಂಬರ್ 2025

### ಶ್ರೀರಂಗಪಟ್ಟಣ ಬಳಿ ಬಫರ್ ವಲಯ ಅತಿಕ್ರಮಣ

# ಕಾವೇರಿ ನದಿಯ ಪಥ ಬದಲಾವಣೆ



ಬೆಂಗಳೂರು, ಸೆ.6– ಶ್ರೀರಂಗಪಟ್ಟಣ ತಾಲೂಕಿನ ಬಂಗಾರದೊಡ್ಡಿ ಅಣೆಕಟ್ಟು ಬಳಿ ಕಾವೇರಿ ನದಿ ತೀರದ ಬಫರ್ ವಲಯವನ್ನು ರೆಸಾರ್ಟ್, ಹೋಟೆಲ್‌ಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳಂತಹ ವಾಣಿಜ್ಯ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ಅತಿಕ್ರಮಣ ಮಾಡಿರುವುದರಿಂದ ನದಿಯ ಹರಿವಿನ ದಿಕ್ಕನ್ನೇ ಬದಲಾಯಿಸಿದೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಪ್ರಕರಣವನ್ನು ಕೈಗೆತ್ತಿಕೊಂಡು ಜಿಲ್ಲಾಡಳಿತಕ್ಕೆ ಅತಿಕ್ರಮಣಗಳನ್ನು ತೆರವುಗೊಳಿಸಲು ನಿರ್ದೇಶಿಸಿದ ನಂತರ ಮಂಡ್ಯ ಜಿಲ್ಲಾಡಳಿತವು ಕಾವೇರಿ ನೀರಾವರಿ ನಿಗಮಕ್ಕೆ ಹೆಚ್ಚಿನ ಪ್ರವಾಹ ಮಟ್ಟವನ್ನು ಸರಿಪಡಿಸಲು ಮತ್ತು ಬಫರ್ ವಲಯದ ಅತಿಕ್ರಮಣ ಪತ್ತೆಗೆ ಸಮೀಕ್ಷೆ ನಡೆಸುವಂತೆ ಸೂಚಿಸಿದೆ.

ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ನದಿಯ ನೈಸರ್ಗಿಕ ಪಥವನ್ನು ಬದಲಾಯಿಸಬಾರದು. ನ್ಯಾಯಾಲಯದ ಆದೇಶ ಧಿಕ್ಕರಿಸಿ ನದಿಯ ಪಥವನ್ನು ಬದಲಾಯಿಸಲಾಗಿದೆ. ಶ್ರೀರಂಗಪಟ್ಟಣದ ಕಸಬಾ ಹೋಬಳಿಯಲ್ಲಿ 164, 166, 167, 169 ಮತ್ತು 170 ರಿಂದ 178 ರವರೆಗಿನ ಭೂ ಸಮೀಕ್ಷೆಯನ್ನು ಅಧಿಕಾರಿಗಳು ಒಟ್ಟಾಗಿ ನಡೆಸಬೇಕು. ನೀರಾವರಿ ಇಲಾಖೆ ನಿರ್ವಹಿಸುವ ನದಿಯ ಭೂ ದಾಖಲೆಗಳನ್ನು ಕಂದಾಯ ದಾಖಲೆಗಳೊಂದಿಗೆ ಹೋಲಿಸಬೇಕು. ಹೆಚ್ಚಿನ ಪ್ರವಾಹ ಮಟ್ಟ ಮತ್ತು ಬಫರ್ ವಲಯವನ್ನು ಸರಿಪಡಿಸಬೇಕು ಮತ್ತು ಉಲ್ಲಂಘಿಸಿದ ಎಲ್ಲರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಉಪ ಲೋಕಾಯುಕ್ತ ಶ್ರೀರಂಗಪಟ್ಟಣ ತಹಶೀಲ್ದಾರ್‌ಗೆ ಆದೇಶಿಸಿದ್ದರು.

ಅನೇಕ ಹೋಟೆಲ್, ರೆಸಾರ್ಟ್‌ಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳು ಸ್ಥಳೀಯ ಸಂಸ್ಥೆಯಿಂದ ಶಾಸನಬದ್ಧ ಅನುಮತಿಯನ್ನು ಪಡೆದಿಲ್ಲ ಮತ್ತು ಪ್ರಾಧಿಕಾರದಿಂದ ವಾಣಿಜ್ಯ ಬಳಕೆಗೆ ಭೂಮಿಯನ್ನು ಪರಿವರ್ತಿಸಿಲ್ಲ. ಕಾನೂನುಬಾಹಿರವಾಗಿ ಹೆಚ್ಚಿನ ವಾಣಿಜ್ಯ ಸಂಸ್ಥೆಗಳನ್ನು ನಡೆಸುತ್ತಿವೆ, ಆದರೂ ಫಾರ್ಮ್‌ಹೌಸ್‌ಗಳಂತೆ ಪರಿಸರ ಸ್ನೇಹಿ ಕಟ್ಟಡಗಳಿಗೆ ಮಾತ್ರ ಅನುಮತಿಯನ್ನು ಪಡೆಯಲಾಗಿದೆ. ಬಂಗಾರದೊಡ್ಡಿ ಅಣೆಕಟ್ಟಿನ ಪಕ್ಕದಲ್ಲಿರುವ ಕಾವೇರಿ ನದಿಯ ಹೊರವಲಯದಲ್ಲಿರುವ ಹೋಟೆಲ್, ರೆಸಾರ್ಟ್, ಇತರ ಕಟ್ಟಡಗಳನ್ನು ನಿಯಮಗಳ ಪ್ರಕಾರ ನದಿಯ ಹೆಚ್ಚಿನ ಪ್ರವಾಹ ಮಟ್ಟದಿಂದ 30 ಮೀಟರ್ ಬಫರ್ ವಲಯವನ್ನು ಬಿಡದೆ ಅಕ್ರಮವಾಗಿ ನಿರ್ಮಿಸಲಾಗಿದೆ ಎಂದು ಉಪ ಲೋಕಾಯುಕ್ತರು ಹೇಳಿದ್ದಾರೆ. ಶ್ರೀರಂಗಪಟ್ಟಣ ತಹಶೀಲ್ದಾರ್ ಈ ಕಟ್ಟಡಗಳು ಅನಧಿಕೃತ ಎಂದು ತಿಳಿಸಿದ್ದಾರೆ. ಹೆಚ್ಚಿನ ಪ್ರವಾಹ ಮಟ್ಟ, ಬಫರ್ ವಲಯ ಮತ್ತು ಗಡಿಯನ್ನು ಸರಿಪಡಿಸಲು ಮತ್ತು ಅತಿಕ್ರಮಣಗಳನ್ನು ತೆಗೆದುಹಾಕಿ ವರದಿಯನ್ನು ಸಲ್ಲಿಸಲು ಉಲ್ಲಂಘಿಸುವವರಿಗೆ ನೊಟೀಸ್ ನೀಡಲು ಜಿಲ್ಲಾಡಳಿತವು ತಹಶೀಲ್ದಾರ್, ಸಿಎನ್‌ಎನ್‌ಎಲ್ ಮತ್ತು ಇತರರಿಗೆ ತಿಳಿಸಿದೆ.

## ನಾಳೆ ಅಂತರ ರಾಷ್ಟ್ರೀಯ ಸಾಕ್ಷರತಾ ದಿನಾಚರಣೆ

ಮಂಡ್ಯ, ಸೆ.6– ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಜಿಲ್ಲಾ ಕಾರಾಗೃಹದಲ್ಲಿ ಸೆ.8ರ ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜೆ.ಎನ್.ಸುಬ್ರಮಣ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ.ಕುಮಾರ ಧ್ವಜಾರೋಹಣ ನೆರವೇರಿಸುವರು. ಜಿಪಂ ಸಿಇಓ ಕೆ.ಆರ್.ನಂದಿನಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಎಂ.ಆನಂದ ಹಾಗೂ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಆಗಮಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಎಡಿಸಿ ಬಿ.ಸಿ.ಶಿವಾನಂದಮೂರ್ತಿ, ಜಿಪಂ ಉಪ ಕಾರ್ಯದರ್ಶಿ ಧನರಾಜ್ ಬೋರಾಳೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್, ಜಿಲ್ಲಾ ವಾರ್ತಾಧಿಕಾರಿ ನಿರ್ಮಲ ಮತ್ತು ಜಿಲ್ಲಾ ಕಾರಾಗೃಹ ಅಧೀಕ್ಷಕ ಟಿ.ಕೆ ಲೋಕೇಶ್ ಪಾಲ್ಗೊಳ್ಳಲಿದ್ದಾರೆ.

## ಗಣೇಶೋತ್ಸವ ಪ್ರಯುಕ್ತ ರಾಗಿಮುದ್ದೆ ತಿನ್ನುವ ಸ್ಪರ್ಧೆ



ರಾಗಿಮುದ್ದೆ ತಿನ್ನುವ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಸ್ಪರ್ಧಾಳುಗಳು

ನಾಗಮಂಗಲ,ಸೆ. 6–ತಾಲೂಕಿನ ಪಾಲಗ್ರಹಾರ ಗ್ರಾಮದಲ್ಲಿ ಶ್ರೀ ರಾಮ ಯುವಕರ ಸಂಘದಿಂದ ರಾಗಿಮುದ್ದೆ ತಿನ್ನುವ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.

ನಾಗಮಂಗಲ ತಾಲೂಕಿನ ಪಾಲಗ್ರಹಾರ ಗ್ರಾಮದಲ್ಲಿ ಶ್ರೀರಾಮ ಯುವಕರ ಸಂಘದವರು 54ನೇ ವರ್ಷದ ಶ್ರೀ ವಿದ್ಯಾ ಗಣಪತಿ ಗಣೇಶೋತ್ಸವ ಪ್ರಯುಕ್ತ ರಾಗಿ ಮುದ್ದೆ ತಿನ್ನುವ ಸ್ಪರ್ಧೆ ಏರ್ಪಡಿಸಿದ್ದು ವಿಜೇತರಿಗೆ ಮೊದಲನೇ ಬಹುಮಾನ ಟಗರು, ಎರಡನೇ ಬಹುಮಾನ ಹತ್ತು ಸಾವಿರ, ಮೂರನೇ ಬಹುಮಾನ 7,000 ಹಾಗೂ ನಾಲ್ಕನೇ ಬಹುಮಾನ ವಿಜೇತರ ಕಪ್ ಘೋಷಣೆ ಮಾಡಲಾಗಿತ್ತು .

ಗ್ರಾಮೀಣ ಭಾಗದ ಸಂಸ್ಕೃತಿಯ ಬಿಂಬಿತವಾಗಿ ಆಯೋಜನೆ ಮಾಡಿದ್ದ ರಾಗಿಮುದ್ದೆ ಸ್ಪರ್ಧೆ ಬಯಲು ಸೀಮೆಗೆ ಉತ್ತಮ ಪ್ರತಿಕ್ರಿಯೆ ನೀಡಿದ್ದು ಗ್ರಾಮೀಣ ಭಾಗದ ಸುಮಾರು 30 ಜನ ಭಾಗವಹಿಸಿದ್ದು ಸ್ಪರ್ಧೆಗಳಿಗೆ 30 ನಿಮಿಷ ಕಾಲಾವಕಾಶ ನೀಡಲಾಗಿತ್ತು. ರಾಗಿ ಮುದ್ದೆಯ ಊಟಕ್ಕೆ ರುಚಿಕರವಾದ ಸೊಪ್ಪಿನ ಸಾಂಬಾರು ವಿಶೇಷವಾಗಿ ಸೊಪ್ಪು ನೀಡಲಾಗಿತ್ತು ಈ ಸ್ಪರ್ಧಾ ಕಾರ್ಯಕ್ರಮ ನೋಡಲು ಸುಮಾರು ಸಾವಿರಾರು ಜನ ಆಗಮಿಸಿದ್ದು ವಿಶೇಷವಾಗಿತ್ತು.

ರಾಗಿ ಮುದ್ದೆ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನ ಗೆಜ್ಜೆ ಗೌಡನ ಕೊಪ್ಪಲು ಲೋಕೇಶ್, ಎರಡನೇ ಬಹುಮಾನ ನವೀನ್, ಮೂರನೇ ಬಹುಮಾನ ಶರತ್ ಕುಮಾರ್ ನಾಲ್ಕನೇ ಬಹುಮಾನ ರಾಜಣ್ಣನವರು ವಿಜೇತರಾಗಿದ್ದಾರೆ. ಊರಿನ ಗಣ್ಯರು ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು, ಸ್ಪರ್ಧಿಗಳನ್ನು ಪ್ರೋತ್ಸಾಹಿಸಿದರು.

## 1 ಗಂಟೆವರೆಗೆ ಮಾತ್ರ ದೇವರ ದರ್ಶನ

ಮೇಲುಕೋಟೆ, ಸೆ.6– ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ರಾಹುಗ್ರಸ್ತ ಚಂದ್ರಗ್ರಹಣದ ನಿಮಿತ್ತ ಭಾನುವಾರ ಮಧ್ಯಾಹ್ನ ಒಂದು ಗಂಟೆಯವರೆಗೆ ಮಾತ್ರ ದರ್ಶನವಿರುತ್ತದೆ ಎಂದು ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಶೀಲಾ ತಿಳಿಸಿದ್ದಾರೆ

ದೇವಾಲಯದಲ್ಲಿ ಬೆಳಿಗ್ಗೆ 6–30 ರಿಂದಲೇ ನಿತ್ಯಪೂಜಾ ಕೈಂಕರ್ಯಗಳು ಆರಂಭವಾಗಲಿದ್ದು ಭಕ್ತರಿಗೆ ಒಂದು ಗಂಟೆಯವರೆಗೆ ದರ್ಶನ ಇರುತ್ತದೆ. ನಂತರ 3 ಗಂಟೆಯವರೆಗೆ ಪವಿತ್ರೋತ್ಸವ ಹಾಗೂ ನಿತ್ಯಪೂಜಾ ಕೈಂಕರ್ಯಗಳು ನಡೆಯಲಿದ್ದು, ನಂತರ ದೇವಾಲಯ ಬಂದ್ ಆಗಲಿದೆ. ರಾಹುಗ್ರಸ್ತ ಚಂದ್ರಗ್ರಹಣ ಮುಕ್ತಾಯದ ನಂತರ ಸೋಮವಾರ ಬೆಳಿಗ್ಗೆ ಪುಣ್ಯಾವಾಚನ ಅಭಿಷೇಕ ನಡೆದ ನಂತರ ಬೆಳಿಗ್ಗೆ 9 ಗಂಟೆಯಿಂದ ದೇವರ ದರ್ಶನಕ್ಕೆ ಅವ ಕಾಶವಿದೆ.

ಯೋಗಾನರಸಿಂಹಸ್ವಾಮಿ ಬೆಟ್ಟದಲ್ಲೂ ಸಹ ಭಾನುವಾರ ಮಧ್ಯಾಹ್ನ 1 ಗಂಟೆಯ ನಂತರ ದೇಗುಲದ ಬಾಗಿಲನ್ನು ಮುಚ್ಚುವ ಕಾರಣ ದರ್ಶನಕ್ಕೆ ಅವಕಾಶವಿರುವುದಿಲ್ಲ, ಸೋಮವಾರ ಅಭಿಷೇಕದ ನಂತರ ದರ್ಶನವಿರುತ್ತದೆ. ಚಂದ್ರಗ್ರಹಣದಿಂದ ಬದಲಾಗುವ ದರ್ಶನದ ಸಮಯವನ್ನು ಗಮನಿಸಿ ದೇವರದರ್ಶನ ಪಡೆದುಕೊಳ್ಳಬೇಕೆಂದು ಇಒ ಶೀಲಾ, ಪಾರುಪತ್ತೇಗಾರರಾದ ಸ್ಥಾನಾ ಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಎಂ.ಎನ್ ಪಾರ್ಥಸಾರಥಿ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

# ಹಾಲು ಉತ್ಪಾದಕರ ಸಂಘಗಳು ದೇವಸ್ಥಾನಗಳಿದ್ದಂತೆ



ಸಂಘದ ವಾರ್ಷಿಕ ಸಭೆಯನ್ನುದ್ದೇಶಿಸಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿದರು.

ಪಾಂಡವಪುರ,ಸೆ.6–ಹಾಲು ಉತ್ಪಾದಕರ ಸಹಕಾರ ಸಂಘಗಳು ದೇವಸ್ಥಾನಗಳು ಇದ್ದಂತೆ. ದೇವರಿಗೆ ಭಕ್ತಿಯಿಂದ ಪೂಜೆ ಮಾಡುವ ರೀತಿಯಲ್ಲಿ ರೈತರು ಡೇರಿಗಳಿಗೆ ಪ್ರಾಮಾಣಿಕವಾಗಿ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ತಾಲೂಕಿನ ವಡ್ಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ಸಂಘದ ಮೇಲಂತಸ್ತಿನ ಕಟ್ಟಡ ಉದ್ಘಾಟನಾ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಸಹಕಾರ ಸಂಘಗಳು ಎಂದರೆ ಎಲ್ಲರೂ ಪರಸ್ಪರ ಕೈ ಜೋಡಿಸಿ ಸಂಘವನ್ನು ಅಭಿವೃದ್ಧಿಪಡಿಸಬೇಕು, ಸಂಘಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸವಾಗಿದ್ದರೆ ಅವುಗಳನ್ನು ಸರಿ ಪಡಿಸಿಕೊಂಡು ಸರ್ವತೋಮುಖವಾದ ಅಭಿವೃದ್ಧಿಗೆ ಎಲ್ಲರೂ ಕೆಲಸ ಮಾಡಬೇಕು ಎಂದು ತಿಳಿಸಿದರು.

ಹಸುಗಳ ಬೆಲೆ ದುಬಾರಿಯಾಗಿದೆ. ರೈತರು ಹಸುಗಳನ್ನು ಖರೀದಿಸಬೇಕಾದರೆ 80–90 ಸಾವಿರದವರೆಗೂ ವ್ಯಯಮಾಡಬೇಕಾಗಿದೆ. ಆದರೆ, ರಾಸುಗಳಿಗೆ ವಿಮೆ ಸೌಲಭ್ಯವನ್ನು 50–60 ಸಾವಿರಕ್ಕೆ ನಿಗಧಿಪಡಿಸಲಾಗಿದೆ. ಇದರಿಂದಾಗಿ ಒಂದು ವೇಳೆ ಹಸುಗಳು ಅಕಾಲಿಕವಾಗಿ ಸಾವನ್ನಪ್ಪಿದರೆ ರೈತರಿಗೆ ನಷ್ಟವಾಗುತ್ತಿತ್ತು, ಆದ್ದರಿಂದ ನಮ್ಮ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದ ಬಳಿಕ ರಾಸುವಿಮೆಯನ್ನು 80–90 ಸಾವಿರದವರೆಗೆ ಏರಿಕೆ ಮಾಡಲು ಆಡಳಿತ ಮಂಡಳಿ ಮುಂದೆ ಚರ್ಚಿಸಲಾಗಿದೆ ಎಂದರು.

ಡೇರಿ ಅಧ್ಯಕ್ಷ ಟಿ.ಸ್ವಾಮೀಗೌಡ ಮಾತನಾಡಿ, ವಡ್ಡರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಒಕ್ಕೂಟದಿಂದ ದೊರೆಯುವ ಸೌಲಭ್ಯಗಳನ್ನು ದೊರಕಿಸಿಕೊಡುವುದಾಗಿ ಮನ್‌ಮುಲ್ ನಿರ್ದೇಶಕರಾದ ಸಿ.ಶಿವಕುಮಾರ್ ಅವರು ಭರವಸೆ ನೀಡಿದ್ದಾರೆ. ನಮ್ಮ ಡೇರಿಯಲ್ಲಿ 98 ಸಾವಿರ ಬೋನಸ್ ಇದ್ದು ಶೀಘ್ರ ವಿತರಣೆ ಮಾಡಲಾಗುವುದು. ಸಭಾಂಗಣ ನಿರ್ಮಾಣಕ್ಕೆ ಶಾಸಕರ ಬಳಿ ಅನುದಾನಕ್ಕೆ ಬೇಡಿಕೆ ಇಡಲಾಗಿದ್ದು 5ಲಕ್ಷ ನೀಡುವ ಭರವಸೆ ನೀಡಿದ್ದಾರೆ. ಅನುದಾನಕೊಟ್ಟರೆ ಸಭಾಂಗಣ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು. ಇದಕ್ಕೂ ಮುನ್ನ ಶಾಸಕ ದರ್ಶನ್ ಪುಟ್ಟಣ್ಣಯ್ಯ ಡೇರಿಯ ಮೇಲಂತಸ್ತಿನ ಕಟ್ಟಡವನ್ನು ಉದ್ಘಾಟಿಸಿದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರಣಾಧಿಕಾರಿ ಉಷಾ, ಡೇರಿ ಉಪಾಧ್ಯಕ್ಷ ಶಿವಪ್ಪ, ನಿರ್ದೇಶಕರಾದ ವಿ.ಎಸ್.ನಿಂಗೇಗೌಡ, ಬಚ್ಚೇಗೌಡ, ಕಾಳೇಗೌಡ, ಮಂಚಮ್ಮ, ಲತಾ, ಕಾಳಯ್ಯ, ಕಾರ್ಯದರ್ಶಿ ವಿ.ಕೆ.ಗೋವಿಂದರಾಜು, ಯಾ.ಚಿಕ್ಕೆಗೌಡ, ಜವರೇಗೌಡ, ಗವೀಗೌಡ, ಸತ್ಯಪ್ಪ, ಮಾ.ಕಾಳೇಗೌಡ, ದಾಸಶೆಟ್ಟಿ, ಕಾಳೇಗೌಡ, ಮಂಚೇಗೌಡ, ಎನ್.ಸ್ವಾಮಿಗೌಡ, ಕಾಳಯ್ಯ, ಪರೀಕ್ಷಸತೀಶ್ ಕುಮಾರ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶಾಸಕ ರಮೇಶ್ ಬಾಬುರಿಂದ 250 ಮನೆಗಳಿಗೆ ಇ-ಸ್ವತ್ತು ವಿತರಣೆ

**ಶ್ರೀರಂಗಪಟ್ಟಣ:** ತಾಲೂಕಿನಾದ್ಯಂತ ಬಡವರ ಪ್ರತಿ ಮನೆ ಮನೆಗೆ ಇ–ಸ್ವತ್ತು ಮಾಡಿಕೊಡುವುದಾಗಿ ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ ಆಶ್ವಾಸನೆ ನೀಡಿದ್ದಾರೆ.

ತಾಲೂಕಿನ ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೊಗರಹಳ್ಳಿ ಗ್ರಾಮದ 250 ಮನೆಗಳವರಿಗೆ ನಮೂನೆ 9 ಮತ್ತು 11 ಎ ಖಾತೆ ಜೊತೆಗೆ ಬಾಗೀನ ನೀಡಿ, 1994ರಲ್ಲಿ ನಮ್ಮ ತಾಯಿ ಶಾಸಕರಾಗಿದ್ದಾಗ ಕೊಟ್ಟ ಹಕ್ಕು ಪತ್ರಗಳ ಸಮಸ್ಯೆ ಬಗೆಹರಿದಿರಲಿಲ್ಲ. ಕಳೆದ 50 ವರ್ಷಗಳಿಂದ ವಾಸವಿರುವ ಬಡವರಿಗೆ ನಿರ್ಗತಿಕರಿಗೆ 2 ತಿಂಗಳಲ್ಲಿ ನಿವೇಶನ ಕೊಡುತ್ತೇವೆ. ಮೂಲ ವಾಸವಿರುವವರಿಗೆ ಹಕ್ಕುಪತ್ರ ಕೊಡುತ್ತೇವೆ. ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಯಾರೂ ಆಕ್ರಮಿಸಬೇಡಿ ಎಂದು ಕಿವಿಮಾತು ಹೇಳಿದರು. ಪಿ.ಡಿ.ಓ. ಶಶಿಕಲಾ ತಂಡ ಹಾಗೂ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಎಲ್ಲರೂ ಸೇರಿ ಯಶಸ್ವಿಗೊಳಿಸಿದ್ದೀರಿ. ನಿಮಗೆಲ್ಲರಿಗೂ ಧನ್ಯವಾದಗಳು ಎಂದರು.

ಸಮಾರಂಭದಲ್ಲಿ ತಹಸೀಲ್ದಾರ್ ಚೇತನಾಯಾದವ್, ಇ.ಓ. ವೇಣು, ಗ್ರಾ.ಪಂ. ಅಧ್ಯಕ್ಷ ಚೆಲುವರಾಜು, ಉಪಾಧ್ಯಕ್ಷೆ ಸುಮಿತ್ರ, ಪಿ.ಡಿ.ಓ. ಶಶಿಕಲಾ, ಗ್ರಾಮದ ಮುಖಂಡರಾದ ವಿವೇಕ್ ಹೊಸಳ್ಳಿ ಗ್ರಾಮದ ಹಿರಿಯ ಮುಖಂಡರಾದ ಪೈಲ್ವಾನ್ ಪುಟ್ಟರಾಜು, ಗ್ರಾಪಂ ಸದಸ್ಯರಾದ ವಿಶ್ವನಾಥ್ ತರುಣ್ ಹಾಗೂ ಗ್ರಾ.ಪಂ. ಸದಸ್ಯರು, ಮುಖಂಡರು ಹಾಜರಿದ್ದರು.

## ಮನನೊಂದು ಯುವತಿ ಆತ್ಮಹತ್ಯೆ



ಕಾವ್ಯ

ಕಿಕ್ಕೇರಿ, ಸೆ.6– ನಿಶ್ಚಿತಾರ್ಥ ಮಾಡಿಕೊಂಡಿದ್ದ ಯುವಕ ಪದವೀಧರ ಎಂದು ಸುಳ್ಳು ಹೇಳಿದ್ದರಿಂದ ಮನನೊಂದು ಯುವತಿಯೊಬ್ಬಳು ಕಚೇರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಕಿಕ್ಕೇರಿಯಲ್ಲಿ ನಡೆದಿದೆ.

ಕೆ.ಆರ್.ಪೇಟೆ ತಾಲೂಕಿನ ವಳಗೆರೆ ಮೆಣಸ ಗ್ರಾಮದ ಕಾವ್ಯ(26) ಆತ್ಮಹತ್ಯೆ ಮಾಡಿಕೊಂಡ ಯುವತಿ. ಮೃತ ಯುವತಿ ಇಲ್ಲಿನ ರೈತಸಂಪರ್ಕ ಕೇಂದ್ರದಲ್ಲಿ ದಾಸ್ತಾನು ನಿರ್ವಾಹಕ ನೌಕರಳಾಗಿದ್ದಳು.

15 ದಿನಗಳ ಹಿಂದೆ ಹಾಸನದ ಕರ್ಣ ಎಂಬಾತನ ಜೊತೆ ಮದುವೆ ನಿಶ್ಚಿತಾರ್ಥ ಆಗಿತ್ತು. ಹುಡುಗನ ಮನೆಯವರು ಪದವೀಧರ ಹಾಗೂ ಉದ್ಯೋಗದಲ್ಲಿ ಇದ್ದಾನೆ ಎಂದು ಸುಳ್ಳು ಹೇಳಿ ಮದುವೆ ಮಾಡಲು ಮುಂದಾಗಿದ್ದರು. ಇದು ಹುಡುಗಿ, ಮನೆಯವರಿಗೆ ಗೊತ್ತಾಗಿ ತೀವ್ರವಾಗಿ ನೊಂದಿದ್ದ ಕಾವ್ಯಳನ್ನು ಆಕೆಯ ಪೋಷಕರು ಸಮಾಧಾನಗೊಳಿಸಿದ್ದರೆನ್ನಲಾಗಿದೆ.

ಕಾವ್ಯ ಕಚೇರಿಯಲ್ಲಿ ಕ್ರಿಮಿನಾಶಕ ಮಾತ್ರೆ ಸೇವಿಸಿ ಅಸ್ವಸ್ಥಗೊಂಡಿದ್ದಳು. ವಿಷಯ ತಿಳಿದು ಪೋಷಕರು ಕಿಕ್ಕೇರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಯುವತಿ ಮೃತಪಟ್ಟಿದ್ದಾಳೆ.

ಕಿಕ್ಕೇರಿ ಪೊಲೀಸರು ದೂರು ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

## ಕ್ಯಾಂಟರ್ ವಾಹನ ಹರಿದು ಟೂರ್ ಗೈಡ್ ಸಾವು

**ಶ್ರೀರಂಗಪಟ್ಟಣ:** ಟೂರ್ ಗೈಡ್‌ಯೊಬ್ಬನ ಮೇಲೆ ಕ್ಯಾಂಟರ್ ವಾಹನವೊಂದು ಹರಿದು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದ ಚೆಕ್ ಪೋಸ್ಟ್ ಬಳಿ ನಡೆದಿದೆ.

ಮಂಡ್ಯದ ಗಾಂಧಿನಗರ ನಿವಾಸಿ ರಮೇಶ್ (48) ಮೃತ ವ್ಯಕ್ತಿ. ಈತ ಪ್ರತಿ ನಿತ್ಯ ಕಿರಂಗೂರು ಹಾಗೂ ಪಟ್ಟಣದ ಚೆಕ್ ಪೋಸ್ಟ್‌ಗಳ ಬಳಿ ನಿಂತು ಹೊರ ರಾಜ್ಯಗಳಿಂದ ಮೈಸೂರು ಸೇರಿದಂತೆ ಕಾರ್ಖಾನೆಗಳಿಗೆ ಅಗತ್ಯ ಸರಕುಗಳನ್ನು ತುಂಬಿ ಬರುವ ಗೂಡ್ಸ್ ವಾಹನಗಳಲ್ಲಿ ಹೋಗಿ ಬರುತ್ತಿದ್ದ. ಇಂದೂ ಸಹ ನಾಗಾಲ್ಯಾಂಡ್ ಮೂಲಕ ಬರುತ್ತಿದ್ದ ಕ್ಯಾಂಟರ್ ವಾಹನಕ್ಕೆ ಕೈ ತೋರಿಸಿ, ರಸ್ತೆಗೆ ಬಂದಿದ್ದಾನೆ. ಆದರೆ ಚಾಲಕ ಅದನ್ನು ಗಮನಿಸದೆ ಬಂದಿದ್ದರಿಂದ ಈ ಘಟನೆ ಸಂಭವಿಸಿದೆಯೆಂದು ಪೊಲೀಸರು ತಿಳಿಸಿದ್ದಾರೆ. ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ತೆರಳಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಒಂದನೇ ಪುಟದಿಂದ

## ಹೈಕೋರ್ಟ್ ಮೆಟ್ಟಿಲೇರಿದ ಮಾಜಿ ಸಂಸದ ಪ್ರತಾಪ್ ಸಿಂಹ

ಕೂಡ ಸರ್ಕಾರದ ನಡೆ ವಿರೋಧಿಸಿದ್ದಾರೆ. ಸರ್ಕಾರದ ನಿರ್ಧಾರದಿಂದ ಹಿಂದೂಗಳ ಭಾವನೆಗೆ ಘಾಸಿ ಉಂಟಾಗಿದೆ. ಮುಷ್ತಾಕ್ ಅವರಿಗೆ ನೀಡಿದ ಆಹ್ವಾನ ಹಿಂಪಡೆಯಲು ನಿರ್ದೇಶಿಸುವಂತೆ ಹೈಕೋರ್ಟ್‌ಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ ಎನ್ನಲಾಗುತ್ತಿದೆ. ಈ ಬಾರಿ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್‌ರನ್ನು ಆಯ್ಕೆ ಮಾಡಿದ ವಿಚಾರವಾಗಿ ಭಾರಿ ವಿವಾದವನ್ನೇ ಸೃಷ್ಟಿಸಿದೆ. ಭುವನೇಶ್ವರಿ ಬಗ್ಗೆ ಬಾನು ಮುಷ್ತಾಕ್ ಈ ಹಿಂದೆ ಮಾತನಾಡಿರುವ ವಿಡಿಯೋ ವೈರಲ್ ಆದ ಬಳಿಕ ಕನ್ನಡಪರ ಸಂಘಟನೆ, ಹಿಂದೂ ಸಂಘಟನೆ ಹಾಗೂ ಬಿಜೆಪಿ ನಾಯಕರು ವಿರೋಧ ವ್ಯಕ್ತ ಪಡಿಸಿದ್ದರು. ಆದರೆ, ಯಾವುದಕ್ಕೂ ಬಗ್ಗದ ಕಾಂಗ್ರೆಸ್ ಸರ್ಕಾರ, ಮೈಸೂರು ಜಿಲ್ಲಾಡಳಿತದ ಮೂಲಕ ಲೇಖಕಿ ಬಾನು ಮುಷ್ತಾಕ್ ಅವರಿಗೆ ಅಧಿಕೃತ ಆಹ್ವಾನ ನೀಡಿದೆ

**ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ:** ಮತ್ತೊಂದೆಡೆ ವಿಜಯಪುರದ ಆಲಮಟ್ಟಿಯಲ್ಲಿ ಮಾತಾಡಿದ ಸಿಎಂ ಸಿದ್ದರಾಮಯ್ಯ, ಪ್ರತಾಪ್‌ಸಿಂಹ ಕೋರ್ಟ್‌ಗೆ ಹೋಗಿದ್ದು ಬಹಳ ಸಂತೋಷ. ಅದನ್ನು ಕೋರ್ಟ್ ತೀರ್ಮಾನ ಮಾಡುತ್ತದೆ ಎಂದಿದ್ದಾರೆ. ಈ ಹಿಂದೆ ನಿಸಾರ್ ಅಹ್ಮದ್ ಅವರು ದಸರಾ ಉದ್ಘಾಟನೆ ಮಾಡಿದಾಗ ಅವರು ಯಾಕೆ ಕೋರ್ಟ್‌ಗೆ ಹೋಗಲಿಲ್ಲ. ಟಿಪ್ಪು ಸುಲ್ತಾನ್ ದಸರಾ ಮಾಡಿದ್ದರಲ್ಲ, ಆಗ ಯಾಕೆ ಏನು ಮಾಡಲಿಲ್ಲ ಎಂದು ಪ್ರಶ್ನಿಸಿದ್ದಾರೆ. ಪ್ರತಾಪ್ ಸಿಂಹ ಕೋರ್ಟ್‌ಗೆ ಹೋಗಲಿ, ನಾವು ಕೂಡ ಕಾನೂನು ಹೋರಾಟ ಮಾಡುತ್ತೇವೆ. ಅವರು ಇದರಲ್ಲಿ ರಾಜಕೀಯ ಹೋರಾಟ ಮಾಡಿದರೆ, ಎಲ್ಲದಕ್ಕೂ ನಾವು ಉತ್ತರ ನೀಡುತ್ತೇವೆ ಎಂದು ಹೇಳಿದರು.

## ಜನಾರ್ಧನ ರೆಡ್ಡಿ ವಿರುದ್ಧ ಸೆಂಥಿಲ್ ಮೊಕದ್ದಮೆ

ಎಸಿಎಂ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಪಿಸಿಆರ್ ಫೈಲ್ ಮಾಡಿದ್ದು, ಸೆ.11ಕ್ಕೆ ವಿಚಾರಣೆ ನಡೆಯಲಿದೆ. ಶನಿವಾರ ಮೊಕದ್ದಮೆ ದಾಖಲಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಸೆಂಥಿಲ್, ಗಂಗಾವತಿ ಶಾಸಕರು, ಕೆಲವು ವಾಟ್ಸಾಪ್ ಸಂದೇಶವನ್ನು ಆಧರಿಸಿ ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ನಾನೇ (ಸೆಂಥಿಲ್)ಮಾಸ್ಟರ್ ಮೈಂಡ್ ಎಂದು ಆರೋಪಿಸಿದ್ದಾರೆ. ಆರಂಭದಲ್ಲಿ ನಾನು ಇಂತಹ ಬಾಲಿಶ ಕಾಮೆಂಟ್‌ಗಳಿಗೆ ಏಕೆ ಪ್ರತಿಕ್ರಿಯಿಸಬೇಕು ಎಂದುಕೊಂಡಿದ್ದೆ. ಆದರೆ ಪ್ರತಿದಿನ ಕೆಲವು ಕಥೆಗಳನ್ನು ಕಟ್ಟಲಾಗುತ್ತಿದೆ ಹೀಗಾಗಿ ರೆಡ್ಡಿ ವಿರುದ್ಧ ಕೇಸ್ ದಾಖಲಿಸಿದ್ದೇನೆ ಎಂದು ಶಶಿಕಾಂತ್ ಸೆಂಥಿಲ್ ಹೇಳಿದರು.

ಈ ಕೇಸ್‌ನಲ್ಲಿ ನನ್ನ ಹೆಸರು ಯಾಕೆ ಬಂತು ಗೊತ್ತಿಲ್ಲ. ನನ್ನ ಹೆಸರನ್ನು ತಮಿಳುನಾಡಿನ ಮಾಜಿ ಪೊಲೀಸ್ ಅಧಿಕಾರಿ ಅಲ್ಲಿ ತೆಗೆದುಕೊಂಡಿದ್ದಾರೆ. ಇದು ಹೀಗೆ ಬಿಟ್ಟರೆ ಒಂದು ಸ್ಟೋರಿ ಕ್ರಿಯೇಟ್ ಆಗುತ್ತದೆ. ನಾನು ಕಾನೂನು ಪ್ರಕಾರ ಹೋಗುತ್ತಿದ್ದೇನೆ. ತನಿಖೆಯಿಂದ ಸತ್ಯ ಹೊರಬರಲಿ. ನಾನು ಜನಾರ್ಧನರೆಡ್ಡಿಯನ್ನು ಕೊನೆ ಯದಾಗಿ ನೋಡಿದ್ದು ಬಳ್ಳಾರಿಯಲ್ಲಿ. ನನ್ನ ಕರ್ತವ್ಯದ ಮೊದಲ ದಿನವೇ ಇವರು ಅರೆಸ್ಟ್ ಆಗಿದ್ದರು. ಅನಂತರ ಇವರ ರಾಯಲ್ಟಿಯನ್ನು ನಾನು ತಡೆದಿದ್ದೆ. ಕರ್ನಾಟಕ ಪ್ರಾಪರ್ಟಿ ಲೂಟಿ ಮಾಡಿದ ವ್ಯಕ್ತಿ. ಜಡ್ಜ್‌ಗಳನ್ನೂ ಬಿಟ್ಟಿಲ್ಲ. ಕರ್ನಾಟಕದ ಸಂಪತ್ತು ಲೂಟಿ ಮಾಡಿ ಜೈಲು ಶಿಕ್ಷೆ ಅನುಭವಿಸಿರುವ ವ್ಯಕ್ತಿ ನನ್ನ ಮೇಲೆ ಆಧಾರರಹಿತ ಆರೋಪ ಮಾಡಿದ್ದಾರೆ. ಅವರ ವಿರುದ್ಧ ಕೋರ್ಟ್‌ನಲ್ಲಿ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹಾಕಿದ್ದೇನೆ ಎಂದರು.

## ಮೂವರು ಬಾಲಕರ ಸಾವು

ಅದಾನ್ ಪಾಷಾ (9), ಕೆ.ಪಿ.ಮೊಹಲ್ಲಾದ ಕಲೀಂ ಪುತ್ರ ರೆಹಾನ್ (8) ಮೈಸೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಮೆಹ್ರಾನ್ ಸಹೋದರ ಫೈಸಲ್ (11) ತೀವ್ರವಾಗಿ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕಾರಿನಲ್ಲಿದ್ದ ಇಬ್ಬರಿಗೂ ಗಾಯಗಳಾಗಿವೆ. ಅವರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಶನಿವಾರ ಬೆಳಗ್ಗೆ ಶಾಲೆಯಿಂದ ಬಂದ ಈ ನಾಲ್ವರು ಬಾಲಕರು ಟಿವಿಎಸ್ ಮೊಪೆಡ್‌ನಲ್ಲಿ ಗಾಳಿಪುರ ಬಡಾವಣೆಯಿಂದ ಕರಿವರದರಾಯನ ಬೆಟ್ಟದ ಕಡೆಗೆ ತೆರಳಲು ರಾಷ್ಟ್ರೀಯ ಹೆದ್ದಾರಿ 948ರ ಬೈಪಾಸ್ ರಸ್ತೆಯನ್ನು ದಾಟುವಾಗ ಸತ್ಯಮಂಗಲ ಕಡೆ ತೆರಳುತ್ತಿದ್ದ ಕಾರು ಮೊಪೆಡ್‌ಗೆ ಡಿಕ್ಕಿ ಹೊಡೆದಿದೆ. ನಂತರ ಕಾರು ನಿಯಂತ್ರಣ ತಪ್ಪಿ ಎದುರಿಗೆ ಬರುತ್ತಿದ್ದ ಲಾರಿಗೂ ಡಿಕ್ಕಿ ಹೊಡೆದಿದೆ. ಆಗ ಮೊಪೆಡ್ ಲಾರಿಯಡಿಗೆ ಸಿಲುಕಿದ್ದು, ರಸ್ತೆಗೆ ಬಿದ್ದ ನಾಲ್ವರು ಬಾಲಕರಲ್ಲಿ ಓರ್ವ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ತೀವ್ರವಾಗಿ ಗಾಯಗೊಂಡ ಇನ್ನು ಮೂವರು ಬಾಲಕರನ್ನು ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಬಾಲಕರು ಶನಿವಾರ ರಾತ್ರಿ ಮೃತಪಟ್ಟಿದ್ದಾರೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ. ಕೂಡಲೇ ಸಂಚಾರಿ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಹನುಮಂತ ಉಪ್ಪಾರ್ ಹಾಗೂ ಪೇದೆಗಳು ಸ್ಥಳಕ್ಕೆ ತೆರಳಿ ಗಾಯಗೊಂಡಿದ್ದ ಬಾಲಕರನ್ನು ಆಸ್ಪತ್ರೆಗೆ ದಾಖಲಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಸಿಮ್ಸ್ ಆಸ್ಪತ್ರೆಗೆ ತೆರಳಿ ಮೃತ ಬಾಲಕರ ಪೋಷಕರಿಗೆ ಸಾಂತ್ವನ ಹೇಳಿದರು. ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಮಾಂಡೋ ಪಡೆ ಸರ್ಪಗಾವಲಲ್ಲಿ ಗಜಪಡೆ ತಾಲೀಮು



ಗಜಪಡೆ ತಾಲೀಮಿನೊಂದಿಗೆ ಅಶ್ವದಳ ಪೊಲೀಸರು ಸಾಗುತ್ತಿರುವುದು.

**ಶನಿವಾರ ಸಂಜೆ ಗಜಪಡೆಯ 14 ಆನೆಗಳಿಗೆ ತಾಲೀಮು ನಡೆಸಲಾಯಿತು. ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನವಿರುವ ಅರಮನೆ ಉತ್ತರ ದ್ವಾರದ ಬಲರಾಮ ದ್ವಾರದ ಮೂಲಕ ಹೊರಬಂದು, ಬಳಿಕ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದವರೆಗೆ ತಾಲೀಮು ನೀಡಲಾಯಿತು. ಮತ್ತೆ ಅದೇ ಮಾರ್ಗದಲ್ಲಿ ಅರಮನೆ ಆವರಣಕ್ಕೆ ಕರೆದೊಯ್ಯಲಾಯಿತು. ಇಂದಿನ ತಾಲೀಮು ವೇಳೆ ಕಮಾಂಡೋ ಪಡೆಯ ಭದ್ರತೆ ವಿಶೇಷವಾಗಿ ಗಮನಸೆಳೆಯಿತು.**

ಜೊತೆಗೆ ಅಶ್ವದಳದ ಬೆಂಗಾವಲು ಸಹ ಕಲ್ಪಿಸಲಾಗಿದೆ. ದಸರಾ ಮಹೋತ್ಸವ ಉದ್ಘಾಟನೆಗೆ ದಿನಗಣನೆ ಆರಂಭವಾಗಿದ್ದು, ಅಂತೆಯೇ ಮೈಸೂರು ನಗರದ ರಾಜಮಾರ್ಗದಲ್ಲಿ ಅಭಿಮನ್ಯು ನೇತೃತ್ವದ 14 ಆನೆಗಳಿಗೆ ನಿತ್ಯ ತಾಲೀಮು ನಡೆಸಲಾಗುತ್ತಿದೆ. ಈ ಆನೆಗಳ ಪೈಕಿ ಮತ್ತಿಗೋಡು ಶಿಬಿರದ ಶ್ರೀಕಂಠ, ಭೀಮನ ಕಟ್ಟೆ ಶಿಬಿರದ ರೂಪ ಹಾಗೂ ದುಬಾರೆ ಶಿಬಿರದ ಹೇಮಾವತಿಗೆ ಇದು ಮೊಟ್ಟ ಮೊದಲ ದಸರಾ. ಇದೇ ಮೊದಲ ಬಾರಿ ಮೈಸೂರಿಗೆ ಆಗಮಿಸಿರುವ ಈ ಆನೆಗಳು ಸಹ ಸೌಮ್ಯ ಸ್ವಭಾವ ಹೊಂದಿವೆ. ಅದಾಗ್ಯೂ ವಾಹನ ಹಾಗೂ ಜನದಟ್ಟಣೆಯ ನಗರದ ರಸ್ತೆಗಳಲ್ಲಿ ಈ ಎಲ್ಲಾ ಆನೆಗಳು ಸಾಗುವಾಗ ಮುನ್ನೆಚ್ಚರಿಕೆ ದೃಷ್ಟಿಯಿಂದ ಭದ್ರತೆ ವಹಿಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತಾದರೂ ಗಜಪಡೆಯ ಅಕ್ಕಪಕ್ಕದಲ್ಲಿ ವಾಹನಗಳು ಸಾಗುವ ಸನ್ನಿವೇಶ ತಾಲೀಮು ವೇಳೆ ಕಂಡುಬರುತ್ತಿತ್ತು. ಆ ಮೂಲಕ ಅವುಗಳ ಸುಗಮ ತಾಲೀಮಿಗೆ ಒಂದು ರೀತಿಯಲ್ಲಿ ಅಡಚಣೆ ಉಂಟಾಗುತ್ತಿತ್ತು. ಹೀಗಿದ್ದರೂ ಸೌಮ್ಯ ಸ್ವಾಭಾವದ ಎಲ್ಲಾ ಆನೆಗಳು ಯಾವುದೇ ರೀತಿಯಲ್ಲಿ ವಿಚಲಿತಗೊಂಡ ಪ್ರಸಂಗ ಸದ್ಯ ಕಂಡುಬರಲಿಲ್ಲ.

ಕಳೆದ ವರ್ಷ ಕಜನ್ ಹಾಗೂ ಧನಂಜಯ ಅರಮನೆ ಆವರಣದಿಂದ ಹೊರಬಂದು ಕಾದಾಟಕ್ಕಿಳಿದಿದ್ದವು. ಹಾಗಾಗಿ ಎಲ್ಲಾ ಸಂದರ್ಭವು ಒಂದೇ ರೀತಿ ಇರಲು ಸಾಧ್ಯವಿಲ್ಲ. ಹೀಗಾಗಿ ಗಜಪಡೆಯಿಂದ ಸಾರ್ವಜನಿಕರು ಅಂತರ ಕಾಯ್ದುಕೊಳ್ಳುವುದು ಅಗತ್ಯ. ಆದರೆ ಬಹುತೇಕ ಸಂದರ್ಭದಲ್ಲಿ ತಾಲೀಮು ವೇಳೆ ಸಾರ್ವಜನಿಕರು ಅವುಗಳ ಸಮೀಪಕ್ಕೆ ಸುಳಿಯುವ ಸನ್ನಿವೇಶ ಆಗಾಗ್ಗೆ ಕಂಡುಬರುತ್ತಿತ್ತು.

ರಸ್ತೆ ಬದಿಗಳಲ್ಲಿ ಆನೆಗಳು ಬರುವಿಕೆಗಾಗಿ ಕಾದು ನಿಲ್ಲುವ ಜನರ ಪೈಕಿ ಹರ್ಷೋದ್ಗಾರದೊಂದಿಗೆ ಸಿಳ್ಳೆ ಕೇಕೆ ಹಾಕುವವರೇ ಹೆಚ್ಚು. ಜೊತೆಗೆ ಎಷ್ಟೋ ಮಹಿಳೆಯರು ತಮ್ಮ ಚಿಕ್ಕ ಮಕ್ಕಳೊಂದಿಗೆ ಆನೆಗಳನ್ನು ನೋಡಲು ಕಾದು ನಿಲ್ಲುವುದು ಈಗ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಸರ್ವೇ ಸಾಮಾನ್ಯ. ಹಾಗಾಗಿ ಕೇವಲ ಒಂದು ಆನೆ ವಿಚಲಿತಗೊಂಡರೂ ಅಪಾಯದ ಪರಿಣಾಮ ಊಹಿಸಲಾಗದು.

ಇಷ್ಟು ದಿನ ವಾಹನಗಳ ಹಾರನ್ ಸದ್ದಿಗೂ ಸದ್ಯ ಯಾವುದೇ ಆನೆ ಉದ್ರಿಕ್ತಗೊಂಡಿಲ್ಲ. ಇಂತಹ ಅಡಚಣೆಗಳ ನಡುವೆಯೂ ಅತ್ಯಂತ ಸಾವಧಾನವಾಗಿ ಅವುಗಳನ್ನು ತಾಲೀಮಿನಲ್ಲಿ ತೊಡಗಿಸುವಲ್ಲಿ ಮಾವುತರು, ಕಾವಾಡಿಗಳು, ಪೊಲೀಸ್ ಹಾಗೂ ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಆದರೆ ಇದೇ ರೀತಿಯ ದಟ್ಟಣೆ, ಸಾರ್ವಜನಿಕರ ಕೂಗಾಟ ಮುಂದುವರೆದರೆ, ಅಪಾಯದ ಸನ್ನಿವೇಶ ತಳ್ಳಿ ಹಾಕಲಾಗದು. ಹಾಗಾಗಿ ತಾಲೀಮು ಸಂದರ್ಭದಲ್ಲಿ ಗಜಪಡೆ ಸುತ್ತಮುತ್ತಲು ವಾಹನ ದಟ್ಟಣೆ ಉಂಟಾಗಿದ್ದರ ಬಗ್ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಚಿತ್ರ ವರದಿ ಪ್ರಕಟವಾಗಿತ್ತು.

ಆ ಬಳಿಕ ಗಜಪಡೆ ಸಾಗುವ ಮಾರ್ಗದಲ್ಲಿ ಜನ ಹಾಗೂ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಿ ಹೆಚ್ಚಿನ ಸುರಕ್ಷತಾ ಕ್ರಮ ವಹಿಸಲಾಗಿತ್ತು. ಇದೀಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗಜಪಡೆ ಸುತ್ತಲು ಕಮಾಂಡೋ ಪಡೆ ನಿಯೋಜಿಸುವ ಮೂಲಕ ಭಾರೀ ಭದ್ರತೆ ಕ್ರಮ ವಹಿಸಲಾಗಿದೆ. ಈ ಪಡೆಯವರು ಈಗ ಗಜಪಡೆ ಸುತ್ತಮುತ್ತ ಸಾರ್ವಜನಿಕರು ಸುಳಿಯದಂತೆ ಕಟ್ಟೆಚ್ಚರ ವಹಿಸುತ್ತಿದ್ದಾರೆ. ಜೊತೆಗೆ ಪೊಲೀಸರು, ಸಂಚಾರ ಪೊಲೀಸರು ಹಾಗೂ ಅರಣ್ಯ ಇಲಾಖೆ ಗಜಪಡೆಗೆ ಭದ್ರತೆ ಕಲ್ಪಿಸಿದ್ದಾರೆ.

### ಇಂದು ಧನಂಜಯನಿಗೆ ಭಾರ ಹೊರುವ ತಾಲೀಮು...

ಭಾನುವಾರ (ಸೆ.7) ಸಂಜೆ 4 ಗಂಟೆಗೆ ಧನಂಜಯ ಆನೆಗೆ ಭಾರ ಹೊರುವ ತಾಲೀಮು ಹಮ್ಮಿಕೊಳ್ಳಲಾಗಿದೆ. ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ ಭಾರ ಹೊತ್ತು ಸಾಗಲಿದ್ದಾನೆ. ಗಾದಿ, ನಮ್ದಾ ಹಾಗೂ ಮರಳು ಮೂಟೆಗಳನ್ನು ಧನಂಜಯನಿಗೆ ಹೊರಿಸುವ ಮೂಲಕ ಅಂಬಾರಿ ಹೊರುವ ಹೆಚ್ಚುವರಿ ಆನೆಯಾಗಿ ಇದನ್ನು ಸಜ್ಜುಗೊಳಿಸಲಾಗುತ್ತದೆ.

## ಚಿನ್ನಯ್ಯಗೆ 14 ದಿನ ನ್ಯಾಯಾಂಗ ಬಂಧನ

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತು ಹಾಕಿದ್ದೇನೆ ಎಂದು ಹೇಳಿಕೊಂಡು ಪ್ರತ್ಯಕ್ಷನಾಗಿದ್ದ ಈತನ ಹೇಳಿಕೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿ ತನಿಖೆಗೆ ಆದೇಶ ನೀಡಿತ್ತು. ಆದರೆ ತನಿಖೆಯಲ್ಲಿ ಟ್ವಿಸ್ಟ್ ಸಿಕ್ಕಿದ್ದು, ದೂರುದಾರ ಚಿನ್ನಯ್ಯನ ವಿರುದ್ಧವೇ ತನಿಖೆಯ ತೂಗುಗತ್ತಿ ತಿರುಗಿತ್ತು. ತಾನು ದೊಡ್ಡದೊಂದು ತಂಡದ ಷಡ್ಯಂತ್ರದ ಭಾಗ ಎಂದು ಆತ ಒಪ್ಪಿಕೊಂಡಿದ್ದಾನೆ. ಆ.23ರಂದು ಎಸ್‌ಐಟಿ ಅಧಿಕಾರಿಗಳು ಚಿನ್ನಯ್ಯನನ್ನು ಬಂಧಿಸಿ ಕೋರ್ಟಿಗೆ ಹಾಜರುಪಡಿಸಿದ್ದರು. ಹೆಚ್ಚಿನ ವಿಚಾರಣೆಗಾಗಿ ಕೋರ್ಟ್ ಆರೋಪಿಯನ್ನು 12 ದಿನಗಳ ಕಾಲ ಎಸ್‌ಐಟಿ ಕಸ್ಟಡಿಗೆ ನೀಡಿತ್ತು. ಬಳಿಕ ಮತ್ತೆ 3 ದಿನ ಕಸ್ಟಡಿಗೆ ಪೊಲೀಸರು ಪಡೆದಿದ್ದರು. ಇದೀಗ ಒಟ್ಟು 15 ದಿನಗಳ ಕಾಲ ಎಸ್‌ಐಟಿ ಕಸ್ಟಡಿ ನಂತರ ಚಿನ್ನಯ್ಯ ಜೈಲು ಪಾಲಾಗಿದ್ದಾನೆ.

## ಸೆ.22ರಿಂದಷ್ಟೇ ಸಮೀಕ್ಷೆ

ಆಧಾರದಲ್ಲಿ ಸಮೀಕ್ಷೆಯ ಸ್ಟಿಕ್ಕರ್‌ಗಳನ್ನು ಅಂಟಿಸುತ್ತಿದ್ದಾರೆ.

**ಮಾಹಿತಿ ಕೊರತೆ–ಗೊಂದಲ:** ಸಾಮಾ ಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗೆ ಸಹಕಾರ ನೀಡುತ್ತಿರುವ ಸೆಸ್ಕ್ ಸಿಬ್ಬಂದಿಯೇ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗುತ್ತಿದ್ದಾರೆ. ಸಮೀಕ್ಷೆ ಬಗ್ಗೆ ಸಮರ್ಪಕ ಮಾಹಿತಿ ಇಲ್ಲದಿರುವುದರಿಂದ ಮೀಟರ್ ಬಾಕ್ಸ್ ಅಥವಾ ಮನೆ ಬಾಗಿಲಿಗೆ ಸ್ಟಿಕ್ಕರ್ ಅಂಟಿಸುವ ಸಿಬ್ಬಂದಿ ವಿರುದ್ಧವೇ ಕಿಡಿಕಾರುತ್ತಿದ್ದಾರೆ. ಒಳ ಮೀಸಲಾತಿ ಸಮೀಕ್ಷೆ ವೇಳೆ ಕೆಲವೆಡೆ ಗೊಂದಲ ಉಂಟಾಗಿದ್ದರಿಂದ ಈ ಸಮೀಕ್ಷೆಯನ್ನೂ ಅನುಮಾನಿಸುತ್ತಿದ್ದಾರೆ. ಸಮೀಕ್ಷೆ ನಡೆಸಿರುವುದಾಗಿ ಸ್ಟಿಕ್ಕರ್ ಅಂಟಿಸುತ್ತಿದ್ದಾರೆ. ಆದರೆ ನಮ್ಮನ್ನು ಸಂಪರ್ಕಿಸಿಯೇ ಇಲ್ಲ ಎಂದು ಜನ ಆಕ್ಷೇಪಿಸುತ್ತಿದ್ದಾರೆ. ಆದರೆ, ಇದು ತಪ್ಪು. ಸಮೀಕ್ಷೆ ಇನ್ನೂ ಆರಂಭವಾಗಿಲ್ಲ. ಯಾರು ಸಮೀಕ್ಷೆಯಿಂದ ಕೈಬಿಟ್ಟು ಹೋಗಬಾರದೆಂದೇ ಮೊದಲಿಗೆ ಮನೆ ಪಟ್ಟಿ ಮಾಡಲಾಗುತ್ತಿದೆ.

**ಸ್ಟಿಕ್ಕರ್ ತೆಗೆಯಬೇಡಿ:** ಸದ್ಯ ಸ್ಟಿಕ್ಕರ್ ಅಂಟಿಸುತ್ತಿರುವುದು ಸಮೀಕ್ಷೆ ನಡೆಸ ಲಾಗಿದೆ ಎಂದಲ್ಲ. ವಾಸದ ಮನೆಗಳ ವಿದ್ಯುತ್ ಬಿಲ್ಲಿನ ಆರ್‌ಆರ್ ಸಂಖ್ಯೆ ಆಧಾರದಲ್ಲಿ ಸ್ಟಿಕ್ಕರ್ ಅಂಟಿಸಿ, ಅದರಲ್ಲಿ ವಿಶಿಷ್ಟ ಮನೆ ಗುರುತಿನ ಸಂಖ್ಯೆ (ಯುಹೆಚ್‌ಐಡಿ ನಂಬರ್) ಯನ್ನು ನಮೂದಿಸುವ ಕಾರ್ಯವನ್ನಷ್ಟೇ ಸೆಸ್ಕ್ ಸಿಬ್ಬಂದಿ ಮಾಡುತ್ತಿದ್ದಾರೆ. ಇವರು ಮನೆ ಮನೆಯಲ್ಲಿ ಕುಟುಂಬದ ವಿವರ ಕೇಳುವ ಅವಶ್ಯಕತೆ ಇಲ್ಲ. ಸ್ಟಿಕ್ಕರ್‌ನಲ್ಲಿ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಮಾಹಿತಿ ಇದ್ದು, 'ಸ್ಟಿಕ್ಕರ್ ತೆಗೆಯಬೇಡಿ' ಎಂದು ದಪ್ಪಕ್ಷರ ದಲ್ಲಿ ಬರೆಯಲಾಗಿದೆ. ಜೊತೆಗೆ ಸಹಾಯವಾಣಿ ಸಂಖ್ಯೆಯನ್ನೂ ನೀಡಲಾಗಿದೆ. ಸಮೀಕ್ಷೆ ಐಡಿ ಸಂಖ್ಯೆಯ ಕಾಲಂ ಖಾಲಿ ಇದ್ದು, ಸಮೀಕ್ಷೆ ವೇಳೆ ಅದನ್ನು ಭರ್ತಿ ಮಾಡಲಾಗುತ್ತದೆ. ಆತಂಕಗೊಂಡು ಸ್ಟಿಕ್ಕರ್ ಕಿತ್ತು ಹಾಕಿದರೆ ಸಮೀಕ್ಷೆ ವೇಳೆ ಮನೆ ತಪ್ಪಿಹೋಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಬಗ್ಗೆ ಗೊಂದಲಕ್ಕೀಡಾಗುವ ಅಗತ್ಯವಿಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಮನೆ ಮನೆ ಭೇಟಿ:** ವಿದ್ಯುತ್ ಸರಬರಾಜು ನಿಗಮಗಳು ವಿದ್ಯುತ್ ಬಿಲ್‌ನ ಆರ್‌ಆರ್ ಸಂಖ್ಯೆ ಆಧಾರದಲ್ಲಿ ಸ್ಟಿಕ್ಕರ್ ಅಂಟಿಸಿ ಅದರಲ್ಲಿ ನಮೂದಿಸಿರುವ ಯುಹೆಚ್‌ಐಡಿಗಳನ್ನು ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲ್ಲಿಸುತ್ತವೆ. ಈ ಸಂಖ್ಯೆಗಳ ಆಧಾರದಲ್ಲಿ ಮನೆಗಳನ್ನು ಗುರುತಿಸಿ, ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ಸಮೀಕ್ಷೆ ನಡೆಸಲಾಗುತ್ತದೆ. ಸಮೀಕ್ಷೆದಾರರು ಮನೆಗಳಿಗೆ ಭೇಟಿ ನೀಡಿ, ಸುಮಾರು 65 ಪ್ರಶ್ನಾವಳಿಗಳ ಮೂಲಕ ಕುಟುಂಬಗಳ ಮಾಹಿತಿ ಸಂಗ್ರಹಿಸುತ್ತಾರೆ. ವಿದ್ಯುತ್ ಸಂಪರ್ಕ ಇಲ್ಲದ ವಾಸದ ಮನೆಗಳಿಗೂ ಸ್ಥಳೀಯ ಆಡಳಿತ ಸಂಸ್ಥೆಯ ಅಧಿಕಾರಿಗಳ ಸಹಕಾರದೊಂದಿಗೆ ಜಿಯೊ ಮ್ಯಾಪಿಂಗ್ ಮೂಲಕ ಸಮೀಕ್ಷೆ ನಡೆಸಲಾಗುತ್ತದೆ.

## 2ನೇ ಸುತ್ತಿನ ವೈದ್ಯಕೀಯ ಕೋರ್ಸ್ ಕೌನ್ಸೆಲಿಂಗ್

**ಬೆಂಗಳೂರು:** ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಮುಂದುವರಿದ ಸುತ್ತು ಹಾಗೂ ಎಂಜಿನಿಯರಿಂಗ್ ಇತ್ಯಾದಿ ಯುಜಿಸಿಇಟಿ ಕೋರ್ಸ್‌ಗಳ 3ನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಶನಿವಾರದಿಂದ ಆರಂಭವಾಗಿದ್ದು, ಕಾಷನ್ ಡೆಪಾ ಸಿಟ್ ಪಾವತಿಸಿ, ಇಚ್ಛೆ/ಆಯ್ಕೆಗಳನ್ನು ಅದಲು/ಬದಲು ಮಾಡಿಕೊಳ್ಳಲು ಹಾಗೂ ಹೊಸದಾಗಿ ಸೇರಿಸುವುದಕ್ಕೆ ಸೆ.8ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿ ಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ, ತಿಳಿಸಿದ್ದಾರೆ.

ಸಮಯದ ಅಭಾವ ಇರುವ ಕಾರಣ, ನಿಗದಿತ ಕಾಲ ಮಿತಿಯಲ್ಲೇ ಎಲ್ಲ ಪೋಷಕರು/ವಿದ್ಯಾರ್ಥಿಗಳು ಮುಂಗಡ ಹಣ ಪಾವತಿಸಿ, ಇಚ್ಛೆ/ಆಯ್ಕೆಗಳನ್ನು ದಾಖಲಿಸುವ/ ಅದಲು–ಬದಲು ಮಾಡುವ ಕೆಲಸ ಮಾಡಬೇಕು. ಸೀಟ್ ಮ್ಯಾಟ್ರಿಕ್ಸ್‌ಗೆ ಹೊಸದಾಗಿ ಸೇರ್ಪಡೆಯಾದ ಬೆಳಗಾವಿಯ ಜೆಎನ್‌ಎಂಸಿ ಕಾಲೇಜಿನ 12 ವೈದ್ಯಕೀಯ ಸೀಟು ಹಾಗೂ ಮೈಸೂರಿನ ಫರೂಕಿಯ ದಂತ ವೈದ್ಯಕೀಯ ಕಾಲೇಜಿನ 40 ಸೀಟು ಹಾಗೂ ಬಿಜಿಎಸ್ ಗ್ಲೋಬಲ್ ದಂತ ವೈದ್ಯಕೀಯ ಕಾಲೇಜಿನ 50 ಸೀಟುಗಳನ್ನು ಆಸಕ್ತರು ತಮ್ಮ ಇಚ್ಛೆ/ಆಯ್ಕೆಗಳ ಪಟ್ಟಿಗೆ ಹೊಸದಾಗಿ ಸೇರಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಇದಲ್ಲದೆ, ಹಾಲಿ ಇರುವ ಇಚ್ಛೆ/ಆಯ್ಕೆಗಳನ್ನು ಬದಲಿಸಿಕೊಳ್ಳುವುದಕ್ಕೂ ಅವಕಾಶ ನೀಡಲಾಗಿದೆ.

8 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ 400 ವೈದ್ಯಕೀಯ ಸೀಟುಗಳು ಸೇರ್ಪಡೆಯಾಗಿದ್ದು, ಅವುಗಳನ್ನು ಈ ಸುತ್ತಿಗೆ ಪರಿಗಣಿಸಲಾಗುತ್ತದೆ. ಅಲ್ಲದೆ, ಈ ಸರ್ಕಾರಿ ಕಾಲೇಜುಗಳಲ್ಲಿ 25 ಲಕ್ಷ ರೂ.ಗೆ ಎನ್‌ಆರ್‌ಐ ಸೀಟುಗಳನ್ನು ಸರ್ಕಾರ ಕೊಟ್ಟಿದ್ದು, ಅರ್ಹ ಎನ್‌ಆರ್‌ಐ ಅಭ್ಯರ್ಥಿಗಳು ಹೊಸದಾಗಿ ಸದರಿ ಕಾಲೇಜುಗಳ ಸೀಟುಗಳಿಗೆ ಇಚ್ಛೆ/ಆಯ್ಕೆಗಳನ್ನು ನಮೂದಿಸಬಹುದು. ಎನ್‌ಆರ್‌ಐ ಅಲ್ಲದ ಅಭ್ಯರ್ಥಿಗಳೂ ಈ ಕಾಲೇಜುಗಳಲ್ಲಿ 'ಕ್ಯೂ' ಸೀಟುಗಳಿಗೆ ಇಚ್ಛೆ/ಆಯ್ಕೆಗಳನ್ನು ದಾಖಲಿಸಬಹುದು. ಭರ್ತಿಯಾಗದೆ ಉಳಿಯುವ ಎನ್‌ಆರ್‌ಐ ಸೀಟುಗಳನ್ನು 'ಕ್ಯೂ' ಸೀಟುಗಳನ್ನಾಗಿ ಪರಿವರ್ತಿಸಿ, ಹಂಚಲಾಗುವುದು ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ



# ಉದ್ಬೂರು ಆಯುಷ್ಮಾನ್ ಆರೋಗ್ಯ ಕೇಂದ್ರಕ್ಕೆ ರಾಷ್ಟ್ರೀಯ ಮಾನ್ಯತೆ ಗರಿ



ಮೈಸೂರು ತಾಲೂಕಿನ ಉದ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಗುಣಮಟ್ಟದ ಚಿಕಿತ್ಸೆಗೆ ರಾಷ್ಟ್ರೀಯ ಮಾನ್ಯತೆಯೊಂದಿಗೆ ಆಯುಷ್ಮಾನ್ ಆರೋಗ್ಯ ಮಂದಿರವಾಗಿ ಹೊರಹೊಮ್ಮಲು ಕಾರಣರಾದ ಆರೋಗ್ಯ ಕೇಂದ್ರದ ಸಿಬ್ಬಂದಿ.

ಮೈಸೂರು,ಸೆ.6(ಎಂಟಿವೈ)– ಮೈಸೂರು ತಾಲೂಕಿನ ಉದ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಗುಣಮಟ್ಟದ ಚಿಕಿತ್ಸೆಗಾಗಿ ನೀಡುವ ರಾಷ್ಟ್ರೀಯ ಮಾನ್ಯತೆ ದೊರೆತಿದ್ದು, ಆಯುಷ್ಮಾನ್ ಆರೋಗ್ಯ ಮಂದಿರವಾಗಿ ಹೊರಹೊಮ್ಮಿದೆ.

ಆರೋಗ್ಯ ಇಲಾಖೆ 2020–2030ರ ದಶಕವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುಣಮಟ್ಟದ ಸೇವೆಗಳ ದಶಕವೆಂದು ಘೋಷಿಸಿದೆ. ಈ ನಿಟ್ಟಿನಲ್ಲಿ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುವುದರೊಂದಿಗೆ ಸಕಾಲದಲ್ಲಿ ಅಗತ್ಯ ಔಷಧೋಪಚಾರ ಮಾಡುವುದನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹಲವು ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರು ಅವಲಂಬಿಸಿರುವ ವಿವಿಧ ಆರೋಗ್ಯ ಕೇಂದ್ರಗಳಲ್ಲಿ ದೊರೆಯುವ ವೈದ್ಯಕೀಯ ಸೌಲಭ್ಯ ಉತ್ತಮಗೊಳಿಸಲು ಉದ್ದೇಶಿಸಲಾಗಿದೆ.

ಇದರ ಅಂಗವಾಗಿ 15,000 ಜನಸಂಖ್ಯೆ ಹೊಂದಿರುವ ತಾಲೂಕಿನ ಉದ್ಬೂರು ಆಯುಷ್ಮಾನ್ ಆರೋಗ್ಯ ಕೇಂದ್ರದ ವೈದ್ಯರು ಮತ್ತು ಸಿಬ್ಬಂದಿ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡದಡಿ ನಾಗರಿಕರಿಗೆ ಉತ್ತಮ ಸೇವೆ ನೀಡುತ್ತಿದ್ದಾರೆ. ಹೀಗಾಗಿ ಈ ಕೇಂದ್ರವು 2024–25ನೇ ಸಾಲಿನ ರಾಷ್ಟ್ರೀಯ ಮಾನ್ಯತೆ ಪಡೆದ ಜಿಲ್ಲೆಯ ಅತ್ಯುತ್ತಮ ಆಯುಷ್ಮಾನ್ ಆರೋಗ್ಯ ಕೇಂದ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಎಲ್ಲರಿಗೂ ಆರೋಗ್ಯ ಸೇವೆ ದೊರೆಯುತ್ತಿರುವುದು, ರೋಗಿ–ಕೇಂದ್ರೀಕೃತ ಮತ್ತು ಗುಣಮಟ್ಟದ ಆರೋಗ್ಯ ಸೇವೆ ನೀಡುವುದು, ವೈದ್ಯಾಧಿಕಾರಿ, ಸಿಬ್ಬಂದಿ, ಸಮುದಾಯ ಆರೋಗ್ಯ ಅಧಿಕಾರಿ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಆರೋಗ್ಯ ನಿರೀಕ್ಷಣಾಧಿಕಾರಿ, ಆಶಾ ಕಾರ್ಯಕರ್ತೆಯರ ಶ್ರಮದಿಂದಾಗಿ ಉದ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಾನ್ಯತೆ ದೊರೆತಿದೆ.

> "ತಾವು ಉದ್ಬೂರು ಆಯುಷ್ಮಾನ್ ಆರೋಗ್ಯ ಕೇಂದ್ರಕ್ಕೆ ವರ್ಗಾವಣೆಗೊಂಡ ಎರಡೇ ವರ್ಷದಲ್ಲಿ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡ ಮೌಲ್ಯಮಾಪನದಲ್ಲಿ ತೇರ್ಗಡೆಯಾಗಿರುವುದು ಸಂತಸವನ್ನುಂಟುಮಾಡಿದೆ. ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುವಲ್ಲಿ ಹೆಚ್ಚಿನ ರೀತಿಯಲ್ಲಿ ಶ್ರಮಿಸಲು ಉತ್ತೇಜನ ನೀಡಿದಂತಾಗಿದೆ. ಇದಕ್ಕೆ ಕಾರಣಕರ್ತರಾದ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರದ ಇಡೀ ತಂಡವನ್ನು ಅಭಿನಂದಿಸುತ್ತೇನೆ.
> –ಡಾ.ಆರ್.ಉಷಾ, ವೈದ್ಯಾಧಿಕಾರಿ, ಉದ್ಬೂರು ಆರೋಗ್ಯ ಕೇಂದ್ರ.

**ಮಾನ್ಯತೆಗೆ ಕಾರಣವಾದ ಅಂಶ:** ಗ್ರಾಮ ಮಟ್ಟದಲ್ಲಿ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡ ಅನುಷ್ಠಾನಗೊಂಡಿರುವುದರಿಂದ, ರೋಗಿಗಳಿಗೆ ಉಚಿತವಾಗಿ ಔಷಧ, ಆರೋಗ್ಯ ತಪಾಸಣೆ, ಚಿಕಿತ್ಸಾ ಸೇವೆಗಳು ಲಭ್ಯವಾಗುತ್ತಿರುವುದನ್ನು ಪರಿಶೀಲಿಸಲಾಗಿದೆ. ಇದರಿಂದ ಖಾಸಗಿ ಆಸ್ಪತ್ರೆ ಮೇಲಿನ ಅವಲಂಬನೆ ತಗ್ಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೇ ಸಕಾಲಕ್ಕೆ ಗುಣಮಟ್ಟದ, ವಿಶ್ವಾಸಾರ್ಹ, ಸುರಕ್ಷಿತ ಮತ್ತು ಗೌರವಪೂರ್ಣ ಆರೋಗ್ಯ ಸೇವೆ ದೊರೆಯುತ್ತಿದೆ. ಶುಚಿತ್ವ, ಮೂಲಸೌಲಭ್ಯ ಹಾಗೂ ನಿರಂತರ ಮೌಲ್ಯಮಾಪನದ ಮೂಲಕ ಸೇವಾ ಗುಣಮಟ್ಟ ಕಾಪಾಡಲಾಗುತ್ತಿದೆ. ಹೀಗಾಗಿ ಗ್ರಾಮ ಮಟ್ಟದಲ್ಲೇ ಸುಧಾರಿತ ಆರೋಗ್ಯ ಸೇವೆ ದೊರೆಯುತ್ತಿದೆ. ಈ ಅಂಶಗಳನ್ನು ಅವಲೋಕಿಸಿ ಈ ಕೇಂದ್ರಕ್ಕೆ ರಾಷ್ಟ್ರೀಯ ಮಾನ್ಯತೆ ನೀಡಲಾಗಿದೆ.

ಈ ಕುರಿತು ಡಿಹೆಚ್ಓ ಡಾ.ಪಿ.ಸಿ. ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಿ, ಮಾಡುವ ಕೆಲಸದಲ್ಲಿ ಬದ್ಧತೆ ಇರಬೇಕು. ಅದರಲ್ಲಿಯೂ ಆರೋಗ್ಯ ಸೇವೆಯನ್ನು ಜನರಿಗೆ ತಲುಪಿಸುವಲ್ಲಿ ಇದು ಮುಖ್ಯವಾಗಿದೆ. ಉದ್ಬೂರಿನ ವೈದ್ಯಾಧಿಕಾರಿ ನೇತೃತ್ವದ ತಂಡದ ವಿಶೇಷ ಕಾರ್ಯವೈಖರಿಯಿಂದಾಗಿ ಸಾಧನೆಗೆ ಸಾಧ್ಯವಾಗಿದೆ ಎಂದರು.

## ಹುಟ್ಟುಹಬ್ಬದ ಶುಭಾಶಯ...



ಜೆಡಿಎಸ್ ಯುವ ಮುಖಂಡರಾದ ಜಂಗಲ್ ಲಾಡ್ಜಸ್‌ನ ಮಾಜಿ ನಿರ್ದೇಶಕ ಹೆಚ್.ಎಸ್.ಸಂತೋಷ ಅವರನ್ನು ಸ್ನೇಹಿತರು, ಮುಖಂಡರು, ಹಿತೈಷಿಗಳು ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಜೆಡಿಎಸ್‌ನ ಮೈಸೂರು ಜಿಲ್ಲಾ ಯುವ ಘಟಕದ ಅಧ್ಯಕ್ಷ ಲೋಕೇಶ್ ಸೋಮಣ್ಣ, ನಟರಾಜು, ಮಂಜು, ಬೋರಪ್ಪ, ಬಾಲು, ಶರತ್, ಚಂದ್ರು, ನರೇಂದ್ರ, ರಾಮು, ರವಿ, ತೇಜಸ್, ಮಂಜುನಾಥ್, ಹರೀಶ್, ದೇಸಿಗೌಡ, ಗುಂಡ, ಚಂದು, ಅವಿನಾಶ್, ಅಭಿಷೇಕ್ ಇದ್ದರು.

# ಕ್ರೈಸ್ತ ಧರ್ಮದೊಳಗಿನ ಜಾತಿ ಗುರ್ತಿಸುವ ಮೂಲಕ ಒಡಕು ಮೂಡಿಸುತ್ತಿರುವ ಸರ್ಕಾರ

## ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್ ಕಿಡಿ

ಮೈಸೂರು, ಸೆ.6(ಜಿಎ)–ರಾಜ್ಯ ಸರ್ಕಾರ ಕ್ರೈಸ್ತ ಧರ್ಮದೊಳಗಿನ ಜಾತಿಗಳನ್ನು ಗುರುತಿಸುವ ಮೂಲಕ ಇಡೀ ಸಮುದಾಯದೊಳಗೆ ಒಡಕು ಮೂಡಿಸುವ ಕೆಲಸಕ್ಕೆ ಕೈ ಹಾಕಿದೆ ಎಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್ ಕಿಡಿಕಾರಿದರು.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುರುಬ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ಈಡಿಗ ಕ್ರಿಶ್ಚಿಯನ್, ರೆಡ್ಡಿ ಕ್ರಿಶ್ಚಿಯನ್, ತುಳು ಕ್ರಿಶ್ಚಿಯನ್ ಈ ತರಹದ 52 ಹೊಸ ಜಾತಿಗಳನ್ನು ಹುಟ್ಟುಹಾಕಿದ ಶ್ರೇಯಸ್ಸು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ ಎಂದು ಕಿಡಿಕಾರಿದರು.

ಕ್ರೈಸ್ತ ಸಮುದಾಯದ ಬಗ್ಗೆ ಕುಲಶಾಸ್ತ್ರ ಅಧ್ಯಯನ ನಡೆಸಲು ರಾಜ್ಯ ಸರ್ಕಾರ ಉನ್ನತ ಸಮಿತಿ ರಚಿಸಿ, ಕ್ರೈಸ್ತರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವರದಿ ಸಿದ್ಧಪಡಿಸಬೇಕು ಎಂದು ಆಗ್ರಹಿಸಿದ ಅವರು, ಸರ್ಕಾರವು ಮುಸಲ್ಮಾನರು, ಕ್ರೈಸ್ತರು, ಜೈನರು, ಸಿಖ್ಖರು, ಬೌದ್ಧರು ಹಾಗೂ ಪಾರ್ಸಿಗಳನ್ನು ನಮ್ಮ ದೇಶದ ಧಾರ್ಮಿಕ ಅಲ್ಪಸಂಖ್ಯಾತರನ್ನಾಗಿ ಗುರುತಿಸಿದೆ. ಮುಸಲ್ಮಾನರಿಗೆ ಮಾತ್ರ ಪ್ರವರ್ಗ 2ಬಿ ಅಡಿಯಲ್ಲಿ ಶೇ.4ರಷ್ಟು ಮೀಸಲಾತಿ ಕಲ್ಪಿಸಿದ್ದಾರೆ. ಪ್ರವರ್ಗ 2ಬಿಯಲ್ಲಿ ಕಲ್ಪಿಸಿರುವ ಶೇ.4 ಅನ್ನು ಶೇ.6ಕ್ಕೆ ಹೆಚ್ಚಿಸಿ ಇನ್ನುಳಿದ ಅಲ್ಪ ಸಂಖ್ಯಾತರಾದ ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಹಾಗೂ ಪಾರ್ಸಿಗಳನ್ನು ಪ್ರವರ್ಗ 2ಬಿಯಲ್ಲಿ ಸೇರಿಸಿ ಒಳಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.



ಡಾ.ಅನಿಲ್ ಥಾಮಸ್

ಅಲ್ಪಸಂಖ್ಯಾತರಿಗೆ ನಿಗದಿಯಾಗಿರುವ ಅನುದಾನ ಹಾಗೂ ಸೌಲಭ್ಯಗಳ ಪೈಕಿ ಶೇ.80ರಷ್ಟು ಮುಸ್ಲಿಂ ಸಮುದಾಯಕ್ಕೆ ನೀಡಲಾಗಿದ್ದು, ಕೇವಲ ಶೇ.10 ಮಾತ್ರ ಕ್ರೈಸ್ತ ಸಮುದಾಯಕ್ಕೆ ಮೀಸಲಿಡಲಾಗಿದೆ. ಇನ್ನುಳಿದ ಶೇ.10 ಜೈನ, ಬೌದ್ಧ, ಪಾರ್ಸಿ ಹಾಗೂ ಸಿಖ್ ಸಮುದಾಯದವರಿಗೆ ಮೀಸಲಿರಿಸಿದೆ. ಈ ತಾರತಮ್ಯ ನಿವಾರಣೆಗಾಗಿ ಉಳಿದ ಅಲ್ಪಸಂಖ್ಯಾತರ ಕುಲಶಾಸ್ತ್ರ ಅಧ್ಯಯನ ನಡೆಸಿ, ಅದರ ವರದಿಯ ಆಧಾರದ ಪ್ರಕಾರ ಯಾವ ಸಮುದಾಯಕ್ಕೂ ಅನ್ಯಾಯವಾಗದಂತೆ ಸಾಮಾಜಿಕ ನ್ಯಾಯ ದೊರಕಿಸಬೇಕು. ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ಆಯೋಗ, ನಿಗಮ, ನಾಮ ನಿರ್ದೇಶನಗಳು ತಿರುಗುವಿಕೆ ಆಧಾರದ (ರೋಟೇಷನಲ್ ಬೇಸಿಸ್) ಮೇಲೆ ನಾಮನಿರ್ದೇಶನ ಮಾಡಬೇಕು. ಈ ಮೂಲಕ ಅಲ್ಪಸಂಖ್ಯಾತ ಸಮುದಾಯದ ಚೈತನ್ಯಕ್ಕೆ ನೆರವಾಗಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕ್ರಿಶ್ಚಿಯನ್ ಅಭಿವೃದ್ಧಿ ಸಮಿತಿ ಮಾಜಿ ಅಧ್ಯಕ್ಷ ಶಾಂತಕುಮಾರ್ ಕೆನಡಿ, ಎಸ್.ಎನ್.ರಾಜು, ಥಾಮಸ್ ಜಾನ್, ಜೋಯಲ್ ಮೆಂಡೋನ್ಸ, ಜೆಸ್ಸಿಲ್ ಡಿಸೋಜಾ, ಸಿಲ್ವೆಸ್ಟರ್ ಜಯಚಂದ್ರನ್, ಆರೋಗ್ಯ ಶ್ಯಾಮ್ ಎಫ್. ಉಪಸ್ಥಿತರಿದ್ದರು.

# ಗೂಗಲ್ ಗುರು ಬಂದ ಮೇಲೆ ಮಕ್ಕಳು ನಮ್ಮ ಮಾತು ಕೇಳುತ್ತಿಲ್ಲವೆಂಬ ಬೇಸರ ಬೇಡ

## ಶಿಕ್ಷಕರ ದಿನಾಚರಣೆಯಲ್ಲಿ ಶಿಕ್ಷಕರಿಗೆ ಡಾ.ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ ಕಿವಿಮಾತು

ಮೈಸೂರು,ಸೆ.6(ಜಿಎ)–ಗೂಗಲ್ ಗುರು ಬಂದ ಮೇಲೆ ನಮ್ಮ ಮಾತು ಮಕ್ಕಳು ಕೇಳುತ್ತಿಲ್ಲವೆಂದು ಶಿಕ್ಷಕರು ಬೇಸರ ಮಾಡಿಕೊಳ್ಳಬಾರದು. ಜ್ಞಾನಕ್ಕೆ ಮಹತ್ವ ಇದೆ ಎಂದು ಗೊತ್ತಾದಾಗ, ವಿದ್ಯಾರ್ಥಿಗಳಿಗೆ ಶಿಕ್ಷಕರ ಬೆಲೆ ತಿಳಿಯುತ್ತದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವಿಶ್ರಾಂತ ವೈದ್ಯ ಡಾ.ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ ಇಂದಿಲ್ಲಿ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶನಿವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ 'ಆಚಾರ್ಯ ದೇವೋ ಭವ' ಕುರಿತು ಉಪನ್ಯಾಸ ನೀಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರ ದೃಷ್ಟಿತ್ವದಿಂದ, ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಕಾಣಲು ಸಾಧ್ಯವಾಯಿತು. ಜ್ಞಾನಕ್ಕಿಂತ ಮಿಗಿಲಾದದ್ದು ಜಗತ್ತಿನಲ್ಲಿ ಯಾವುದೇ ಇಲ್ಲ ಎಂದು ಅಂದೇ ತಿಳಿದುಕೊಂಡಿದ್ದರು. ನಾವು ನೋಡುವ ದೃಷ್ಟಿಕೋನದಿಂದ ನಮ್ಮ ಭವಿಷ್ಯ ನಿಂತಿದೆ ಎಂದರು.





ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಇಂದು ದೇಶವನ್ನು ಧ್ವಂಸ ಮಾಡಲು ಯುದ್ಧ ಬೇಡ, ಶಿಕ್ಷಣದ ಗುಣಮಟ್ಟ ಕುಸಿದರೆ ಸಾಕು. ದೇಶ ತಾನಾಗಿಯೇ ಧ್ವಂಸವಾಗಲು ಶುರುವಾಗುತ್ತದೆ. ಬಿಹಾರ ಸೇರಿದಂತೆ ಅನೇಕ ಕಡೆ ಶಿಕ್ಷಣ ಕಡಿಮೆ ಇರುವವರು ಆಡಳಿತ ನಡೆಸುತ್ತಿರುವುದರಿಂದ, ಅವರಿಗೆ ಶಿಕ್ಷಣದ ವ್ಯವಸ್ಥೆ ಸರಿಯಾಗಿ ತಿಳಿಯದೇ, ಮಕ್ಕಳಿಗೂ ಕೂಡ ಸರಿಯಾದ ಶಿಕ್ಷಣ ನೀಡುತ್ತಿಲ್ಲ. ಇದರಿಂದ ಸಮಾಜದಲ್ಲಿ ಅಶಾಂತಿ ವಾತಾವರಣ ನಿರ್ಮಾಣವಾಗುತ್ತಿದೆ. ಹಣಕ್ಕಿಂತ ಶಿಕ್ಷಣದ ವ್ಯವಸ್ಥೆ ಮಕ್ಕಳ ಭವಿಷ್ಯ ರೂಪಿಸುವಂತೆ ಇರಬೇಕು ಎಂದರು.

ಜಾತಿ ಪಿಡುಗಿನಿಂದ ಜನ ಹಾಳಾಗುತ್ತಿದ್ದಾರೆ. ಆದರೆ, ಜಾತಿಗಿಂತ ಶಿಕ್ಷಣದ ಮಹತ್ವವನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು. ಶಿಕ್ಷಕರು ಹಾಗೂ ಇತರೆ ಹುದ್ದೆಗಳಲ್ಲಿ ಕೆಲಸ ಮಾಡುವಾಗ ಬಡ್ತಿ ಸಿಕ್ಕಿಲ್ಲವೆಂದು ಬೇಸರ ಮಾಡಿಕೊಳ್ಳಬಾರದು. ಇಚ್ಛೆಯಿಂದ ಕೆಲಸ ಮಾಡಿದರೆ, ಪರಮಾತ್ಮ ಮುಂದೊಂದು ದಿನ ಶುಭ ದಿನ ನೀಡುತ್ತಾರೆ ಎಂದು ಹೇಳಿದರು.

ಆಚಾರ್ಯ ಅಂದರೆ ಮಕ್ಕಳಿಗೆ ಪಠ್ಯವನ್ನು ಮಾತ್ರ ಬೋಧನೆ ಮಾಡುವವನು. ತನ್ನ ಕೌಶಲತೆಯನ್ನು ತೋರುವವನು. ಮಕ್ಕಳಿಗೆ ಪಠ್ಯದ ಜೊತೆಯಲ್ಲಿ ಕೌಶಲತೆ ಕಲೆಯನ್ನು ಕಲಿಸಬೇಕು. ಮಿದುಳಿನಿಂದ ಪಾಠ ಮಾಡದೇ, ಹೃದಯದಿಂದ ಪಾಠ ಮಾಡಿದರೆ, ಮಕ್ಕಳಿಗೆ ಶಿಕ್ಷಕರು ಹತ್ತಿರವಾಗುತ್ತಾರೆ. ನಾವು ಮಕ್ಕಳಿಗೆ ಕಲಿಸಿಕೊಡುವ ಕೌಶಲತೆ ತುಂಬ ಮುಖ್ಯವಾಗಿದೆ ಎಂದು ಹೇಳಿದರು.

ಉತ್ತಮ ಶಿಕ್ಷಕರಿಗೆ ಸಹಾನುಭೂತಿ, ಸೃಜನಶೀಲತೆ, ಕ್ರಿಯಾತ್ಮಕತೆ ಇರಬೇಕು. ಅಲ್ಲದೆ, ಮಕ್ಕಳಿಗೆ ವಾಕ್ ಸಾಮರ್ಥ್ಯವನ್ನು ಬೆಳೆಸಬೇಕು. ಪಾಠ ಮಾಡಲು ಹೋಗುವ ಮುನ್ನ ಸರಿಯಾಗಿ ತಯಾರಿ ಮಾಡಿಕೊಂಡು ಹೋಗಬೇಕು. ಹಾಸ್ಯ ಪ್ರಜ್ಞೆ ಇರಬೇಕು, ಅಪಹಾಸ್ಯ ಪ್ರಜ್ಞೆ ಇರಬಾರದು ಎಂದು ಹೇಳಿದರು. "ಏನಾದರೂ ಆಗು, ಮೊದಲು ಮಾನವನಾಗುವ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಶಿಕ್ಷಕರು ತುಂಬಬೇಕು. ಸೇವಾ ಮನೋಭಾವನೆಯನ್ನು ಬಿತ್ತಿ ಬೆಳೆಸಬೇಕು. ಅಜ್ಞಾನದಿಂದ ಸುಜ್ಞಾನದ ಕಡೆ ವಿದ್ಯಾರ್ಥಿಗಳು ಬರುವಂತೆ ಒಳ್ಳೆಯ ಜೀವನ ರೂಪಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಕುಲಸಚಿವೆ ಎಂ.ಕೆ. ಸವಿತಾ ಮತ್ತಿತರರು ಉಪಸ್ಥಿತರಿದ್ದರು.

## ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ಶಿಕ್ಷಕರ ದಿನಾಚರಣೆ





ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ನಡೆದ ಶಿಕ್ಷಕರ ದಿನ ಕಾರ್ಯಕ್ರಮದಲ್ಲಿ ಶಿಕ್ಷಕರಾದ ಡಾ.ಎಂ.ಎನ್.ಕವಿತಾ, ಪ್ರಾಂಶುಪಾಲರು ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ, ಸುನಂದಾ ಬಾಗ್ಲೇರ್, ಶಿಕ್ಷಕ ಮತ್ತು ಸಂಯೋಜಕರು, ಮಡಿಲು ಸೇವಾ ಟ್ರಸ್ಟ್, ಎಚ್.ಡಿ.ಕೋಟೆ, ಗಜಾಲಾ ರಜಾಕ್, ಉಪನ್ಯಾಸಕ, ಸರ್ಕಾರಿ ಪದವಿ ಪೂರ್ವ ಕಾಲೇಜು, ಕಬ್ಬಳ್ಳಿ, ನಾಗಣ್ಣ ಎಂ.ಎಸ್., ದೈಹಿಕ ಶಿಕ್ಷಣ ನಿರ್ದೇಶಕರು, ತಲಕಾಡು, ಎಲ್.ಮಹೇಶ್, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಯಳಂದೂರು ಅವರನ್ನು ಸನ್ಮಾನಿಸಲಾಯಿತು. ಮೈಸೂರು ಶೋರೂಂನ ಸ್ಟೋರ್ ಹೆಡ್ ಮುಹಮ್ಮದ್‌ಅನ್ವಾಜ್, ವ್ಯವಸ್ಥಾಪಕ ಸುರೇಶ್, ಸುನಿಲ್, ಗಿರೀಶ್ ಮತ್ತು ನಿರ್ವಹಣಾ ತಂಡ ಉಪಸ್ಥಿತರಿದ್ದರು.

## ಗಣೇಶೋತ್ಸವ



ಮೈಸೂರಿನ ಬೃಂದಾವನ ಬಡಾವಣೆಯಲ್ಲಿ ನಾಗರಿಕ ಹಿತರಕ್ಷಣಾ ವೇದಿಕೆಯಿಂದ ನಡೆದ ಗಣೇಶೋತ್ಸವದಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮಾಜಿ ಶಾಸಕ ಎಲ್. ನಾಗೇಂದ್ರ, ವೇದಿಕೆ ಅಧ್ಯಕ್ಷ ಜೀವನ್ ಪ್ರಕಾಶ್, ಮುಖಂಡರಾದ ಮಹೇಶ್‌ರಾಜೇ ಅರಸ್, ರಾಘವೇಂದ್ರ, ಪ್ರವೀಣ್, ದೇವರಾಜ್, ಇನ್ನಿತರರಿದ್ದರು.

## ಇಂದು ನೂಪುರ ನೃತ್ಯೋತ್ಸವ

**ಮೈಸೂರು:** ಮೈಸೂರಿನ ನೂಪುರ ನಟನ ಗೃಹ ಕಲ್ಚರಲ್ ಡೆವಲಪ್‌ಮೆಂಟ್ ಟ್ರಸ್ಟ್‌ನ ನೂಪುರ ನೃತ್ಯಾಲಯದ 11ನೇ ವಾರ್ಷಿಕೋತ್ಸವದ ಅಂಗವಾಗಿ ನೂಪುರ ನೃತ್ಯೋತ್ಸವವನ್ನು ಸೆ.7ರಂದು ಸಂಜೆ 4ಕ್ಕೆ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ. ಅಂದು ಮೈಸೂರು ನೃತ್ಯಗಿರಿ ಪೊರ್ಫಾಮಿಂಗ್ ಆರ್ಟ್ಸ್ ಸೆಂಟರ್‌ನ ನಿರ್ದೇಶಕಿ ಡಾ.ಕೃಪಾ ಫಾಡ್ಕೆ, ಸಂಗೀತ ಸಂಯೋಜಕ ವಿದ್ವಾನ್ ಕೆ.ಗುರುಪ್ರಸಾದ್, ಟ್ರಸ್ಟ್ ಸಂಸ್ಥಾಪಕಿ ನಾಟ್ಯ ವಿದುಷಿ ಆರತಿ ಅರುಣ್ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಸಂಸ್ಥೆಯ ವಿದ್ಯಾರ್ಥಿಗಳಿಂದ ಭರತ ನಾಟ್ಯ ಹಾಗೂ ಮೋಹಿನಿಯಾಟಂ ನೃತ್ಯ ಕಾರ್ಯಕ್ರಮ ಆಯೋಜಿಸಿದ್ದು, 8 ವರ್ಷದಿಂದ 40 ವರ್ಷದವರೆಗಿನ ಮಹಿಳಾ ನೃತ್ಯ ಕಲಾವಿದೆಯರು ಭಾಗವಹಿಸಲಿದ್ದಾರೆ.

ಅವರಿಗಾಗಿ ವಿವಿಧ ವಿಭಾಗದ ಸಬ್ ಜೂನಿಯರ್, ಜೂನಿಯರ್, ಸೀನಿಯರ್ ಮಟ್ಟದ ಸ್ಪರ್ಧೆ ಆಯೋಜಿಸಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಗುತ್ತದೆ. ನೃತ್ಯ ಶಾಲೆಯಲ್ಲಿ 500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ನೃತ್ಯ ತರಬೇತಿ ಪಡೆದುಕೊಳ್ಳುತ್ತಿದ್ದು, ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ತರಬೇತಿ ನೀಡಲಾಗುತ್ತಿದೆ.

# ಶಿಫಾರಸ್ಸು, ಹಣದಿಂದ ಪಡೆದ ಪ್ರಶಸ್ತಿಗಳು ನಮ್ಮನ್ನು ಅಣಕಿಸುತ್ತವೆ

## ಶಿಕ್ಷಕರ ದಿನಾಚರಣೆಯಲ್ಲಿ ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ ಅಭಿಪ್ರಾಯ

ಮೈಸೂರು, ಸೆ.6(ಜಿಎ)–ದುಂಬಾಲು ಬಿದ್ದು, ಅರ್ಜಿ ಹಾಕಿ, ಶಿಫಾರಸ್ಸು ಮಾಡಿಸಿ, ಹಣದಿಂದ ಪಡೆದ ಪ್ರಶಸ್ತಿಗಳು ನಮ್ಮನ್ನು ಅಣಕಿಸುತ್ತವೆ. ಆದರೆ, ಸಾಧನೆಯಿಂದ ಪಡೆದ ಪ್ರಶಸ್ತಿಗಳು ಸದಾಕಾಲ ನಮ್ಮನ್ನು ಗೌರವಿಸುತ್ತವೆ ಎಂದು ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಇಲವಾಲ ಸರ್ಕಾರಿ ಪ್ರೌಢಶಾಲೆ ಮತ್ತು ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಶಾಲೆಯಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಎಂಟು ಶಿಕ್ಷಕರು ಪ್ರಶಸ್ತಿ ಪಡೆಯಲು ಯಾವುದೇ ಅರ್ಜಿ ಹಾಕಿಲ್ಲ. ಯಾರಿಂದಲೂ ಶಿಫಾರಸ್ಸು ಮಾಡಿಸಿಲ್ಲ, ಕನ್ನಡ ನೆಲ, ಜಲ, ಭಾಷೆಯ ರಕ್ಷಣೆಗಾಗಿ ದುಡಿಯುತ್ತಿರುವ ಕನ್ನಡಾಂಬೆ ರಕ್ಷಣಾ ವೇದಿಕೆಯು ಈ ಉತ್ತಮ ಶಿಕ್ಷಕರನ್ನು ಗುರುತಿಸಿ ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ ಎಂದರು.



ಮೈಸೂರಿನ ಇಲವಾಲ ಸರ್ಕಾರಿ ಪ್ರೌಢಶಾಲೆ ಮತ್ತು ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಶಿಕ್ಷಕರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಿಕ್ಷಕರ ಗುಣಮಟ್ಟ ಅಥವಾ ಅವರ ಸಾಧನೆಯನ್ನು ಗುರುತಿಸಲು ಯಾವುದೇ ಪರೀಕ್ಷೆಗಳು ನಡೆಸಬೇಕಿಲ್ಲ, ಕೇವಲ ಅವರ ವಿದ್ಯಾರ್ಥಿಗಳನ್ನು ನೋಡಿದರೆ ಸಾಕು ಶಿಕ್ಷಕರ ಗುಣಮಟ್ಟ ತಿಳಿಯುತ್ತದೆ. ವಿದ್ಯಾರ್ಥಿಗಳೇ ಶಿಕ್ಷಕರ ಪರೀಕ್ಷೆಯ ಮಾನದಂಡ ಎಂದು ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಕೆ.ಎ.ಜಗದೀಶ್, ಎಸ್.ಎಸ್.ಮಮತಾ, ಎಸ್.ಎಸ್. ಶಶಿಕಲಾ, ಡಿ.ಎನ್.ಮಹದೇವು, ಎಲ್.ಜಿ.ಲಿಂಗರಾಜಪ್ಪ, ಬಿ.ವಾಸುದೇವ, ಪುರುಷೋತ್ತಮ, ಬಸವರಾಜೇಂದ್ರಸ್ವಾಮಿ ಅವರನ್ನು ಇಲವಾಲ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭೈರೇಗೌಡ, ಕನ್ನಡಾಂಬೆ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಸೇರಿದಂತೆ ಇತರೆ ಪದಾಧಿಕಾರಿಗಳು ಪ್ರಶಸ್ತಿ ಫಲಕ, ಶಾಲು, ಹಾರ, ಫಲ, ತಾಂಬೂಲ ನೀಡಿ ಗೌರವಿಸಿದರು.

ಕನ್ನಡಾಂಬೆ ರಕ್ಷಣಾ ವೇದಿಕೆ ಜಿಲ್ಲಾ ಗೌರವಾಧ್ಯಕ್ಷ ಮನುಗೌಡ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಆರ್.ಮಂಜುಳ, ರಾಜ್ಯ ಖಜಾಂಚಿ ನಂಜುಂಡ, ರಾಜ್ಯ ಕಾರ್ಯದರ್ಶಿ ಶಿವಕುಮಾರ್, ಮೈಸೂರು ಜಿಲ್ಲಾ ಅಧ್ಯಕ್ಷ ಸಂತೋಷ್, ಡಿಪಿಕೆ ಪರಮೇಶ್, ಜಿಲ್ಲಾ ಘಟಕದ ಸದಸ್ಯರಾದ ಕಿರಣ್, ಗೌರವ ಅಧ್ಯಕ್ಷ ನಾಗರಾಜು, ಆಪ್ತ ಕಾರ್ಯದರ್ಶಿ ಶಿವಕುಮಾರ್, ಸಂಘಟನಾ ಕಾರ್ಯದರ್ಶಿ ಲೋಕೇಶ್, ಚಿನ್ನಬುದ್ದಿ, ಮಹಿಳಾ ಘಟಕದ ಜಿಲ್ಲಾ ಉಪಾಧ್ಯಕ್ಷೆ ಸೌಭಾಗ್ಯ, ಕುಮಾರ್, ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

# ದೇಶ - ವಿದೇಶ

## ಅಮೆರಿಕ ರಕ್ಷಣಾ ಇಲಾಖೆ ಹೆಸರು 'ಯುದ್ಧ' ಎಂದು ನಾಮಕರಣ

**ವಾಷಿಂಗ್ಟನ್:** ವಿಶ್ವದಾದ್ಯಂತ ಯುದ್ಧ ನಿಲ್ಲಿಸುವ ಕುರಿತು ಶಾಂತಿ ಪ್ರಚಾರ ಮಾಡುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದೀಗ ತಮ್ಮ ದೇಶದ ರಕ್ಷಣಾ ಇಲಾಖೆ ಹೆಸರನ್ನೇ ಯುದ್ಧ ಇಲಾಖೆಯನ್ನಾಗಿ ಮರುನಾಮಕರಣ ಮಾಡಿ ಆದೇಶ ಹೊರಡಿಸಿದ್ದಾರೆ. ಅಮೆರಿಕವು ವಿಶ್ವದ ಶಕ್ತಿಶಾಲಿ ರಾಷ್ಟ್ರ ಎಂಬ ಸಂದೇಶ ನೀಡಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಇದು ಗೆಲುವು ಮತ್ತು ಪ್ರಬಲ ಸಾಮರ್ಥ್ಯದ ಸಂದೇಶವನ್ನು ನೀಡುತ್ತದೆ ಎಂದು ಭಾವಿಸಿದ್ದೇನೆ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಕಾಂಗ್ರೆಸ್ (ಅಮೆರಿಕ ಸಂಸತ್ತು) ಸಂಸದರು ಮರುನಾಮಕರಣಕ್ಕೆ ಔಪಚಾರಿಕವಾಗಿ ಒಪ್ಪಿಗೆ ಸೂಚಿಸಿದ್ದಾರೆ. ಮರುನಾಮಕರಣ ಆದೇಶದ ಬಳಿಕ ರಕ್ಷಣಾ ಇಲಾಖೆಯ ಕಚೇರಿಯ ಆವರಣದಲ್ಲಿನ ಫಲಕ ಹಾಗೂ ವೆಬ್‌ಸೈಟ್ ಸೇರಿದಂತೆ ಎಲ್ಲಾ ಕಡೆ ಹೆಸರು ಬದಲಾವಣೆ ಮಾಡಲಾಗಿದೆ.




## ಸ್ನೇಹಿತನ ಹೆಸರಲ್ಲಿ ಬಾಂಬ್ ಬೆದರಿಕೆ; ಸಂದೇಶ ಕಳುಹಿಸಿದ ಜ್ಯೋತಿಷಿ ಬಂಧನ



**ನೊಯಿಡಾ:** ತನ್ನ ಮೇಲೆ ಪ್ರಕರಣ ದಾಖಲಿಸಿದ್ದ ಸ್ನೇಹಿತನ ವಿರುದ್ಧ ಸೇಡು ತೀರಿಸಿಕೊಳ್ಳಲು, ಆತನ ಹೆಸರನ್ನು ಬಳಸಿಕೊಂಡು ಲಷ್ಕರ್ ಎ ಜಿಹಾದಿ ಸಂಘಟನೆ ಹೆಸರನ್ನು ನಮೂದಿಸಿ ಮುಂಬೈನ ಸಂಚಾರ ವಿಭಾಗದ ಪೊಲೀಸರಿಗೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಅಶ್ವಿನಿಕುಮಾರ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಕುಮಾರ್ ತಮ್ಮನ್ನು ತಾವು ಜ್ಯೋತಿಷಿ ಮತ್ತು ವಾಸ್ತು ಶಾಸ್ತ್ರಜ್ಞ ಎಂದು ಕರೆದುಕೊಳ್ಳುತ್ತಾರೆ. ಇವರು ಪಾಟ್ನಾದವರಾಗಿದ್ದು, 5 ವರ್ಷಗಳಿಂದ ನೊಯಿಡಾದಲ್ಲಿ ವಾಸಿಸುತ್ತಿದ್ದ. ಇವರ ಸ್ನೇಹಿತ ಇವರ ವಿರುದ್ಧ 2023ರಲ್ಲಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ಕುಮಾರ್ 3 ತಿಂಗಳು ಜೈಲುವಾಸ ಅನುಭವಿಸಿದ್ದರು. 14 ಭಯೋತ್ಪಾದಕರು 34 ವಾಹನಗಳಲ್ಲಿ 400 ಕೆ.ಜಿ ಆರ್‌ಡಿಎಕ್ಸ್ ಇಟ್ಟುಕೊಂಡು ಮುಂಬೈ ಪ್ರವೇಶಿಸಿದ್ದಾರೆ ಎಂದು ಪೊಲೀಸರ ವಾಟ್ಸಾಪ್ ಸಂಖ್ಯೆಗೆ ಕುಮಾರ್ ಸಂದೇಶ ಕಳುಹಿಸಿದ್ದಾರೆ. ಅನಂತ ಚತುರ್ದಶಿ ಸಂಭ್ರಮಾಚರಣೆ ಸನಿಹದಲ್ಲೇ ಈ ಸಂದೇಶ ಕಳುಹಿಸಲಾಗಿದೆ. ಸಂದೇಶ ಬರುತ್ತಿದ್ದಂತೆಯೇ ಮುಂಬೈ ಪೊಲೀಸರು ಕಾರ್ಯಪ್ರವೃತ್ತರಾಗಿದ್ದಾರೆ. ಸಂದೇಶವು ನೊಯಿಡಾದಿಂದ ಬಂದಿದ್ದಾಗಿ ಪೊಲೀಸರಿಗೆ ತಿಳಿದುಬಂದಿದೆ

## ಭಾರತ ಮತ್ತೆ ಮಾತುಕತೆಗೆ ಬರಲಿದೆ, ಕ್ಷಮೆಯಾಚಿಸುತ್ತದೆ



**ವಾಷಿಂಗ್‌ಟನ್:** ಅಮೆರಿಕ ಭಾರತೀಯ ಉತ್ಪನ್ನಗಳ ಮೇಲೆ ಶೇ.50ರಷ್ಟು ತೆರಿಗೆ ವಿಧಿಸಿರುವುದು. ನಂತರದ ದಿನಗಳಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ರಷ್ಯಾ, ಚೀನಾಗೆ ಹತ್ತಿರವಾಗಿರುವ ಬೆಳವಣಿಗೆಗಳ ಬಗ್ಗೆ ಅಮೆರಿಕ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಪ್ರತಿಕ್ರಿಯೆ ನೀಡಿದ್ದಾರೆ. ಭಾರತ ವಾಷಿಂಗ್ಟನ್ ಜೊತೆ ಮಾತುಕತೆಗೆ ಮರಳಲಿದೆ, ಕ್ಷಮೆಯಾಚಿಸುತ್ತದೆ ಮತ್ತು ಅಮೆರಿಕ ಅಧ್ಯಕ್ಷ ಟ್ರಂಪ್ ಜೊತೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಲಿದೆ. ಒಂದು ಅಥವಾ ಎರಡು ತಿಂಗಳಲ್ಲಿ ಭಾರತ ಮಾತುಕತೆಗೆ ಬರಲಿದೆ ಎಂದು ನಾನು ಭಾವಿಸುತ್ತೇನೆ. ಅವರು ಕ್ಷಮಿಸಿ ಎಂದು ಹೇಳಲಿದ್ದಾರೆ ಮತ್ತು ಟ್ರಂಪ್ ಜೊತೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಲಿದ್ದಾರೆ ಎಂದು ಹೇಳಿದ್ದಾರೆ. ಮೋದಿ ಜೊತೆ ಹೇಗೆ ವ್ಯವಹರಿಸಬೇಕೆಂದು ಟ್ರಂಪ್ ನಿರ್ಧರಿಸುತ್ತಾರೆ, ಅದಕ್ಕಾಗಿಯೇ ಅವರು ಅಧ್ಯಕ್ಷರು ಎಂದರು. ಸಂದರ್ಶನದಲ್ಲಿ ಮಾತನಾಡಿರುವ ಅವರು, ಭಾರತ ರಿಯಾಯಿತಿ ದರದಲ್ಲಿ ರಷ್ಯಾದ ಕಚ್ಚಾ ತೈಲ ಖರೀದಿಸಿರುವುದನ್ನು ಲುಟ್ನಿಕ್ ಟೀಕಿಸಿದರು, ಇದು ತಪ್ಪು ಮತ್ತು ಹಾಸ್ಯಾಸ್ಪದ ಎಂದು ಹೇಳಿದ್ದಾರೆ.

## ಮೀರತ್‌ನಲ್ಲಿ ಆತಂಕ ಸೃಷ್ಟಿಸಿದ 'ಬೆತ್ತಲೆ ಗ್ಯಾಂಗ್'

**ಲಖನೌ:** ಮೈಮೇಲೆ ತುಂಡು ಬಟ್ಟೆಯನ್ನೂ ಧರಿಸದೆ ಹೊಲಗಳಿಂದ ಏಕಾಏಕಿ ನುಗ್ಗುವ ಗುಂಪೊಂದು ಮಹಿಳೆಯರನ್ನು ನಿರ್ಜನ ಪ್ರದೇಶಕ್ಕೆ ಎಳೆದೊಯ್ಯಲು ಹಾಗೂ ಹಲ್ಲೆ ಮಾಡಲು ಪ್ರಯತ್ನಿಸಿದ ಪ್ರಕರಣಗಳು ಉತ್ತರ ಪ್ರದೇಶದ ಮೀರತ್ ಜಿಲ್ಲೆಯಲ್ಲಿ ವರದಿಯಾಗಿವೆ.

ಜಿಲ್ಲೆಯ ದೌರಲಾ ಗ್ರಾಮದಲ್ಲಿ 'ಬೆತ್ತಲೆ ಗ್ಯಾಂಗ್' ಬಗ್ಗೆ ಆತಂಕ ಸೃಷ್ಟಿಯಾಗಿದೆ. ಕಳೆದ ಕೆಲ ದಿನಗಳ ಅಂತರದಲ್ಲಿ 4 ಬಾರಿ ಇಂತಹ ಘಟನೆಗಳು ನಡೆದಿವೆ ಎಂದು ಸ್ಥಳೀಯರು ಹೇಳಿದ್ದಾರೆ. ಉದ್ದ ಕೂದಲಿನ ಯುವಕರು, ಬೆಳೆಗಳ ಮಧ್ಯದಿಂದ ನಗ್ನವಾಗಿ ಏಕಾಏಕಿ ನುಗ್ಗುತ್ತಾರೆ. ಆಸುಪಾಸಿನಲ್ಲಿ ಹಾದುಹೋಗುವ ಮಹಿಳೆಯರ ಮೇಲೆ ದಾಳಿ ಮಾಡುತ್ತಾರೆ. ಅವರನ್ನು ಹೊಲಗಳಿಗೆ ಎಳೆದೊಯ್ದು ಹಲ್ಲೆ ಮಾಡಲು ಪ್ರಯತ್ನಿಸುತ್ತಾರೆ ಎಂದು ದೌರಲಾ ಗ್ರಾಮದ ವ್ಯಕ್ತಿಯೊಬ್ಬರು ಕಳವಳ ವ್ಯಕ್ತಪಡಿಸಿದ್ದಾರೆ.

ಕೆಲಸಕ್ಕೆ ಹೋಗುತ್ತಿದ್ದ ಮಹಿಳೆಯೊಬ್ಬರ ಮೇಲೆ ಎರಡು ದಿನಗಳ ಹಿಂದಷ್ಟೇ ಭರಾಲ ಗ್ರಾಮದ ಸಮೀಪ ಇಬ್ಬರು ಯುವಕರು ದಾಳಿ ಮಾಡಿದ್ದರು. ಆದರೆ, ಧೈರ್ಯದಿಂದ ಪ್ರತಿರೋಧ ಒಡ್ಡಿದ್ದ ಮಹಿಳೆ, ನೆರವಿಗಾಗಿ ಜೋರಾಗಿ ಕೂಗಿಕೊಂಡಿದ್ದರು. ಅಕ್ಕಪಕ್ಕ ಇದ್ದ ನಿವಾಸಿಗಳು ಅಲ್ಲಿಗೆ ಬರುವಷ್ಟರಲ್ಲಿ ಆಗಂತುಕರು ಪರಾರಿಯಾಗಿದ್ದರು ಎಂದಿದ್ದಾರೆ.

## ಪಾಕ್ ಮಾಜಿ ಪ್ರಧಾನಿ ಇಮ್ರಾನ್‌ಖಾನ್ ಸಹೋದರಿ ಮೇಲೆ ಮೊಟ್ಟೆ ಎಸೆತ



**ಇಸ್ಲಾಮಾಬಾದ್:** ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಸಹೋದರಿ ಅಲೀಮಾ ಖಾನಮ್ ಅವರ ಮೇಲೆ ರಾವಲ್ಪಿಂಡಿಯ ಅಡಿಯಾಲ ಜೈಲಿನ ಹೊರಗೆ ಮೊಟ್ಟೆ ಎಸೆದ ಘಟನೆ ನಡೆದಿದೆ.

ಮೊಟ್ಟೆ ಆಕೆಯ ಮುಖಕ್ಕೆ ಹೊಡೆದು, ಬಟ್ಟೆಯ ಮೇಲೆ ಬಿದ್ದ ದೃಶ್ಯಾವಳಿಯ ವೀಡಿಯೋ ವೈರಲ್ ಆಗಿದೆ. ಈ ಘಟನೆಯಿಂದ ಇಮ್ರಾನ್ ಖಾನ್ ಸಹೋದರಿ ಬೇಸರಗೊಂಡಿದ್ದಾರೆ. ಖಾನಮ್ ಮೇಲೆ ಮೊಟ್ಟೆ ಎಸೆದ ಇಬ್ಬರು ಮಹಿಳೆಯರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರು ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಬೆಂಬಲಿಗರಾಗಿದ್ದಾರೆ. ಪಿಟಿಐ ಬೆಂಬಲಿಗರು ಈ ಕೃತ್ಯವನ್ನು ಖಂಡಿಸಿದ್ದಾರೆ. ಇಂತಹ ನಡವಳಿಕೆಯು ಅನೈತಿಕ ಮಾತ್ರವಲ್ಲ, ದುರದೃಷ್ಟಕರವೂ ಆಗಿದೆ. ರಾಜಕೀಯ ಭಿನ್ನಾಭಿಪ್ರಾಯ ಇರುವವರನ್ನು ಅಪಮಾನಿಸುವುದು ಸರಿಯಲ್ಲ ಎಂದು ಬೇಸರ ಹೊರಹಾಕಿದ್ದಾರೆ. ಮತ್ತೊಬ್ಬರು ಪೋಸ್ಟ್ ಹಾಕಿ, ಈ ಅವಮಾನಕರ ಕೃತ್ಯವನ್ನು ಅಸಿಮ್ ಮುನೀರ್ ಮತ್ತು ನೂನ್ ಲೀಗ್ ಮಾಡಿದ್ದಾರೆ. ಈ ಜನರು ಖಾನ್ ಮತ್ತು ಅವರ ಕುಟುಂಬಕ್ಕೆ ತುಂಬಾ ಹೆದರುತ್ತಾರೆ ಎಂದು ಹೇಳಿದ್ದಾರೆ.






ವಿರಾಜಪೇಟೆಯ ಐತಿಹಾಸಿಕ ಶ್ರೀ ಗೌರಿ– ಗಣೇಶ ವಿಸರ್ಜನೋತ್ಸವವು ಶನಿವಾರ ರಾತ್ರಿ ವಿದ್ಯುತ್ ಅಲಂಕೃತ ಮಂಟಪಗಳ ಶೋಭಾಯಾತ್ರೆ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

# ವಿರಾಜಪೇಟೆಯಲ್ಲಿ ಐತಿಹಾಸಿಕ ಶ್ರೀ ಗೌರಿ–ಗಣೇಶ ವಿಸರ್ಜನೋತ್ಸವ

## ಪಟ್ಟಣದಲ್ಲಿ ವೈಭವದ ಶೋಭಾಯಾತ್ರೆ, ಮನಸೂರೆಗೊಂಡ ವಾದ್ಯಗೋಷ್ಠಿ, ಚಂಡೆ ಮದ್ದಾಳೆ, ಗೊಂಬೆ ಕುಣಿತ, ಡೊಳ್ಳು ಕುಣಿತ, ಗೌರಿಕೆರೆಯಲ್ಲಿ ವಿಸರ್ಜನೆ

ವಿರಾಜಪೇಟೆ, ಸೆ.6– ವಿರಾಜಪೇಟೆ ಐತಿಹಾಸಿಕ ಶ್ರೀ ಗೌರಿ–ಗಣೇಶ ವಿಸರ್ಜನೋತ್ಸವ ವಿದ್ಯುತ್ ಅಲಂಕೃತ ಮಂಟಪಗಳ ಶೋಭಾಯಾತ್ರೆ ಮೆರವಣಿಗೆ ವಿಜೃಂಭಣೆಯಿಂದ ಪಟ್ಟಣದಲ್ಲಿ ನಡೆಯಿತು.

ಆ.7ರಂದು ನಗರ ವ್ಯಾಪ್ತಿಯಲ್ಲಿ ಗಣೇಶ ಸೇವಾ ಸಮಿತಿಗಳ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಗೌರಿ ಗಣೇಶ ಮೂರ್ತಿಗೆ 11 ದಿನಗಳ ಕಾಲ ಶ್ರದ್ಧಾ ಭಕ್ತಿಯಿಂದ ಬೆಳಿಗ್ಗೆ ಮತ್ತು ರಾತ್ರಿ ವಿಶೇಷ ಪೂಜೆಗಳನ್ನು ಸಲ್ಲಿಸಿ, ಹಲವು ವೇದಿಕೆ ಕಾರ್ಯಕ್ರಮಗಳನ್ನು ನಡೆಸಿ ಸೆ6 ರಂದು ರಾತ್ರಿ ಹೂವಿನ ಅಲಂಕೃತ ಮಂಟಪಗಳಲ್ಲಿ ಗೌರಿ ಗಣೇಶ ಮೂರ್ತಿ ಕೂರಿಸಿ, ವೈಭವದ ಮೆರವಣಿಗೆ ನಡೆಸಲಾಯಿತು.

ಇತರೆಡೆಗಳಲ್ಲಿ ಪ್ರತಿಷ್ಠಾಪಿಸಿದ್ದ ಮಂಟಪಗಳು ಪಟ್ಟಣದ ತೆಲುಗರ ಬೀದಿಯಲ್ಲಿರುವ ಮಾರಿಯಮ್ಮ ದೇವಸ್ಥಾನದ ಬಳಿಯ ಸಿದ್ದಾಪುರ ರಸ್ತೆ ತಿರುವಿನಲ್ಲಿ ಸೇರಿ ವಾದ್ಯಗೋಷ್ಠಿ, ಚಂಡೆ ಮದ್ದಾಳೆ, ಗೊಂಬೆಕುಣಿತ, ಬ್ಯಾಂಡ್ ಸೆಟ್, ಡೊಳ್ಳು ಕುಣಿತ, ಭಜನೆ, ನೃತ್ಯ ಸೇರಿದಂತೆ ಇತರ ನೃತ್ಯ ಮನೋ ರಂಜನೆ ಕಾರ್ಯದೊಂದಿಗೆ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಖಾಸಗಿ ಬಸ್ ನಿಲ್ದಾಣದಲ್ಲಿರುವ ಪವಿತ್ರ ಗೌರಿಕೆರೆ ಯಲ್ಲಿ ವಿಸರ್ಜಿಸಲಾಯಿತು.

ಶೋಭಾಯಾತ್ರೆಯಲ್ಲಿ ಶ್ರೀ ಮಹಾಗಣಪತಿ ದೇವಸ್ಥಾನ ಮಂಟಪ (ಗಡಿಯಾರ ಕಂಬ) ಗೌರಿ ಗಣೇಶ ಉತ್ಸವ ಸಮಿತಿ ಬಸವೇಶ್ವರ ದೇವಸ್ಥಾನ, ವಿಘ್ನೇಶ್ವರ ಸೇವಾ ಸಮಿತಿ ಅರಸುನಗರ, ವಿನಾಯಕ ಯುವಕ ಸಂಘ ಅಂಗಳಾ ಪರಮೇಶ್ವರಿ ದೇವಸ್ಥಾನ, ಶ್ರೀ ವಿಜಯ ವಿನಾಯಕ ಉತ್ಸವ ಸಮಿತಿ ಧಕ್ಕನಿ ಮಹಲ್ಲಾ, ಕಾವೇರಿ ಗಣೇಶೋತ್ಸವ ಸಮಿತಿ ಮೂರ್ನಾಡು ರಸ್ತೆ ನೇತಾಜಿ ಉತ್ಸವ ಸಮಿತಿ ನೆಹರುನಗರ, ಮಹಾಗಣಪತಿ ಸೇವಾ ಸಂಘ ಗಣಪತಿಬೀದಿ, ವಿನಾಯಕ ಸೇವಾ ಸಮಿತಿ ಪಂಜಾರುಪೇಟೆ, ಜಲದರ್ಶಿನಿ ಗಣೇಶೋತ್ಸವ ಸಮಿತಿ ಚತ್ರಕೆರೆ, ಗಣಪತಿ ಸೇವಾ ಸಮಿತಿ ಗಾಂಧಿನಗರ, ಸರ್ವಸಿದ್ಧಿ ವಿನಾಯಕ ಸೇವಾ ಸಮಿತಿ ಸುಂಕದಕಟ್ಟೆ ಕಣ್ಣಿ ವಿನಾಯಕ ಉತ್ಸವ ಸಮಿತಿ ಮಲೆತಿರಿಕೆ ಬೆಟ್ಟ, ವಿಘ್ನೇಶ್ವರ ಸೇವಾ ಸಮಿತಿ ಕೆ.ಬೋಯಿಕೇರಿ, ದೊಡ್ಡಮ್ಮ ಚಿಕ್ಕಮ್ಮತಾಯಿ ವಿನಾಯಕ ಸೇವಾ ಸಮಿತಿ ಸುಣ್ಣದಬೀದಿ, ಶ್ರೀ ವಿಘ್ನೇಶ್ವರ ಸೇವಾ ಸಮಿತಿ ಕುಕ್ಲೂರು, ವಿಶ್ವ ವಿನಾಯಕ ಗಣೇಶೋತ್ಸವ ಸಮಿತಿ ಮೀನುಪೇಟೆ, ಗೌರಿಕೆರೆ ಶ್ರೀ ಗಣೇಶೋತ್ಸವ ಸಮಿತಿ, ಮದ ವಿನಾಯಕ ಸೇವಾ ಸಮಿತಿ ಅಯ್ಯಪ್ಪ ಬೆಟ್ಟ, ಬಾಲಾಂಜನೇಯ ಗಣಪತಿ ಸೇವಾ ಸಮಿತಿ ಅಪ್ಪಯ್ಯ ಸ್ವಾಮಿ ರಸ್ತೆ ವಿನಾಯಕ ಯುವ ಸಮಿತಿ ಶಿವಕೇರಿ, ಗಣಪತಿ ಸೇವಾ ಸಮಿತಿ ಪಟ್ಟಣ ಪಂಚಾಯಿತಿ ಸೇರಿದಂತೆ 22 ವಿದ್ಯುತ್ ಅಲಂಕೃತ ಮಂಟಪಗಳು ತೆಲುಗರಬೀದಿ, ಜೈನರಬೀದಿ, ದೊಡ್ಡಟ್ಟಿಚೌಕ, ಮುಖ್ಯ ರಸ್ತೆ ಗಡಿಯಾರ ಕಂಬದ ಮಾರ್ಗವಾಗಿ ಗೌರಿಕೆರೆವರೆಗೂ ಮೆರವಣಿಗೆ ನಡೆಯಿತು.

ಗೌರಿ ಗಣೇಶೋತ್ಸವ ವಿಸರ್ಜನೋತ್ಸವದ ಅಂಗವಾಗಿ ಬಿಗಿ ಪೊಲೀಸ್ ಬಂದೋಬಸ್ತ್‌ಗಾಗಿ ಕೊಡಗು ಪೊಲೀಸ್ ವರಿಷ್ಠಾಧಿಕಾರಿ ಅವರ ನೇತೃತ್ವದಲ್ಲಿ ಹೆಚ್ಚುವರಿ ಇಬ್ಬರು ಪೊಲೀಸ್ ವರಿಷ್ಠಾಧಿಕಾರಿಗಳು, 6 ಮಂದಿ ಡಿವೈಎಸ್ಪಿ, 8 ಮಂದಿ ಸಬ್ ಇನ್ಸ್‌ಪೆಕ್ಟರ್, 32 ಮಂದಿ ಎಎಸ್‌ಐ, 800 ಮಂದಿ ಪೊಲೀಸ್ ಸಿಬ್ಬಂದಿಗಳು, ಹೋಮ್ ಗಾರ್ಡ್‌ಗಳು, ಡಿಆರ್, ಕೆಎಸ್‌ಆರ್‌ಪಿ ಸೇರಿದಂತೆ ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರಗಳಿಂದಲೂ ಪೊಲೀಸ್ ಸಿಬ್ಬಂದಿಗಳು ಕರ್ತವ್ಯ ನಿಮಿತ್ತ ಭಾಗವಹಿಸಿದ್ದರು. ವಿಸರ್ಜನೋತ್ಸವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರುವುದರಿಂದ ಪೊಲೀಸ್ ಇಲಾಖೆ ಸುಗಮ ಸಂಚಾರಕ್ಕೆ ಅವಕಾಶ ನೀಡುವ ನಿಟ್ಟಿನಲ್ಲಿ ಪಟ್ಟಣದಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿ ಉತ್ಸವ ವೀಕ್ಷಣೆಗೆ ಬರುವ ವಾಹನಗಳಿಗೆ ಬದಲಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಗಣೇಶೋತ್ಸವ ಹಿನ್ನೆಲೆಯಲ್ಲಿ ಪುರಸಭೆ ವತಿಯಿಂದ ಪವಿತ್ರ ಗೌರಿಕೆರೆಯನ್ನು ಶುಚಿತ್ವಗೊಳಿಸಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಕೆರೆಯಲ್ಲಿ ಗೌರಿ ಗಣೇಶ ವಿಸರ್ಜಿಸಲು ತೆಪ್ಪ ಮತ್ತು ಈಜುಗಾರರನ್ನು ನೇಮಿಸಲಾಗಿತ್ತು, ಪಟ್ಟಣದ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಿ, ರಸ್ತೆ ಬದಿಯಲ್ಲಿ ಚರಂಡಿ ಮತ್ತು ಇತರ ಸ್ಥಳಗಳಲ್ಲಿ ಸ್ವಚ್ಛಗೊಳಿಸಿ ಬ್ಲೀಚಿಂಗ್ ಪೌಡರ್ ಹಾಕಲಾಗಿತ್ತು, ಉತ್ಸವ ಸಂದರ್ಭ ತುಂತುರು ಮಳೆಯ ನಡುವೆಯೂ ಭಾರೀ ಜನರು ಸೇರಿದ್ದರು.

## ರಾಜ್ಯ ಸೀನಿಯರ್ ವುಮೆನ್ಸ್ ಫುಟ್ಬಾಲ್ ತಂಡದ ಫಿಜಿಯೋಥೆರಪಿಸ್ಟ್ ಆಗಿ ಡಾ.ಪ್ರಜ್ಞಾ ಪಿ.ಮಲ್ಲೇಂಗಡ ನೇಮಕ



**ನಾಪೋಕ್ಲು:** ಕರ್ನಾಟಕ ರಾಜ್ಯ ಫುಟ್ಬಾಲ್ ಅಸೋಸಿಯೇಷನ್ ವತಿಯಿಂದ ಡಾ.ಪ್ರಜ್ಞಾ ಪಿ.ಮಲ್ಲೇಂಗಡ ಅವರನ್ನು ಕರ್ನಾಟಕ ರಾಜ್ಯ ಸೀನಿಯರ್ ವುಮೆನ್ಸ್ ಫುಟ್ಬಾಲ್ ತಂಡದ ಫಿಜಿಯೋಥೆರಪಿಸ್ಟ್ ಆಗಿ ನೇಮಕ ಮಾಡಲಾಗಿದೆ. ಸೆಪ್ಟೆಂಬರ್ 10ರವರೆಗೆ ಛತ್ತೀಸ್ ಗಡದ ನಾರಾಯಣಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಫುಟ್ಬಾಲ್ ಚಾಂಪಿಯನ್ ಶಿಪ್‌ನಲ್ಲಿ ಅವರು ಕಾರ್ಯನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಇವರು ಬಲ್ಲಮಾವಟಿ ಗ್ರಾಮದ ನುಚ್ಚಿಮಣಿಯಂಡ ಮೋಹನ್ ಅವರ ಪತ್ನಿ.

## ಶಿಕ್ಷಕ ಕೈಬಿಲಿರ ಎಂ ಪೂವಪ್ಪ ರಾಮಯ್ಯ ನಿಧನ



**ನಾಪೋಕ್ಲು;** ಇಲ್ಲಿಗೆ ಸಮೀಪದ ಕಕ್ಕಬೆ ಕುಂಜಿಲ ಗ್ರಾಮದ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕ ಕೈಬಿಲಿರ ಎಂ ಪೂವಪ್ಪ ರಾಮಯ್ಯ (77) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆಯು ಶನಿವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು. ಶ್ರೀಯುತರು ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಭಾಂದವರನ್ನು ಅಗಲಿದ್ದಾರೆ.

### ಪ್ರಶ್ನೆ ಕೇಳಿದ ಮಹಿಳಾ ವರದಿಗಾರ್ತಿಗೆ ಅಪಮಾನ

## ಆರ್.ವಿ.ದೇಶಪಾಂಡೆ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ



ಕಾಂಗ್ರೆಸ್ ಮುಖಂಡ ಆರ್.ವಿ.ದೇಶಪಾಂಡೆ ವಿರುದ್ಧ ಮಹಿಳೆಯರ ಪ್ರತಿಭಟನೆ.

**ಮಡಿಕೇರಿ:** ಮಾಧ್ಯಮದ ಮಹಿಳಾ ವರದಿಗಾರರೊಬ್ಬರು ಸಾಮಾಜಿಕ ಕಳಕಳಿಯಿಂದ ಕೇಳಿದ ಪ್ರಶ್ನೆಗೆ ಅವಹೇಳನಕಾರಿಯಾಗಿ ಪ್ರತಿಕ್ರಿಯಿಸಿರುವ ಸಚಿವ ಆರ್.ವಿ.ದೇಶಪಾಂಡೆ ಅವರ ಧೋರಣೆ ಮತ್ತು ಮೋದಿಯವರ ತಾಯಿಯನ್ನು ಆರ್‌ಜೆಡಿ ಮತ್ತು ಕಾಂಗ್ರೆಸ್ ರ್‍ಯಾಲಿಯಲ್ಲಿ ನಿಂದಿಸಿರುವ ಕ್ರಮವನ್ನು ಖಂಡಿಸಿ ಕೊಡಗು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ದಿಂದ ನಗರದ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಯಿತು.

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರ ನೇತೃತ್ವದಲ್ಲಿ ಶನಿವಾರ ಬೆಳಗ್ಗೆ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ಮಹಿಳಾ ಮೋರ್ಚಾ ಪದಾಧಿಕಾರಿಗಳು, ಸದಸ್ಯರು, ಪಕ್ಷದ ಪ್ರಮುಖರು, ಕಾರ್ಯಕರ್ತರು ಸಮಾವೇಶಗೊಂಡು ಘೋಷಣೆಗಳ ಸಹಿತ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಸರ್ಕಾರದ ಸಚಿವ ಆರ್.ವಿ.ದೇಶಪಾಂಡೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿ ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಕೆಲವು ದಿನಗಳ ಹಿಂದೆ ದೃಶ್ಯ ವಾಹಿನಿಯ ಮಹಿಳಾ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಸಚಿವ ದೇಶಪಾಂಡೆ ಅವರು ಲೇವಡಿಯಿಂದ ಪ್ರತಿಕ್ರಿಯಿಸಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಇವರಿಗೆ ತಾಯ್ತನದ ಬಗ್ಗೆ ಅರಿವಿಲ್ಲವೇ? ಎಂದು ಪ್ರಶ್ನಿಸಿದರು. ಮಹಿಳೆಯರ ಅನುಕೂಲಕ್ಕಾಗಿ ಆಸ್ಪತ್ರೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪತ್ರಕರ್ತೆ ಕೇಳಿದ ಪ್ರಶ್ನೆಗೆ ಸಚಿವರು ನೀಡಿರುವ ಉತ್ತರ ಇಡೀ ಸ್ತ್ರೀ ಕುಲಕ್ಕೆ ಮಾಡಿರುವ ಅವಮಾನವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಸಚಿವರು ಕ್ಷಮೆಯಾಚಿಸಲಿ:** ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಸಚಿವ ದೇಶಪಾಂಡೆ ಅವರು ಮಹಿಳೆಯರ ಬಳಿ ಕ್ಷಮೆಯಾಚನೆ ಮಾಡಬೇಕು. ಇವರನ್ನು ರಾಜ್ಯ ಸಚಿವ ಸಂಪುಟದಿಂದ ಕೈಬಿಡಬೇಕೆಂದು ಒತ್ತಾಯಿಸಿದರು. ಬಿಹಾರದ ಆರ್‌ಜೆಡಿ ಮತ್ತು ಕಾಂಗ್ರೆಸ್‌ನ ರ್‍ಯಾಲಿಯಲ್ಲಿ ಪ್ರಧಾನ ಮಂತ್ರಿ ಮೋದಿ ಅವರ ತಾಯಿಯ ಬಗ್ಗೆ ಅತ್ಯಂತ ಕೀಳು ಮಟ್ಟದ ಪದಗಳಿಂದ ಟೀಕಿಸಲಾಗಿದೆ ಎಂದರು. ಪ್ರತಿಭಟನೆಯಲ್ಲಿ ರಾಬಿನ್ ದೇವಯ್ಯ, ನಗರ ಸಭಾ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಉಮೇಶ್ ಸುಬ್ರಮಣಿ ಬಿ.ಕೆ.ಅರುಣ್‌ಕುಮಾರ್, ಬಿ.ಕೆ.ಜಗದೀಶ್, ಉಮಾ ಪ್ರಭು, ಸವಿತಾ, ಶ್ವೇತಾ ಪ್ರಶಾಂತ್, ಮಂಜುಳ ಇತರರಿದ್ದರು.

### ಇಂದು ಚಂದ್ರಗ್ರಹಣ

## ದೇವರ ದರ್ಶನಕ್ಕೆ ಅವಕಾಶವಿಲ್ಲ



ಮಡಿಕೇರಿ, ಸೆ.6– ಭಾನುವಾರ (ಸೆ.7) ರಂದು ಸಂಭವಿಸುವ ಭಾದ್ರಪದ ಶುಕ್ಲ ಪೌರ್ಣಮಿ ರಾಹುಗ್ರಸ್ತ ಚಂದ್ರಗ್ರಹಣ ಪ್ರಯುಕ್ತ ಶ್ರೀ ಭಗಂಡೇಶ್ವರ ಮತ್ತು ತಲಕಾವೇರಿ ದೇವಾಲಯಗಳಲ್ಲಿ ಸಂಜೆ 5 ಗಂಟೆಯಿಂದ ಸಾರ್ವಜನಿಕ ಭಕ್ತಾಧಿಗಳಿಗೆ ದೇವರ ದರ್ಶನ ಮತ್ತು ಹುಣ್ಣಿಮೆಯ ಸಾಮೂಹಿಕರಿಗೆ, ಸತ್ಯನಾರಾಯಣ ಪೂಜೆ ಇರುವುದಿಲ್ಲ. ಆದ್ದರಿಂದ ಭಕ್ತಾಧಿಕಾರಿಗಳು ಸಹಕರಿಸುವಂತೆ ದೇವಾಲಯದ ಆಡಳಿತಾಧಿಕಾರಿಗಳ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿ ಎನ್.ಜಿ. ಚಂದ್ರಶೇಖರ್ ಅವರು ಕೋರಿದ್ದಾರೆ.

# ಮತ್ತೆ ಪೌರಾಯುಕ್ತರಾಗಿ ರಾಮದಾಸ್ ಮುಂದುವರಿಸದಂತೆ ಒತ್ತಾಯಿಸಿ ಪ್ರತಿಭಟನೆ



ಕನ್ನಡ ಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

**ಚಾಮರಾಜನಗರ:** ಪೌರಾಯುಕ್ತ ಸೇವೆಯಿಂದ ಬಿಡುಗಡೆಯಾಗಿರುವ ರಾಮದಾಸ್ ಅವರನ್ನು ಮುಂದುವರಿಸಬಾರದೆಂದು ಒತ್ತಾಯಿಸಿ ವಿವಿಧ ಕನ್ನಡ ಪರ ಸಂಘಟನೆಗಳ ಮುಖಂಡರು ನಗರದ ನಗರಸಭೆ ಕಚೇರಿಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜ್ ಮಾತನಾಡಿ, ಚಾಮರಾಜನಗರ ನಗರಸಭೆಯಲ್ಲಿ 2 ವರ್ಷಕ್ಕೂ ಹೆಚ್ಚು ಕಾಲ ಪೌರಾಯುಕ್ತರಾಗಿ ಆಡಳಿತ ನಡೆಸಿರುವ ರಾಮದಾಸ್ ಅವರನ್ನು ಜಿಲ್ಲಾಧಿಕಾರಿಗಳು ಮಾತೃ ಇಲಾಖೆಗೆ ಬಿಡುಗಡೆ ಮಾಡಿದರು. ಆದರೆ ಪೌರಾಯುಕ್ತರು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ತಡೆಯಾಜ್ಞೆ ತಂದಿದ್ದಾರೆ. ಇದು ನಗರ ನಾಗರಿಕರಿಗೆ ಮಾಡಿದ ಅಪಮಾನವಾಗಿದೆ. ಕಾನೂನಿಗೆ ಮಾಡಿರುವ ಅಗೌರವವಾಗಿದೆ. ರಾಮದಾಸ್ ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಬಿಡುಗಡೆಯಾದ ದಿನದವರೆಗೂ ಸಮಗ್ರ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿಗಳು ನಗರಸಭೆಗೆ ಭೇಟಿ ನೀಡಿ ರಾಮದಾಸ್‌ರಿಂದ ಆಗಿರುವ ಹಗರಣದ ಕಡತಗಳನ್ನು ಪರಿಶೀಲನೆ ಮಾಡಿ ಕೂಡಲೇ ಅವರನ್ನು ಅಮಾನತ್ತಿನಲ್ಲಿಡಬೇಕು. ಪೌರಾಡಳಿತ ನಿರ್ದೇಶನಾಲಯಕ್ಕೆ ಅವರ ಮೇಲೆ ದೂರು ನೀಡಿ ಶಿಸ್ತುಕ್ರಮಕ್ಕೆ ಆದೇಶ ಮಾಡಬೇಕು. ಇಂತಹ ಭ್ರಷ್ಟ ಅಧಿಕಾರಿಯನ್ನ ಜಿಲ್ಲಾಧಿಕಾರಿಗಳು ಅಮಾನತು ಪಡಿಸಬೇಕು ಎಂದು ಒತ್ತಾಯಿಸಿದರು.

ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಸುರೇಶ್ ವಾಜಪೇಯಿ ಮಾತನಾಡಿ, ರಾಮದಾಸ್ ಅವರು ನಗರಸಭೆಯಲ್ಲಿ ಲಕ್ಷಾಂತರ ರೂಪಾಯಿ ಲೂಟಿ ಮಾಡಿದ್ದಾರೆ. ಇ–ಸ್ವತ್ತು ಕೊಡಲು ಬಾರದವರಿಗೆಲ್ಲ ಕೊಟ್ಟಿದ್ದಾರೆ. ಕೆರೆಕಟ್ಟೆಗಳೆಲ್ಲ ಇ–ಸ್ವತ್ತು ಮಾಡಿದ್ದಾರೆ ಎಂಬ ಮಾಹಿತಿ ಬಂದಿದೆ. ಯಾವುದೇ ಕಾರಣಕ್ಕೂ ರಾಮದಾಸ್ ಅವರು ಪೌರಾಯುಕ್ತರಾಗಿ ಮುಂದುವರಿಯಲು ಅವಕಾಶ ಕೊಡಬಾರದು ಎಂದು ಆಗ್ರಹಿಸಿದರು.

ಯುವಸೇನೆ ಕರ್ನಾಟಕ ಸೇವಾ ಸಂಘದ ನಮ್ಮನೆ ಪ್ರಶಾಂತ ಮಾತನಾಡಿದರು. ಪ್ರತಿಭಟನೆಯಲ್ಲಿ ಬಂಗಾರ ನಾಯಕ, ಸುನೀಲ್, ಸ್ವಾಮಿ, ಶ್ರೀನ, ಚಿನ್ನಪ್ಪ, ಸಂಪತ್, ಆಡಿಟ್ ಮಂಜೇಶ್ ಇತರರು ಭಾಗವಹಿಸಿದ್ದರು.

### ಪೌರಾಯುಕ್ತ ರಾಮದಾಸ್ ಮಾತೃ ಇಲಾಖೆಗೆ: ಕೆಎಟಿ ತಡೆಯಾಜ್ಞೆ



**ಚಾಮರಾಜನಗರ:** ಕರ್ತವ್ಯ ನಿರ್ಲಕ್ಷ್ಯದ ಆರೋಪದ ಮೇಲೆ ನಗರಸಭೆಯ ಪೌರಾಯುಕ್ತರ ಹುದ್ದೆಯಿಂದ ಬಿಡುಗಡೆಯಾಗಿದ್ದ ಎಸ್.ವಿ.ರಾಮದಾಸ್ ಜಿಲ್ಲಾಧಿಕಾರಿ ಆದೇಶದ ವಿರುದ್ಧ ಕೆಎಟಿಯಿಂದ ತಡೆಯಾಜ್ಞೆ ತಂದಿದ್ದಾರೆ.

ಪೌರಾಯುಕ್ತರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವ ವಿಚಾರದಲ್ಲಿ ಕೆಎಟಿ ನೀಡಿರುವ ಆದೇಶದ ಪ್ರತಿ ಕೈಸೇರಿಲ್ಲ. 8 ರಂದು ನ್ಯಾಯಾಲಯದ ಆದೇಶದ ಪ್ರತಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರತಿಕ್ರಿಯೆ ನೀಡಿದ್ದಾರೆ.

ಕರ್ತವ್ಯ ಲೋಪ, ಪೌರಾಯುಕ್ತರ ಹುದ್ದೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾಗಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಆ.30ರಂದು ಎಸ್.ಎ.ರಾಮದಾಸ್ ಅವರನ್ನು ಪೌರಾಯುಕ್ತರ ಹುದ್ದೆಯಿಂದ ಬಿಡುಗಡೆಗೊಳಿಸಿ ಸ್ಥಳ ನಿಯುಕ್ತಿಗಾಗಿ ಮಾತೃ ಇಲಾಖೆಯಾದ ತೋಟಗಾರಿಕಾ ಇಲಾಖೆಯ ಸಕ್ಷಮ ಪ್ರಾಧಿಕಾರದಲ್ಲಿ ವರದಿ ಕೊಳ್ಳುವಂತೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು.

ರಾಮದಾಸ್ ಅವರ ವಿರುದ್ಧ ಅನೇಕ ಆರೋಪಗಳಿದ್ದು, ಅವರನ್ನು ಡಿಸಿಯವರು ಮಾತೃಇಲಾಖೆಗೆ ಬಿಡುಗಡೆಗೊಳಿಸಿದ್ದು, ಸರಿಯಾದ ಕ್ರಮವಾಗಿತ್ತು. ಅಂಥ ಅಧಿಕಾರಿ ಕೆಎಟಿಯಿಂದ ತಡೆಯಾಜ್ಞೆ ತಂದು ಮತ್ತೆ ನಗರಸಭೆಗೆ ಬರುತ್ತಿರುವುದು ಖಂಡನೀಯ ಎಂದು ಸಂಘ ಸಂಸ್ಥೆಗಳು, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ರಸ್ತೆ ಒತ್ತುವರಿ ಜಾಗ ತೆರವು ಗೊಳಿಸುವಂತೆ ಎಡಿಸಿಗೆ ಮನವಿ



ಕರವೇ ಅಧ್ಯಕ್ಷ ಚಾ.ಗು.ನಾಗರಾಜು ಅವರ ನೇತೃತ್ವದಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು.

**ಚಾಮರಾಜನಗರ:** ನಗರದ 15ನೇ ವಾರ್ಡ್‌ನ 3ನೇ ಮತ್ತು 4ನೇ ಅಡ್ಡರಸ್ತೆಗಳಲ್ಲಿ ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಿ ವಾರ್ಡ್‌ನ ನಿವಾಸಿಗಳಿಗೆ ರಸ್ತೆ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವಂತೆ ಒತ್ತಾಯಿಸಿ ನಿವಾಸಿಗಳು ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜು ಅವರ ನೇತೃತ್ವದಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡರಿಗೆ ಮನವಿ ಸಲ್ಲಿಸಲಾಯಿತು.

ವಾರ್ಡ್ 3ನೇ ಮತ್ತು 4ನೇ ಅಡ್ಡರಸ್ತೆಯಲ್ಲಿ ಸಂಚರಿಸಲು ರಸ್ತೆ, ಬೀದಿ ದೀಪಗಳು, ಚರಂಡಿಗಳು ಸೇರಿದಂತೆ ಯಾವುದೇ ಮೂಲಸೌಕರ್ಯಗಳು ಸರಿಯಾಗಿಲ್ಲ. ಈ ಕುರಿತು ನಾವು ನಗರಸಭೆಗೆ ಹಲವು ಬಾರಿ ಅಧಿಕಾರಿಗಳಿಗೆ ದೂರು ನೀಡಿದ್ದೂ ಯಾವುದೇ ಪ್ರಯೋಜನವಾಗಿಲ್ಲ. ಹಲವು ವರ್ಷಗಳಿಂದಲೂ ಇರುವ ನಿವಾಸಿಗಳು ಈ ಮೂಲಭೂತ ಸೌಕರ್ಯಗಳ ಕೊರತೆಯಿಂದ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಮ್ಮನ್ನು ಸಂಪೂರ್ಣವಾಗಿ ಕಡೆಗಣಿಸಿರುವುದು ನಮಗೆ ಬಹಳ ನೋವು ತಂದಿದೆ ಮತ್ತು ನಮಗೆ ಮುಂದಿನ ದಾರಿಯೇ ತೋಚದಂತಾಗಿದೆ ಎಂದು ನಿವಾಸಿಗಳು ದೂರಿದ್ದಾರೆ.

ತಾವು ಕೂಡಲೇ ಸ್ಥಳಕ್ಕೆ ಭೇಟಿ ಇತ್ತು ಸ್ಥಳ ಪರಿಶೀಲನೆ ಮಾಡಿ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ತೆರವುಗೊಳಿಸಿ, ರಾಜಕಾಲುವೆಯಲ್ಲಿ ಹರಿಯದೇ ನಿಂತಿರುವ ನೀರು ಸರಾಗವಾಗಿ ಹರಿಯುವ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ವಾರ್ಡ್‌ನ ನಿವಾಸಿಗಳು ನೆಮ್ಮದಿಯಿಂದ ಜೀವನ ಸಾಗಿಸಲು ಅನುಕೂಲ ಮಾಡಿಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ನಿವಾಸಿಗಳಾದ ವಿಜಯಕುಮಾರ್, ಬಂಗಾರನಾಯಕ, ಎಸ್. ಆರ್. ಶೇಷಚಲ, ಮನು ಒತ್ತಾಯಿಸಿದ್ದಾರೆ.

## ಸೆ.10ರಿಂದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

**ಚಾಮರಾಜನಗರ:** ಚಾಮರಾಜನಗರ ಜಿಲ್ಲಾ ಮಟ್ಟದ 2025–26ನೇ ಸಾಲಿನ ದಸರಾ ಕ್ರೀಡಾಕೂಟವನ್ನು ಸೆ.10 ಮತ್ತು 11ರಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಸೆ.10ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಖೋ–ಖೋ, ಕಬ್ಬಡಿ, ಥ್ರೋಬಾಲ್, ಫುಟ್‌ಬಾಲ್, ಯೋಗಾಸನ (ಪಾದಹಸ್ತಾಸನ, ಆಕರ್ಣ ಧನುರಾಸನ, ಊರ್ಧ್ವಧನುರಾಸನ, ಅರ್ಧ ಮತ್ಸೇಂದ್ರಾಸನ) ಹಾಗೂ ಸೆ.11ರಂದು ಬಾಲ್ ಬ್ಯಾಡ್ಮಿಂಟನ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಹ್ಯಾಂಡ್ ಬಾಲ್, ನೆಟ್‌ಬಾಲ್, ಕುಸ್ತಿ, ಈಜು, ಹಾಕಿ ಹಾಗೂ ಕೊಳ್ಳೇಗಾಲದ ಎಂ.ಜಿ.ಎಸ್.ವಿ. ಕಾಲೇಜು ಮೈದಾನದಲ್ಲಿ ಬ್ಯಾಸ್ಕೆಟ್ ಬಾಲ್ ಕ್ರೀಡೆಗಳು ನಡೆಯಲಿವೆ.

ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರು ಮತ್ತು ಗುಂಪು ಸ್ಪರ್ಧೆಯಲ್ಲಿ (ರಿಲೇ ಒಳಗೊಂಡಂತೆ) ಪ್ರಥಮ ಸ್ಥಾನ ಪಡೆದವರು ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕ್ರೀಡಾಕೂಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ತಾಲೂಕು ಕೇಂದ್ರದಿಂದ ಹೋಗಿ ಬರುವ ಕನಿಷ್ಠದರ ಪ್ರಯಾಣ ಭತ್ಯೆಯನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು. ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದೂ.ಸಂ. 08226–224932, 9916466659, 9353715053, 9945615695, 9880211027 ಸಂಪರ್ಕಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೊಮ್ಮನಹಳ್ಳಿ ಪಿ.ಮಹದೇವಪ್ಪ ನಿಧನ



ಗುಂಡ್ಲುಪೇಟೆ, ಸೆ.6– ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ವಾಸಿಯಾದ ಪಿ.ಮಹದೇವಪ್ಪ(65) ಶನಿವಾರ ಮುಂಜಾನೆ 3ರ ಸಮಯದಲ್ಲಿ ಮೃತರಾದರು. ಪತ್ನಿ ಭಾಗ್ಯಮ್ಮ ಹಾಗೂ ಪುತ್ರ ಬೇಗೂರು ಪೊಲೀಸ್ ಠಾಣೆಯ ಮುಖ್ಯಪೇದೆ ಪ್ರಭುಸ್ವಾಮಿ ಸೇರಿದಂತೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶನಿವಾರ ಸಂಜೆ ಅವರ ತೋಟದಲ್ಲಿ ನಡೆಸಲಾಯಿತು.

## ಪ್ರವೀಣ್ ಗೌಡರ ಬಣದ ಕರವೇ ಯಳಂದೂರು ತಾಲೂಕು ಅಧ್ಯಕ್ಷರಾಗಿ ಕೆಂಪರಾಜು ಆಯ್ಕೆ



ಯಳಂದೂರು ತಾಲೂಕು ಅಧ್ಯಕ್ಷರಾಗಿ ಕೆಂಪರಾಜು ಅವರನ್ನು ಆಯ್ಕೆ ಮಾಡಲಾಯಿತು.

ಯಳಂದೂರು, ಸೆ.6– ತಾಲೂಕಿನಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣದ ಯಳಂದೂರು ತಾಲೂಕು ನೂತನ ಅಧ್ಯಕ್ಷರಾಗಿ ವೈ.ಕೆ.ಮೋಳೆಯ ಕೆಂಪರಾಜು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಚಾಮರಾಜನಗರ ನಗರ ಜಿಲ್ಲಾ ಅಧ್ಯಕ್ಷ ಆರ್.ಮೋಹನ್ ಘೋಷಿಸಿದರು

ನೂತನ ತಾಲೂಕು ಅಧ್ಯಕ್ಷ ವೈ.ಕೆ. ಮೋಳೆ ಕೆಂಪರಾಜು ಮಾತನಾಡಿ, ನನ್ನ ಮೇಲೆ ನಂಬಿಕೆ ಇಟ್ಟು ನನ್ನ ಪ್ರಾಮಾಣಿಕ ಸೇವೆಯನ್ನು ಗುರುತಿಸಿ ನನಗೆ ತಾಲೂಕು ಅಧ್ಯಕ್ಷ ಸ್ಥಾನ ವನ್ನು ನೀಡಿರುವ ಜಿಲ್ಲಾ ಅಧ್ಯಕ್ಷರಿಗೆ ಹಾಗೂ ಜಿಲ್ಲಾ ಘಟಕದ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದಿಸುತ್ತೇನೆ. ತಾಲೂಕಿನ ಜನತೆಗೆ, ಮಹಿಳೆಯರಪರ ವಿದ್ಯಾರ್ಥಿಗಳ ಪರ ಹಾಗೂ ಕನ್ನಡ ನಾಡು ನುಡಿಯ ಪರವಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಮೋಹನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷ, ಜಿಲ್ಲಾ ಉಪಾಧ್ಯಕ್ಷ ನಾಗೇಶ್ ನಾಯಕ್, ಜಿಲ್ಲಾ ಗೌರವ ಸಲಹೆಗಾರ ಅಣ್ಣಗಲ್ಲಿ ಬಸವರಾಜ್, ತಾಲೂಕು ಅಧ್ಯಕ್ಷ ಕೆಂಪರಾಜು, ಯಳಂದೂರು ಬಳೇಪೇಟೆ ಪಿಎಸಿಸಿ ಅಧ್ಯಕ್ಷ ವೈ.ಬಿ.ಮಹೇಶ್, ಮಂಡಲ ಮುಖಂಡರಾದ ಅನಿಲ್, ಮಹೇಶ್, ವೈ.ಡಿ. ಸೂರ್ಯನಾರಾಯಣ, ಗೋವಿಂದರಾಜು, ದೊಡ್ಡರಾಜು, ಸಂಪತ್ ಕುಮಾರ್, ಮಾದೇಶ, ದೊಡ್ಡರಾಜು, ಮಹೇಶ್, ಕಿಟ್ಟಿ, ಯೋಗೇಶ್, ಪ್ರದೀಪ್, ಮಂಜುನಾಥ್, ಸುರೇಶ ಇದ್ದರು

## ಅಂಚೆ ಉದ್ಯಮ ಸಪ್ತಾಹ

**ಚಾಮರಾಜನಗರ:** ನಂಜನಗೂಡು ಅಂಚೆ ವಿಭಾಗದ ವ್ಯಾಪ್ತಿಗೆ ಬರುವ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು, ಯಳಂದೂರು ಹಾಗೂ ಚಾಮರಾಜನಗರ ತಾಲೂಕುಗಳ ವ್ಯಾಪ್ತಿಯಲ್ಲಿ ಸೆ.8 ರಿಂದ 13ರವರೆಗೆ ಅಂಚೆ ಮಹಾ ಉದ್ಯಮ ಸಪ್ತಾಹವನ್ನು ಆಯೋಜಿಸಲಾಗಿದೆ.

ಅಂಚೆ ಮಹಾ ಉದ್ಯಮ ಸಪ್ತಾಹ– ಅಭಿಯಾನದಲ್ಲಿ ಬ್ಯಾಂಕ್‌ಗಳು, ಸರ್ಕಾರಿ ಅಥವಾ ಖಾಸಗಿ ಕಚೇರಿಗಳು, ಶೈಕ್ಷಣಿಕ ಸಂಸ್ಥೆಗಳು, ಉದ್ಯಮಿಗಳು ಹಾಗೂ ಸಾಮಾನ್ಯ ಗ್ರಾಹಕರಿಗೆ ಸ್ಪೀಡ್ ಪೋಸ್ಟ್, ಪಾರ್ಸೆಲ್, ಸಿ.ಓ.ಡಿ, ಇಂಟರ್ನ್ಯಾಷನಲ್ ಮೇಲ್ಸ್ ಮುಂತಾದ ಸೇವೆಗಳ ಪ್ರಚಾರ ನಡೆಸಲಾಗುವುದು ಎಂದು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಸಾಕ್ಷರತಾ ದಿನಾಚರಣೆ

**ಚಾಮರಾಜನಗರ:** ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಪ್ತಾಹವನ್ನು ಜಿಪಂ ಸಿಇಓ ಅವರ ಅಧ್ಯಕ್ಷತೆಯಲ್ಲಿ ಸೆ.8 ರಂದು ಬೆಳಿಗ್ಗೆ 9.30 ಗಂಟೆಗೆ ಕೂಡ್ಲೂರು ಗ್ರಾಮ ಪಂಚಾಯಿತಿಯ ಬೂದಿತಿಟ್ಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಛಾಯಾಗ್ರಾಹಕ ಎಸ್.ಚರಣ್ ಬಿಳಿಗಿರಿಗೆ ರಾಜ್ಯಮಟ್ಟದ ಬಹುಮಾನ



ಚಾಮರಾಜನಗರ, ಸೆ.6– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಅಂಗವಾಗಿ ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದ ವತಿಯಿಂದ ರಾಜ್ಯ ಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಪತ್ರಿಕಾ ಛಾಯಾಗ್ರಾಹಕರು ತಮ್ಮ ಸುದ್ದಿ ಛಾಯಾ ಚಿತ್ರಗಳನ್ನು ಕಳುಹಿಸಿದ್ದರು. ಹಿರಿಯ ಛಾಯಾಗ್ರಾಹಕ ದಿವಂಗತ ನೇತ್ರರಾಜು ಸ್ಮರಣಾರ್ಥ ಅತ್ಯುತ್ತಮ ಛಾಯಾಚಿತ್ರಕ್ಕೆ ಬಹುಮಾನವನ್ನು ಸಹ ಘೋಷಿಸಲಾಗಿತ್ತು. ಈ ಎಲ್ಲಾ ಸ್ಪರ್ಧೆಯ ತೀರ್ಪುಗಾರರಾಗಿ ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಹಿರಿಯ ಛಾಯಾ ಗ್ರಾಹಕ ಎಸ್.ತಿಪ್ಪೇಸ್ವಾಮಿ ಹಾಗೂ ಪತ್ರಕರ್ತ ಟಿ.ಜಿ. ಗುರುರಾಜ್ ಕಾರ್ಯನಿರ್ವಹಿಸಿ ಅತ್ಯುತ್ತಮ ಛಾಯಾಚಿತ್ರಗಳನ್ನು ಆಯ್ಕೆ ಮಾಡಿ ತಮ್ಮ ತೀರ್ಪನ್ನು ನೀಡಿದ್ದಾರೆ.

ಈ ರಾಜ್ಯ ಮಟ್ಟದ ಛಾಯಾಗ್ರಾಹಕ ಸ್ಪರ್ಧೆಯಲ್ಲಿ ಎಸ್ ಚರಣ್ ಬಿಳಿಗಿರಿ ಚಾಮರಾಜನಗರ ಅವರು ಸಮಾಧಾನಕರ ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರಿನಲ್ಲಿ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಗುವುದು.

ಮೈಸೂರು ಮಿತ್ರ
ಭಾನುವಾರ 07-09-2025

# ವಾರದ ಮಿತ್ರ
## ಸಾಪ್ತಾಹಿಕ ಪುರವಣಿ



# ರಕ್ತ ಚಂದ್ರ ಗೋಚರ!



ರಾತ್ರಿ ಆಕಾಶವನ್ನು ನೋಡಿದಾಗಲೆಲ್ಲ ನಮಗೆ ಅನ್ನಿಸುವುದು, ಅಬ್ಬಾ... ಪ್ರಕೃತಿ ನೀನೆಷ್ಟು ವಿಸ್ಮಯ! ತನ್ನ ಒಡಲೊಳಗೆ ಅದೆಷ್ಟೋ ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳು, ಉಲ್ಕೆಗಳು, ಕ್ಷುದ್ರಗ್ರಹಗಳು, ಧೂಮಕೇತುಗಳು ಎಲ್ಲವನ್ನು ಹೊತ್ತು ನಿಂತಿರುವುದಾದರೂ ಹೇಗೆ? ಇಷ್ಟೊಂದು ಅಗಾಧ ಪ್ರಮಾಣದ ಕಾಯಗಳು ಹೇಗೆ ಚಲಿಸುತ್ತವೆ? ಎಂದು ಪ್ರಶ್ನೆ ಮೂಡುವುದು ಸಹಜ. ವೈಜ್ಞಾನಿಕ ಸಿದ್ಧಾಂತದಲ್ಲಿ ಗುರುತ್ವಾಕರ್ಷಣಾ ಬಲ ಇವೆಲ್ಲದಕ್ಕೂ ಕಾರಣ ಎಂದು ಒಂದು ಪದದಲ್ಲಿ ಉತ್ತರಿಸಿದರೂ ಈಗಲೂ ಅದೆಷ್ಟೋ ಸಾಮಾನ್ಯ ಜನರು ಅದನ್ನು ದೈವ ಸೃಷ್ಟಿ ಎಂದು ನಂಬುತ್ತಾರೆ.

ಅಮಾವಾಸ್ಯೆ ಮತ್ತು ಹುಣ್ಣಿಮೆ ಬರುವಷ್ಟರಲ್ಲಿ ಕಣ್ಣಾಮುಚ್ಚಾಲೆ ಆಟ ಆಡುವ ಚಂದಮಾಮ ಮತ್ತು ಪ್ರತಿದಿನ ತನ್ನ ಸಮಯಕ್ಕೆ ಸರಿಯಾಗಿ ಉದಯಿಸಿ, ಸಮಯಕ್ಕೆ ಸರಿಯಾಗಿ ಅಸ್ತಂಗತವಾಗುವ ಸಾಕ್ಷಾತ್ ಭಗವಂತನ ದರ್ಶನ ಎಂಬಂತೆ ನಮ್ಮೆಲ್ಲರಿಗೂ ಅರ್ಧ ದಿನ ದರ್ಶನ ನೀಡುವ ಸೂರ್ಯ, ಇಡೀ ಬ್ರಹ್ಮಾಂಡದಲ್ಲಿ ತನ್ನಲ್ಲಿ ಮಾತ್ರ ಜೀವಿಗಳು ವಾಸ ಮಾಡಲು ಸಿಗುವ ಆಮ್ಲಜನಕ, ನೀರು ಹಾಗೂ ನೆಲ ಹಾಗೂ ಸರಿ ಪ್ರಮಾಣದ ಉಷ್ಣಾಂಶವನ್ನು ಒಳಗೊಂಡಿರುವ ಭೂತಾಯಿ, ಅಂದರೆ ಭೂಗ್ರಹ. ಈ ಮೂವರ ಚಲನೆಯಿಂದ ಉಂಟಾಗುವ ಕೆಲವು ಪ್ರಾಕೃತಿಕ ಬೆಳಕು ನೆರಳಿನ ಆಟಗಳೇ ಗ್ರಹಣಗಳು. ಹೌದು, ನಾವು ಇದೇ ಸೆಪ್ಟೆಂಬರ್ 7ರಂದು ಒಂದು ಸಂಪೂರ್ಣ ಚಂದ್ರಗ್ರಹಣವನ್ನು ಕಣ್ತುಂಬಿಕೊಳ್ಳಬಹುದು.

ಕೆಲವು ಸ್ಥಳೀಯ ಅಮೆರಿಕನ್ ಬುಡಕಟ್ಟು ಜನಾಂಗದವರು ಚಂದ್ರನು ಪ್ರೀತಿ ಮತ್ತು ಕಾಳಜಿಯಿಂದ ವಂಚಿತನಾದಾಗ ಆತ ಕೆಂಪು ಬಣ್ಣಕ್ಕೆ ತಿರುಗುತ್ತಾನೆ ಎಂದು ಭಾವಿಸುತ್ತಾರೆ. ಅವರ ಪ್ರಕಾರ ರಕ್ತಸಿಕ್ತ ಚಂದ್ರ ಎಂದರೆ ಚಂದ್ರನಿಗೆ ವಾತ್ಸಲ್ಯದ ಅಗತ್ಯವಿದೆ ಎಂದರ್ಥ. ಸೆಪ್ಟೆಂಬರ್ 7ರಂದು ನಡೆಯಲಿರುವ ಸಂಪೂರ್ಣ ಚಂದ್ರಗ್ರಹಣವು ಒಂದು ವಿಶೇಷ ಸಂಪೂರ್ಣ ಚಂದ್ರ ಗ್ರಹಣ. ಭೂಮಿಯ ನೆರಳು ಚಂದ್ರನನ್ನು ಆವರಿಸಿದಾಗ ಪ್ರಕೃತಿಯ ಭವ್ಯ ದೃಶ್ಯವನ್ನು ವಿಶ್ವಮಟ್ಟದಲ್ಲಿ ವೀಕ್ಷಿಸಲು ಒಂದು ಅದ್ಭುತ ಅವಕಾಶವನ್ನು ಕಲ್ಪಿಸುತ್ತದೆ. ಇದನ್ನು ಬರಿಗಣ್ಣಿನಿಂದಲೂ ವೀಕ್ಷಿಸಬಹುದಾಗಿದೆ.

ರಕ್ತ ಚಂದ್ರ ಎಂದಾಕ್ಷಣ ನಮಗೆ ನೆನಪಾಗುವುದು ಕೋಪಗೊಂಡ ಚಂದ್ರ ಅಥವಾ ಕ್ರೂರಿ ಚಂದ್ರ ಎಂಬಂತೆ ಭಾಸವಾಗುತ್ತದೆ. ಬುಡಕಟ್ಟು ಜನಾಂಗದವರ ಪ್ರಕಾರ ಪ್ರೀತಿಗಾಗಿ ಚಂದ್ರ ಕೊರಗುತ್ತಾನೆ ಇಲ್ಲ ಕೂಗುತ್ತಾನೆ. ಈ ಪದ ಹಾಸ್ಯಾಸ್ಪದ ಎಂದು ಪರಿಗಣಿಸಿದರೂ ಸಹ ಸೆಪ್ಟೆಂಬರ್ 7ರಂದು ನಡೆಯುವ ಸಂಪೂರ್ಣ ಚಂದ್ರ ಗ್ರಹಣಕ್ಕೆ ಅನ್ವಯಿಸಿದಾಗ ಅರ್ಥಪೂರ್ಣವೆನಿಸುತ್ತದೆ.

ಭವಿಷ್ಯ ನುಡಿಯುವವರು, ಕಥೆಗಾರರು, ಮಂತ್ರವಾದಿಗಳು ಹಾಗೂ ಕವಿಗಳು ಈ ಚಂದ್ರಗ್ರಹಣವನ್ನು ವಿವಿಧ ರೂಪದಲ್ಲಿ ಬಿಂಬಿಸುತ್ತಾರೆ ಮತ್ತು ವ್ಯಾಖ್ಯಾನಿಸುತ್ತಾರೆ. ಆಧ್ಯಾತ್ಮಿಕ ಮತ್ತು ತಾಂತ್ರಿಕವಾಗಿ ಈ ಚಂದ್ರಗ್ರಹಣವನ್ನು ನಾವು ಬಾಹ್ಯಾಕಾಶದ ವಿಸ್ಮಯವೆಂದೇ ಪರಿಗಣಿಸಬಹುದು. ಅದು ಏನೇ ಇರಲಿ, ಖಗೋಳಶಾಸ್ತ್ರಜ್ಞರು ಹಾಗೂ ರಾತ್ರಿ ಆಕಾಶ ವೀಕ್ಷಕರು ಈ ವರ್ಷದ ಸೆಪ್ಟೆಂಬರ್ 7ರ ಭಾನುವಾರ ರಾತ್ರಿಯನ್ನು ಸಂಪೂರ್ಣ ಚಂದ್ರ ಗ್ರಹಣವನ್ನು ವೀಕ್ಷಿಸುವ ಉತ್ತಮ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಇಂತಹ ಚಂದ್ರಗ್ರಹಣವು ಮೂರು ವರ್ಷದ ಹಿಂದೆ, ಅಂದರೆ, ನವೆಂಬರ್ 8, 2022ರಲ್ಲಿ ಸಂಭವಿಸಿತ್ತು. ಈ ಸನ್ನಿವೇಶವು ಚಂದ್ರನ ಗೋಚರತೆಯ ದೃಷ್ಟಿಯಿಂದ ಒಂದು ಸಂಪೂರ್ಣ ಯಶಸ್ಸಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಡಿಸೆಂಬರ್ 10, 2011ರಂದು ಸಂಭವಿಸಿದ ಹಿಂದಿನ ಗ್ರಹಣವು ಹೆಚ್ಚಿನ ಸ್ಥಳಗಳಲ್ಲಿ ಮೋಡ ಕವಿದ ವಾತಾವರಣದಿಂದಾಗಿ ಖಗೋಳಶಾಸ್ತ್ರಜ್ಞರಿಗೆ ಭಾರಿ ನಿರಾಶೆಯನ್ನುಂಟು ಮಾಡಿತ್ತು.

ಸೂರ್ಯ ಮತ್ತು ಚಂದ್ರ ಮೂರು ಆಕಾಶಕಾಯಗಳು ತಮ್ಮ ಕಕ್ಷೆಯಲ್ಲಿ ಸುತ್ತುತ್ತಿರುವಾಗ ಒಂದು ನಿರ್ದಿಷ್ಟ ಸ್ಥಳದಲ್ಲಿ ಸರಳ ರೇಖಾ ರೂಪದಲ್ಲಿ ಗೋಚರಿಸಿದಾಗ ಗ್ರಹಣಗಳು ಉಂಟಾಗುತ್ತವೆ. ಹುಣ್ಣಿಮೆಯ ದಿನದಂದು ಭೂಮಿಯು ಸೂರ್ಯ ಮತ್ತು ಚಂದ್ರನ ನಡುವೆ ಬಂದಾಗ ಚಂದ್ರನು ಭೂಮಿಯ ನೆರಳಿನಲ್ಲಿ ಬರುತ್ತಾನೆ. ಈ ಕಾರಣದಿಂದಾಗಿ ಸೂರ್ಯನ ಬೆಳಕು ನೇರವಾಗಿ ಚಂದ್ರನ ಮೇಲೆ ಬೀಳುವುದಿಲ್ಲ.

ಈ ಸಮಯದಲ್ಲಿ ಚಂದ್ರಗ್ರಹಣವು ಸಂಭವಿಸುತ್ತದೆ. ಭೂಮಿಯ ಯಾವುದೇ ಮೂಲೆಯಲ್ಲಿ ನಿಂತು ನೋಡಿದಾಗಲೂ ಗ್ರಹಣವು ಭಾಗಶಃ ಅಥವಾ ಸಂಪೂರ್ಣವಾಗಿ ಕಾಣುತ್ತದೆ.

ವಿಶಾಲವಾದ ಭೂಮಿಯ ವಾತಾವರಣದಲ್ಲಿ ಹರಡಿರುವ ಸೂರ್ಯನ ಬೆಳಕು ಪ್ರಧಾನವಾಗಿ ಏಳು ಬಣ್ಣಗಳಿಂದ ಕೂಡಿದೆ. ಸೂರ್ಯನ ಬೆಳಕು ವಾತಾವರಣದಲ್ಲಿ ಚದುರಿದಾಗ ಕೆಂಪು ಬಣ್ಣವು ಹೆಚ್ಚು ತರಂಗ ದೂರ ಹೊಂದಿರುವುದರಿಂದ ಇದು ಚಂದ್ರನ ಮೇಲೆ ಅತೀ ಹೆಚ್ಚು ಭಾಗ ಬೀಳುತ್ತದೆ. ಈ ಬಣ್ಣದಿಂದಾಗಿ ಚಂದ್ರನು ಹೊಳೆಯುವುದರಿಂದ ಚಂದ್ರನನ್ನು ಸಂಪೂರ್ಣವಾಗಿ ಮಸುಕಾದ ತಾಮ್ರ ಕೆಂಪಿನಂತೆ ಕಾಣಬಹುದಾಗಿದೆ ಇದು ನೋಡಲು ಅದ್ಭುತ ದೃಶ್ಯವೇ ಸರಿ. ಈ ಗ್ರಹಣವು ಸೆಪ್ಟೆಂಬರ್ 7ರಂದು ಭಾದ್ರಪದ ಹುಣ್ಣಿಮೆ ದಿನದಂದು ರಾತ್ರಿ 9.56ರಿಂದ ಸೆಪ್ಟೆಂಬರ್ 8ರ ಮುಂಜಾನೆ 1.27ರವರೆಗೆ ಗ್ರಹಣದ ಅವಧಿ ಇರುತ್ತದೆ. ಈ ಗ್ರಹಣದ ಒಟ್ಟು ಅವಧಿ 3:31 ನಿಮಿಷಗಳು. ಭಾರತ ಸೇರಿದಂತೆ ಪ್ರಪಂಚದ ಹಲವು ಭಾಗಗಳಲ್ಲಿ ಚಂದ್ರಗ್ರಹಣ ಗೋಚರಿಸುತ್ತದೆ. ಭಾರತದಲ್ಲಿ ಈ ಗ್ರಹಣವು ದೆಹಲಿ, ಮುಂಬೈ, ಕೊಲ್ಕತ್ತಾ, ಪುಣೆ, ಲಕ್ಷದ್ವೀಪ, ಹೈದರಾಬಾದ್ ಹಾಗೂ ಚಂಡಿಗಢದಲ್ಲಿ ಪೂರ್ಣವಾಗಿ ವೀಕ್ಷಿಸಬಹುದಾಗಿದೆ.

ಈ ಸಂಪೂರ್ಣ ಚಂದ್ರಗ್ರಹಣವನ್ನು ವೀಕ್ಷಿಸಲು ರಾತ್ರಿ ಆಕಾಶವು ಮೋಡಗಳಿಂದ ಮುಕ್ತವಾಗಿರಬೇಕು. ಜೊತೆಗೆ ವೀಕ್ಷಣೆಗೆ ತೊಡಕನ್ನು ಉಂಟುಮಾಡುವ ವಿದ್ಯುತ್ ದೀಪಗಳಿಂದ ಆದಷ್ಟು ದೂರವಿರಬೇಕು.

ಭಾರತದ ಹೆಚ್ಚಿನ ಭಾಗಗಳಲ್ಲಿ ಹವಾಮಾನವನ್ನು ಅವಲಂಬಿಸಿ ಸೆಪ್ಟೆಂಬರ್ 7ರ ಸಂಜೆ ಸೂರ್ಯಾಸ್ತಮಾನದ ಪೂರ್ವದಲ್ಲಿ ಉದಯಿಸುವ ಪ್ರಕಾಶಮಾನವಾದ ಮತ್ತು ಅದ್ಭುತವಾದ ಹುಣ್ಣಿಮೆಯಿಂದ ಸ್ವಾಗತಿಸಲ್ಪಡುತ್ತದೆ.

ಗ್ರಹಣದ ಪ್ರಕಾರ ಹಂತ ಪ್ರಾರಂಭವಾಗಲೂ ರಾತ್ರಿ 9ರ ತನಕ ಕಾಯಬೇಕು. ಕನಿಷ್ಠ ಸಮಯದವರೆಗೆ ಚಂದ್ರನು ಹೊಳಪಿನಲ್ಲಿ ಸ್ವಲ್ಪ ಇಳಿಕೆಯನ್ನು ಗಮನಿಸಬಹುದು. ನುರಿತ ವೀಕ್ಷಕರು ಮಾತ್ರ ಚಂದ್ರನ ಉಂಗುರದ ಸುತ್ತಮುತ್ತ ಮುಸುಕಾದ ಛಾಯೆಯನ್ನು ಪತ್ತೆಹಚ್ಚಬಹುದಾಗಿದೆ.

ಈ ಹಂತವು ಸುಮಾರು ಒಂದು ಗಂಟೆಯ ಕಾಲ ಇರುತ್ತದೆ. ರಾತ್ರಿ 10ರ ಸುಮಾರಿಗೆ ಚಂದ್ರನು ಭೂಮಿಯ ಛತ್ರಿ ಒಳಗೆ ಪ್ರವೇಶಿಸಿದಾಗ, ಗ್ರಹಣದ ಭಾಗಶಃ ಹಂತವು ಆರಂಭವನ್ನು ಸೂಚಿಸುತ್ತದೆ. ಅದಾದ ನಂತರ ಚಂದ್ರನ ಮೇಲ್ಮೈ ಪ್ರಗತಿಶೀಲ ಕುಂದುತ್ತದೆ. ರಾತ್ರಿ 11:00ರ ಸುಮಾರಿಗೆ ಇಡೀ ಚಂದ್ರನ ಮೇಲ್ಮೈ ಭೂಮಿಯ ನೆರಳಿನ ಒಳಗೆ ಬಂಧಿಸಲ್ಪಟ್ಟು ಚಂದ್ರನ ಸಂಪೂರ್ಣತೆಯು ಗೋಚರಿಸಲ್ಪಡುತ್ತದೆ.

ಈ ಸಮಯದಲ್ಲಿ ಸಂಪೂರ್ಣವಾಗಿ ಚಂದ್ರಗ್ರಹಣವನ್ನು ವೀಕ್ಷಿಸಲು ಒಂದು ಜೋಡಿ ಬೈನಾಕುಲರ್ ಅಥವಾ ಒಂದು ಖಗೋಳ ದೂರದರ್ಶಕವಿದ್ದರೆ ಬಾಹ್ಯಾಕಾಶದ ಅಂದವನ್ನು ಸವಿಯಲು ಸೂಕ್ತವೆನಿಸುತ್ತದೆ.

ಸೂರ್ಯಗ್ರಹಣ ಸಂದರ್ಭದಲ್ಲಿ ವಿಶೇಷ ಮುನ್ನೆಚ್ಚರಿಕೆ ಕ್ರಮಗಳು ಅಥವಾ ಸೌರ ಫಿಲ್ಟರ್‌ಗಳನ್ನು ತೆಗೆದುಕೊಂಡು ಸುರಕ್ಷತೆಯಿಂದ ವೀಕ್ಷಿಸಬೇಕಾಗುತ್ತದೆ. ಆದರೆ ಚಂದ್ರಗ್ರಹಣ ವೀಕ್ಷಣೆಗೆ ಅಂತಹ ಸಮಸ್ಯೆಗಳು ಎದುರಾಗುವುದಿಲ್ಲ. ಜ್ಯೋತಿಷಿಗಳು, ಭವಿಷ್ಯ ಹೇಳುವವರು ಈ ಸನ್ನಿವೇಶವನ್ನು ಅಶುಭ ಮತ್ತು ಶುಭ ಎಂಬ ಸಂವೇದನಾಶೀಲ ವಿಷಯಗಳನ್ನು ಮುಂದಿಟ್ಟು ಜನರ ಮನಸ್ಸಿಗೆ ಘಾಸಿ ಉಂಟುಮಾಡುತ್ತಾರೆ ಹಾಗಾಗಿ ಜ್ಯೋತಿಷ್ಯದೊಳಗಿನ ನಡಿಗೆ ವಿಜ್ಞಾನಕ್ಕೆ ಸುರಕ್ಷಿತವಲ್ಲ. ಹವಾಮಾನ ವೈಪರೀತ್ಯ ಬಿಟ್ಟು ಬೇರೆ ಎಲ್ಲಾ ಸನ್ನಿವೇಶಗಳಲ್ಲಿಯೂ ನಾವು ಈ ಗ್ರಹಣವನ್ನು ದೇಶದ ಮತ್ತು ಇತರೆಡೆಗಳಲ್ಲಿ ಬಹುಪಾಲು ಜನರು ಸುಲಭವಾಗಿ ವೀಕ್ಷಿಸಬಹುದಾಗಿದೆ. ಈ ವೀಕ್ಷಣೆ ತಪ್ಪಿಸಿಕೊಂಡರೆ ಏಷ್ಯಾದಲ್ಲಿ ಗೋಚರಿಸುವ ಮುಂದಿನ ಇದೇ ರೀತಿಯ ಸಂಪೂರ್ಣ ಚಂದ್ರ ಗ್ರಹಣಕ್ಕೆ ಡಿಸೆಂಬರ್ 31, 2028ರವರೆಗೆ ಕಾಯಬೇಕಾಗುತ್ತದೆ. ಏನೇ ಆಗಲಿ ಪ್ರಕೃತಿಯ ಈ ಬಾಹ್ಯಾಕಾಶ ವಿಸ್ಮಯವನ್ನು ಕಣ್ತುಂಬಿಕೊಳ್ಳದಿದ್ದರೆ ಜನರಿಗೆ ನಷ್ಟವೇ ಸರಿ. ಹಾಗಾಗಿ ಪ್ರಕೃತಿಯ ಈ ಬೆಳಕು ನೆರಳಿನ ಆಟವನ್ನು ನಾವು ಮಕ್ಕಳೊಂದಿಗೆ ಸೇರಿ ವೀಕ್ಷಿಸೋಣ.

ವಿ.ವಿನೋದ್ ಕುಮಾರ್
ಸಂಪನ್ಮೂಲ ಶಿಕ್ಷಕರು, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಸಂಪನ್ಮೂಲ ಕೇಂದ್ರ, ಸುತ್ತೂರು

### ಧಾರ್ಮಿಕ ಹಿನ್ನೆಲೆ

## ಗ್ರಹಣದ ಶುಭ-ಅಶುಭ ಫಲಾಫಲ

ಗ್ರಹಣ ಮೂರು ವಿಧವಾದದ್ದು. ಒಂದು ಖಗ್ರಾಸ ಗ್ರಹಣ, ಎರಡು ಖಂಡಗ್ರಾಸ ಗ್ರಹಣ ಮತ್ತು ಮೂರನೆಯದು ಕಂಕಣಾಕಾರ ಗ್ರಹಣ. ಖಗ್ರಾಸ ಎಂದರೆ ಗ್ರಹ ಪೂರ್ಣತಮವಾಗಿ ಮುಚ್ಚಿ ಹೋಗುವುದು. ಖಂಡಗ್ರಾಸ ಎಂದರೆ ಭಾಗಶಃ ಮುಚ್ಚಿ ಹೋಗುವುದು, ಕಂಕಣಾಕಾರ ಎಂದರೆ ಗ್ರಹದ ಮಧ್ಯ ಭಾಗ ಮಾತ್ರ ಮುಚ್ಚಿಹೋಗಿ ಸುತ್ತಲೂ ಬಳೆಯಂತೆ ಕಾಣುವುದು. ಈ ಮೂರೂ ತರದ ಗ್ರಹಣಗಳು ಖಗೋಳ ವಿಜ್ಞಾನದ ವಿಸ್ಮಯಗಳು. ಈ ಬ್ರಹ್ಮಾಂಡವೆಲ್ಲವೂ ಗ್ರಹಗಳ ಅಧೀನದಲ್ಲೇ ಇರುವುದು ಸರ್ವ ವಿಧಿತ. ಈ ಜಗತ್ತಿನಲ್ಲಿ ವಾಸವಿರುವ ಸಮಸ್ತ ಸ್ಥಾವರ, ಜಂಗಮಾದಿ ವಸ್ತು, ಪ್ರಕೃತಿ, ನದಿ, ಪರ್ವತ, ಜ್ವಾಲಾಮುಖಿ ಅನಾದಿ ವಸ್ತುಗಳ ಮೇಲೆ, ಭೂಕಂಪ, ಉತ್ಪಾತ, ಪ್ರವಾಹ, ಕ್ಷಾಮ, ಡಾಮರಗಳು ಉಂಟಾಗಿರುವುದು ನಮ್ಮ ಅರಿವಿಗೆ ಬಂದಿದೆ.

ಈ ಗ್ರಹಣಗಳಲ್ಲಿಯೂ ಸವ್ಯ ಗ್ರಾಸ, ಅಪಸವ್ಯ ಗ್ರಾಸ ಎಂಬುದು ಎರಡು ವಿಧಾನ. ಸೂರ್ಯಗ್ರಹಣ ಸ್ಪರ್ಶವು ವಾಯವ್ಯ ದಿಕ್ಕಿನಲ್ಲಿಯೂ, ಚಂದ್ರಗ್ರಹಣ ಸ್ಪರ್ಶವು ಆಗ್ನೇಯ ದಿಕ್ಕಿನಲ್ಲಿಯೂ ಆದರೆ 'ಸವ್ಯ ಭ್ರಮಣ' ಹೆಸರಿನಿಂದ ಕರೆಯಲ್ಪಟ್ಟಿದೆ. ಇದು ದೇಶದಲ್ಲಿ ಸರ್ವತ್ರ ಸುವೃಷ್ಟಿ, ಸುಭಿಕ್ಷೆ, ಪ್ರಜಾಜನರ ವೃದ್ಧಿ, ಸುಖ ಸಂತೋಷಗಳು, ಪರೋಪಕಾರಗಳು, ದೇವತಾ- ಧರ್ಮ ಕಾರ್ಯಗಳಲ್ಲಿ ಶ್ರದ್ಧಾ ಬುದ್ಧಿಗಳು ಉಂಟಾಗುತ್ತವೆ.

**ಅಪಸವ್ಯ ಗ್ರಹಣ:** ಸೂರ್ಯಗ್ರಹಣದ ಸ್ಪರ್ಶವು ನೈರುತ್ಯ ದಿಕ್ಕಿನಲ್ಲಿಯೂ, ಚಂದ್ರಗ್ರಹಣ ಸ್ಪರ್ಶವು ಈಶಾನ್ಯ ದಿಕ್ಕಿನಲ್ಲಿ ಆದದ್ದಾದರೆ ಅದು "ಅಪಸವ್ಯ" ನಾಮಕ ಗ್ರಹಣವೆನಿಸುವುದು. ಈ ರೀತಿಯ ಗ್ರಹಣದಿಂದ ಆಳುವವರಿಗೂ, ಪ್ರಜೆಗಳಿಗೂ ಕಷ್ಟ- ನಷ್ಟಗಳೂ, ದುರ್ಭಿಕ್ಷ, ಚೋರರಿಂದ ಉಪದ್ರವಗಳು ಆಗುತ್ತವೆ. ಪ್ರಕೃತಿ ಪ್ರಕೋಪಗಳು, ಸಾಂಕ್ರಾಮಿಕ ರೋಗ ಭಯಗಳು ಉಂಟಾಗುತ್ತವೆ. ಹಾಗೂ ಆ ವರ್ಷ ಮಳೆ ಕಡಿಮೆ ಆಗುವುದು.

ತಾ.7.9.2025ರ ಭಾನುವಾರ ಸಂಭವಿಸುವ ಚಂದ್ರಗ್ರಹಣ ಭಾರತ ದೇಶಕ್ಕೆ ಕಾಣಿಸುವುದರಿಂದ ಗ್ರಹಣಾಚರಣೆ ಉಂಟು. ಹಾಗೆಯೇ 21.9.2025ರ ಭಾನುವಾರ ಸಂಭವಿಸುವ ಸೂರ್ಯಗ್ರಹಣ ಭಾರತದಲ್ಲಿ ಕಾಣಿಸುವುದಿಲ್ಲವಾದ್ದರಿಂದ ಗ್ರಹಣಾಚರಣೆ ಇರುವುದಿಲ್ಲ. ಆದರೆ ಒಂದೇ ಮಾಸದಲ್ಲಿ ಎರಡು ಗ್ರಹಣಗಳು ಸಂಭವಿಸುವುದು ಶುಭಪ್ರದವಲ್ಲ ಹಾಗೂ ಯಾವುದೇ ಗ್ರಹಣ ಫಲ ಆರು ಮಾಸಗಳು ಮಾತ್ರ ಇರುತ್ತದೆ.

**7.9.2025ರ ಚಂದ್ರಗ್ರಹಣ ಸ್ಪರ್ಶಕಾಲ ರಾತ್ರಿ 9.56, ಮೋಕ್ಷಕಾಲ ಮುಂಜಾನೆ 1.27. ಆದ್ಯಂತ ಪುಣ್ಯಕಾಲ 3 ಘಂಟೆ 31 ನಿಮಿಷ.**

**ಈ ಬಾರಿಯ ಗ್ರಹಣವು ಕುಂಭ ರಾಶಿಯಲ್ಲಿ ಘಟಿಸುವುದರಿಂದ ಶತಭಿಷಾ ಮತ್ತು ಪೂರ್ವಾಭಾದ್ರ ನಕ್ಷತ್ರದವರಿಗೂ, ಕುಂಭ, ಮೀನ ರಾಶಿಯವರಿಗೆ ಶುಭದಾಯಕವಲ್ಲ.**

### ಪರಿಹಾರ ಕ್ರಮ

ಗ್ರಹಣ ಸ್ಪರ್ಶವಾಗುವ ಮುನ್ನ ಸ್ನಾನ ಮಾಡಿ, ಗ್ರಹಣ ಸಮಯದಲ್ಲಿ ಇಷ್ಟ ದೇವತಾ ನಾಮ ಜಪ, ಧ್ಯಾನಗಳನ್ನು ಮಾಡಿಕೊಳ್ಳುವುದು. ಸಾಧ್ಯವಿರುವವರು ನದಿ ತೀರ, ಸಮುದ್ರ, ಸರೋವರಗಳಲ್ಲಿ ಆಚರಿಸಬಹುದು.

### ದ್ವಾದಶ ರಾಶಿಯವರಿಗೆ ಸಂಕ್ಷಿಪ್ತ ಗ್ರಹಣ ಫಲ

**ಮೇಷ:-** ಲಾಭ, ವೃದ್ಧಿ, ಅನುಕೂಲ ಪರಿಣಾಮಗಳು.
**ವೃಷಭ:-** ಶುಭದಾಯಕ, ಸುಖ, ವೃದ್ಧಿಕಾರಕ.
**ಮಿಥುನ:-** ಮಾನಾಪಮಾನ ಸಮಸ್ಯೆ ಉತ್ಪನ್ನವಾಗಬಹುದು.
**ಕಟಕ:-** ಗ್ರಹಣ ಅಷ್ಟಮ ಭಾವದಲ್ಲಿ ಆಗುತ್ತಿರುವ ಕಾರಣ ಆರೋಗ್ಯ ಹಾಗೂ ಆರ್ಥಿಕ ಸಮಸ್ಯೆ ಪ್ರತೀತವಾಗುವುದು.
**ಸಿಂಹ:-** ಬಾಳ ಸಂಗತಿಯ ಸ್ವಾಸ್ಥ್ಯದಲ್ಲಿ ಸಮಸ್ಯೆ.
**ಕನ್ಯಾ:-** ಈ ಚಂದ್ರಗ್ರಹಣ ಸುಖ ಸಂತೋಷದಾಯಕವಾಗಿದೆ.
**ತುಲಾ:-** ಚಿಂತೆ ವೃದ್ಧಿ, ಕಷ್ಟ ಫಲ.
**ವೃಶ್ಚಿಕ:-** ಈ ರಾಶಿಯವರಿಗೆ ಅಶುಭ ಫಲ, ಧನ ನಷ್ಟ
**ಧನುಸ್ಸು:-** ಶುಭ ಪರಿಣಾಮಗಳನ್ನು ನಿರೀಕ್ಷಿಸಬಹುದು.
**ಮಕರ:-** ವ್ಯಾಪಾರ, ಕೃಷಿಯಲ್ಲಿ ವೃದ್ಧಿ. ಬಂಡವಾಳ ಹೂಡಿಕೆಯಲ್ಲಿ ಎಚ್ಚರ.
**ಕುಂಭ:-** ಅನಾನುಕೂಲ ಹಾಗೂ ಕಷ್ಟದಾಯಕ ಪ್ರಸಂಗಗಳು.
**ಮೀನ:-** ಆದಾಯಕ್ಕಿಂತ ವ್ಯಯ ಜಾಸ್ತಿ ಆರ್ಥಿಕ ಹಾನಿ.

### ಗ್ರಹಣ ದೋಷ ನಿವಾರಣಾ ಮಂತ್ರ

ಸರ್ವೇಷಾಮೇವ ವರ್ಣಾನಾಮ್ ಸೂತಕ
ರಾಹು ದರ್ಶನೆ । ಸ್ನಾತ್ವಾ ಕರ್ಮಣಿ ಕುರ್ವಿತ್
ಶ್ರುತಮನ್ನಂ ವಿವರ್ಜಯೇತ್ ॥

ವಿ.ಕೇಶವಮೂರ್ತಿ
ಜ್ಯೋತಿಷ ವಿದ್ವಾಂಸ, ಮೈಸೂರು. 570026.

## ವಾರಭವಿಷ್ಯ

7.09.2025 ರಿಂದ 13.09.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಕುಜ-ಕನ್ಯಾ, ತುಲಾ, ಬುಧ-ಸಿಂಹ, ಗುರು-ಮಿಥುನ, ಶುಕ್ರ-ಕಟಕ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



### ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)
ಸಪ್ತಾಹದ ಆದಿಗೆ ನಿಮಗೆ ಸಂಬಂಧ ಇಲ್ಲದ ವಿಷಯಕ್ಕೆ ತಲೆಕೆಡಿಸಿಕೊಳ್ಳುವಿರಿ. ಭೂ ಸಂಬಂಧಿ ವಿಚಾರಗಳು ನ್ಯಾಯಾಲಯಕ್ಕೆ ಹೋಗುವುದು. ವಾರ ಮಧ್ಯೆ ಚಂದ್ರ ನಿಮ್ಮ ರಾಶಿ ಹಾಗೂ ಉಚ್ಚ ಸ್ಥಾನಕ್ಕೆ ಬಂದಾಗ ಶುಭ ಫಲಗಳನ್ನು ಹೊಂದುವಿರಿ. ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ಸವಿಮಾತಿನಿಂದ ಇತರರ ಮನ ಗೆಲ್ಲುವಿರಿ. ಅರಳೆ ಹಾಗೂ ಕ್ಷೀರಜನ್ಯ ವ್ಯಾಪಾರದಿಂದ ಹೆಚ್ಚಿನ ಧನಲಾಭ.
ಶ್ರೀ ಸುಬ್ರಮಣ್ಯ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1

### ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದಾರಂಭಕ್ಕೆ ಗೃಹ ಸಂಬಂಧಿ ವಿಚಾರದಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನಿವಾರಣೆ ಆಗುವುದು. ಕೃಷಿಕರಿಗೆ ತಮ್ಮ ನಿರೀಕ್ಷೆಗೂ ಮೀರಿ ಇಳುವರಿ ದೊರೆತು, ಧನಾಗಮವೂ ಆಗುವುದು. ಸಮೂಹ ಮಾಧ್ಯಮ ವ್ಯಕ್ತಿಗಳಿಗೆ ಸರ್ಕಾರದಿಂದ ಪುರಸ್ಕಾರ ದೊರೆಯಬಹುದು. ವಿವಾಹ ಯೋಗ್ಯರಿಗೆ ಕಂಕಣ ಬಲ ಒದಗಿ ಬರಲಿದೆ..
ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ-8

### ಮಿಥುನ (ಕ,ಕಿ,ಕು,ಘ,ಜ,ಛ,ಕೆ,ಕೊ,ಹ)
ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲು ಚಂದ್ರ ಗ್ರಹದ ಶುಭ ಸಂಚಾರ ಬೆಂಬಲವಾಗಿದೆ. ಹೆಂಗಳೆಯರ ಮನಸ್ಸನ್ನು ಗೆಲ್ಲುವಿರಿ. ಇದು ನಿಮ್ಮ ಮುಂದಿನ ಜೀವನಕ್ಕೆ ಸೋಪಾನವಾಗುವುದು. ವಾರ ಮಧ್ಯೆ ಮಿತ್ರರ ಸಮಾಗಮ, ಸ್ನೇಹ ಕೂಟಗಳು ನಡೆಯುವುದು. ವಿದ್ಯಾರ್ಥಿಗಳು ಉನ್ನತ ಶ್ರೇಣಿಯನ್ನು ಸಾಧಿಸುವರು. ಶ್ವಾಸ ಸಂಬಂಧಿ ತೊಂದರೆಯಿಂದ ವೈದ್ಯರ ದರ್ಶನ. ಬೆಳಗಿನ ವಾಯುವಿಹಾರಕ್ಕೆ ತೆರಳುವಾಗ ಚಿನ್ನದ ಸರ ತೆಗೆದಿಟ್ಟು ಹೋಗಿ.
ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-7

### ಕಟಕ (ಹೊ,ಹು,ಹೆ,ಡ,ಡಿ,ಡು)
ನಿಮ್ಮ ರಾಶ್ಯಾಧಿಪತಿ ಚಂದ್ರ ಮನೋ ಚಂಚಲತೆ ನೀಡುವನು. ಮಧುರ ಪಾನೀಯ, ಕ್ಷೀರಜನಿತ ವಸ್ತು ವ್ಯಾಪಾರ ಅಧಿಕ ಲಾಭ ತರುವುದು. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ದೈವಾನುಕೂಲವಿದೆ. ಅಷ್ಟ ರಾಹು ಇರುವ ಕಾರಣ ನಿಮಗೆ ಸಂಬಂಧಪಡದ ವಿಷಯದಲ್ಲಿ ತಲೆ ಹಾಕಿ ತೊಂದರೆಗೆ ಗುರಿಯಾಗುವಿರಿ. ನಿಮಗಾಗದವರು ನಿಮ್ಮ ವಿರುದ್ಧ ಅಭಿಚಾರ ನಡೆಸಬಹುದು.
ಶ್ರೀ ಶಕ್ತಿದೇವಿ ಆರಾಧನೆ. ಶುಭ ಸಂಖ್ಯೆ-4

### ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ನಿಮ್ಮ ಉತ್ತಮ ಆದರ್ಶಗಳಿಂದ ಸಮಾಜದಲ್ಲಿ ಮನ್ನಣೆ ಗಳಿಸುವಿರಿ. ಅಧಿಕಾರಿಗಳ ಅನುಗ್ರಹದಿಂದ ಆಸ್ತಿ ವಿಚಾರಗಳು ಅನುಕೂಲಕರವಾಗುವುದು. ಪ್ರಭುಗಳಿಂದ ಗೌರವ, ಸನ್ಮಾನಗಳು ನಡೆದೀತು. ಚಿನ್ನ-ಬೆಳ್ಳಿ ವ್ಯಾಪಾರ ಭರಾಟೆಯಿಂದ ಸಾಗುವುದು. ಮಠ-ಮಾನ್ಯಗಳ ಭೇಟಿಯಿಂದ ನಿಮ್ಮ ಅದೃಷ್ಟದಲ್ಲಿ ಬದಲಾವಣೆಯನ್ನು ಕಾಣುವಿರಿ. ಪಿತ್ತ ಪ್ರಕೋಪದಿಂದ ವೈದ್ಯರ ಭೇಟಿ ಅನಿವಾರ್ಯವಾಗುವುದು.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-3

### ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ವಾರದ ಆದಿಗೆ ಕಾರ್ಯ ಜಯ. ಶತ್ರುಗಳ ಮೇಲೆ ವಿಜಯ, ವ್ಯಾಪಾರ-ವ್ಯವಹಾರಗಳು ಚುರುಕಾಗಿ ನಡೆದು ಅಧಿಕ ಸಂಪಾದನೆ ಆಗುವುದು. ಮಾತೃಶ್ರೀಯವರ ಆಶೀರ್ವಾದ ಫಲವಾಗಿ ಶುಭ ಸಂದೇಶ ಬರುವುದು. ದುಷ್ಟ ಜನರ ಸಹವಾಸದಿಂದ ನಿಮಗೆ ಅಪಖ್ಯಾತಿ ಸುತ್ತಿಕೊಳ್ಳುವುದು. ದ್ವೇಷ ಸಾಧನೆಯಿಂದ ಪೊಲೀಸ್ ಠಾಣೆ, ಕೋರ್ಟು ಅಲೆಯುವ ಸಂದಿಗ್ಧ ಪರಿಸ್ಥಿತಿ ಬರುವುದು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-2

### ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಸಪ್ತಾಹದ ಆದಿಗೆ ಕೈಗೊಂಡ ಮಹತ್ವದ ಕೆಲಸದಲ್ಲಿ ಹಂತ ಹಂತವಾಗಿ ಮೇಲುಸ್ತರಕ್ಕೆ ಬರುವಿರಿ. ದುಬಾರಿ ನೂತನ ಉಡುಪು ಹಾಗೂ ಅಲಂಕಾರಿಕ ವೆಚ್ಚಗಳು ಹೆಚ್ಚಾಗುವುದು. ಮನೋರಂಜನೆಗೂ ಅಧಿಕ ಹಣ ವೆಚ್ಚವಾಗುವುದು. ವಯಸ್ಸಿಗೆ ಬಂದ ಮಕ್ಕಳ ಚಲನ-ವಲನಗಳ ಮೇಲೆ ನಿಗಾ ಇಡುವುದು ಒಳ್ಳೆಯದು. ವಾರಾಂತ್ಯಕ್ಕೆ ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಧನಲಾಭ.
ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-6

### ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಈ ವಾರದಲ್ಲಿ ಶುಭಾಶುಭ ಫಲಗಳು ಸಮನಾಗಿ ನಡೆಯುವುದು. ಹೊಗಳುಭಟ್ಟರಿಂದ ನಷ್ಟಕ್ಕೆ ಗುರಿಯಾಗುವಿರಿ. ನಿಮ್ಮ ಗುಪ್ತ ವಿಷಯಗಳು ಇತರರಿಗೆ ಅರಿವಿಗೆ ಬಂದು ನೀವು ಪೇಚಿಗೆ ಸಿಲುಕುವಿರಿ. ಸಂಕಟ ಬಂದಾಗ ವೆಂಕಟರಮಣ ಎಂಬಂತೆ ದೈವದ ಮೊರೆ ಹೋಗಿ. ರಾಹು-ಕೇತುಗಳು ಅಶುಭರಿದ್ದು ಸಟ್ಟಾ, ಜೂಜುಗಳಿಂದ ಭಾರಿ ನಷ್ಟವಾಗುವುದು.
ಶ್ರೀ ಗಣಪತಿ ಪೂಜೆ. ಶುಭ ಸಂಖ್ಯೆ-5

### ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಮನೆಯಲ್ಲಿ ಒಗ್ಗಟ್ಟು ಇದ್ದರೆ ಒಬ್ಬಟ್ಟು ತಿಂದಂತೆ ಗುರುಬಲವಿದೆ. ಬಹು ನಿರೀಕ್ಷಿತ ಕೆಲಸವು ಸಫಲತೆಯ ಹಾದಿಯಲ್ಲಿ ಸಾಗುತ್ತಲಿದೆ. ದವಸ-ಧಾನ್ಯ ವ್ಯಾಪಾರಗಳು ಹೊಸ ಚೇತರಿಕೆಯಲ್ಲಿ ನಡೆದು ಹೇರಳ ಧನಲಾಭ. ಶ್ರೀಮತಿಯ ಸಂತೋಷಪಡಿಸಲು ಶಾಪಿಂಗ್ ಜೋರು. ಸಂಶೋಧಕರ ನೂತನ ಅನ್ವೇಷಣೆಗೆ ರಾಷ್ಟ್ರ ಮನ್ನಣೆ. ವಾಯು ಹಾಗೂ ಶೀತ ಸಂಬಂಧಿತ ಆಹಾರ ಸೇವನೆಯಿಂದ ಗುರುತರವಾದ ಅನಾರೋಗ್ಯ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ-6

### ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)
ಏರಿದ ಏಣಿಯನ್ನು ಒದೆಯಬಾರದು. ಈಗ ನಿಮಗೆ ಗುರುವಿನ ಮಾರ್ಗದರ್ಶನದ ಅಗತ್ಯವಿದೆ. ಶ್ರೀಮಂತಿಕೆಯನ್ನು ಸಂಪಾದಿಸಿದ ಮೇಲೆ ಹಿಂದಿನ ದಿನಗಳನ್ನು ಮರೆಯಬಾರದು. ವಿವಿಧ ಮೂಲಗಳಿಂದ ಹಣ ದೊರೆತು ಸಂಕಷ್ಟಗಳು ದೂರವಾಗುವುದು. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ದೊರೆಯಲಿದೆ. ನಿಮ್ಮ ವಿರೋಧಿಗಳ ಕಾರಸ್ಥಾನ ವಿಫಲವಾಗುವುದು. ಅಸಮರ್ಪಕ ಆರೋಗ್ಯಕ್ಕೆ ನಿಮ್ಮ ರಾಶಿ ಸ್ಥಿತ ರಾಹು ಕಾರಣ.
ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5

### ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಈ ಲೋಕದ ನಾನಾ ರೀತಿಯ ಸಂಬಂಧಗಳನ್ನು ನಿಭಾಯಿಸುವ ಗುರು ನಿಮಗೆ ಅನುಕೂಲಕರನಾಗಿದ್ದಾನೆ. ವಿತ್ತಲಾಭ, ಸುಭೋಜನ, ಶಯನಾದಿ ಸುಖಗಳಿಂದ ವಾರಕ್ಕೆ ಸ್ವಾಗತ. ಅನಿರೀಕ್ಷಿತ ಪ್ರಯಾಣಗಳು ಉಂಟಾದರೂ ಧನಲಾಭವಾಗುವುದು. ಸಮ ಸಪ್ತಮದಲ್ಲಿ ರಾಹು-ಕೇತುಗಳಿದ್ದು ನಿಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿಯಬಲ್ಲದು. ವಾರಾಂತ್ಯಕ್ಕೆ ಸಂಸಾರ ಸಮೇತ ನಿಮ್ಮ ಮನೆ ದೇವರ ಸೇವೆ ಮಾಡಿ.
ಶ್ರೀ ರಾಹು-ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3

### ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಉಪ್ಪಿಟ್ಟವನನ್ನು ಮುಪ್ಪಿನ ತನಕ ನೆನೆ ಎಂಬಂತೆ ನಡೆದು ಶುಭ ಫಲವನ್ನು ಹೊಂದುವಿರಿ. ಸರ್ಕಾರಿ ಅಧಿಕಾರಿಗಳು ತಮ್ಮ ಸ್ಥಾನಮಾನಕ್ಕೆ ಚ್ಯುತಿ ಬರದಂತೆ ನಡೆದುಕೊಳ್ಳಿ, ಮನೆಯ ಹೊರಗೆ ಸಮಸ್ಯೆಗಳು ಎದುರಾದರೂ ತಾಳ್ಮೆ ಸಂಯಮದಿಂದ ಪರಿಹರಿಸಿಕೊಳ್ಳಿ, ಜನ್ಮ ಶನಿಯ ಕಾರಣ ಕಳ್ಳಕಾಕರಿಂದಲೂ ವಂಚಕರಿಂದಲೂ ಬಹುನಷ್ಟ ಉಂಟಾಗಬಹುದು. ನಿಮ್ಮ ಮನೆ ವಸ್ತು ಆಭರಣಗಳನ್ನು ರಕ್ಷಿಸಿಕೊಳ್ಳಿ.
ಶ್ರೀ ಶಿರಡಿಸಾಯಿ ಬಾಬಾ ಅರ್ಚನೆ. ಶುಭ ಸಂಖ್ಯೆ-4


### ಮಕ್ಕಳ ಚಿತ್ರಕಥೆ

## ರುಚಿಲೋಲ ನಾಲಿಗೆಗೆ ಗುಲಾಮರಾಗಬೇಡಿ...!


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಬ್ಬ ವ್ಯಾಪಾರಿಯು ತನ್ನ ಗ್ರಾಹಕನಿಗೆ ಜೇನುತುಪ್ಪವನ್ನು ಕೊಡುವಾಗ ಅಕಸ್ಮಾತ್ ಕೈ ಜಾರಿ ಜೇನುತುಪ್ಪದ ಪಾತ್ರೆ ಕೆಳಗೆ ಬಿದ್ದುಬಿಟ್ಟಿತು. ಅದರಲ್ಲಿದ್ದ ಬಹಳಷ್ಟು ಜೇನುತುಪ್ಪ ನೆಲದ ಮೇಲೆ ಚೆಲ್ಲಿ, ಹರಿಯತೊಡಗಿತು.




ವ್ಯಾಪಾರಿಯು ಎಷ್ಟು ಸಾಧ್ಯವೋ ಅಷ್ಟು ಜೇನುತುಪ್ಪವನ್ನು ಬಳಿದು ಮತ್ತೆ ಪಾತ್ರೆಗೆ ಹಾಕಿದನು. ಆದರೆ ಸ್ವಲ್ಪ ಭಾಗವನ್ನ ಬಳಿದುಕೊಳ್ಳಲಾಗಲಿಲ್ಲ. ಹಾರಿ ಬಂದ ಜೇನುನೊಣಗಳು ಅದರ ಮೇಲೆ ಕುಳಿತು ಹೊಟ್ಟೆ ಬಿರಿಯುವವರೆಗೂ ಹೀರಿದವು.



ಹೊಟ್ಟೆ ತುಂಬಿದ ಮೇಲೆ ಜೇನುನೊಣಗಳು ಅಲ್ಲಿಂದ ಮೇಲೆ ಹಾರಲು ಮುಂದಾದವು. ಆದರೆ ಅವುಗಳ ರೆಕ್ಕೆಗೆ ಜೇನುತುಪ್ಪ ಅಂಟಿಕೊಂಡಿತ್ತು. ಎಷ್ಟೇ ಪ್ರಯತ್ನಿಸಿದರೂ ರೆಕ್ಕೆಗಳು ಅಷ್ಟೇ ಬಿಗಿಯಾಗಿ ಅಂಟಿಕೊಳ್ಳುತ್ತಿದ್ದವು.



ಹಾಗಾಗಿ ಬಹಳಷ್ಟು ಜೇನುನೊಣಗಳು ಜೇನಿನ ತುಪ್ಪದಲ್ಲೇ ಬಿದ್ದು ಹೊರಳಾಡಿ ಸತ್ತು ಹೋದವು. ಇನ್ನು ಕೆಲವು ರೆಕ್ಕೆ ಬಿಡಿಸಿಕೊಳ್ಳಲು ಚಡಪಡಿಸುತ್ತಿದ್ದವು.



ಇವುಗಳ ಜೊತೆಗೆ ಹೊಸ ಜೇನುನೊಣಗಳು ಜೇನಿನ ಆಸೆಯಿಂದ ಅಲ್ಲಿಗೆ ದಂಡು ದಂಡೇ ಬರುತ್ತಿದ್ದವು. ಅಲ್ಲಿ ಸತ್ತಿರುವ ಮತ್ತು ಚಡಪಡಿಸುತ್ತಿರುವ ಜೇನು ನೊಣಗಳನ್ನು ನೋಡಿಯೂ ಜೇನು ಸವಿಯುವ ಆಸೆಯನ್ನು ಬಿಡಲಾರದಾಗಿದ್ದವು.



ಜೇನುನೊಣಗಳ ದುರ್ಗತಿಯನ್ನೂ, ಮೂರ್ಖತನವನ್ನೂ ನೋಡಿ ವ್ಯಾಪಾರಿ ಹೇಳಿದ. 'ಯಾರು ನಾಲಿಗೆಯ ರುಚಿಗೆ ಗುಲಾಮರಾಗಿರುವರೋ ಅವರು ಈ ಜೇನುನೊಣಗಳಂತೆ ವಿಪತ್ತಿಗೆ ಒಳಗಾಗುತ್ತಾರೆ.... ಆರೋಗ್ಯ ಹಾಳು ಮಾಡಿಕೊಳ್ಳುತ್ತಾರೆ...'

# ಶಿಕ್ಷಕರ ಮಾರ್ಗದರ್ಶನವಿಲ್ಲದೆ ಅಭಿವೃದ್ಧಿ ಅಸಾಧ್ಯ

## ಶಿಕ್ಷಕರ ದಿನಾಚರಣೆಯಲ್ಲಿ ಸಂಸದ ಸುನೀಲ್ ಬೋಸ್ ಅಭಿಮತ



ಶಿಕ್ಷಕ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್ ನಿವೃತ್ತರಾದ ಶಿಕ್ಷಕರನ್ನು ಸನ್ಮಾನಿಸಿದರು.

ತಿ.ನರಸೀಪುರ, ಸೆ.6– ಮಕ್ಕಳನ್ನು ದೇಶದ ಸದೃಢ ಪ್ರಜೆಯನ್ನಾಗಿಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಯಾವುದೇ ಕ್ಷೇತ್ರದಲ್ಲಿ ಶಿಕ್ಷಕರ ಮಾರ್ಗದರ್ಶನವಿಲ್ಲದೆ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವೆಂದು ಸಂಸದ ಸುನೀಲ್ ಬೋಸ್ ಅಭಿಪ್ರಾಯ ಪಟ್ಟರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ತಾಲೂಕು ಶಿಕ್ಷಕರ ದಿನಾಚರಣಾ ಸಮಿತಿ ಹಾಗೂ ಪ್ರಾಥಮಿಕ, ಪ್ರೌಢಶಾಲಾ ಮತ್ತು ಎಲ್ಲಾ ವೃಂದದ ಸಂಘಗಳ ವತಿಯಿಂದ ತಿರುಮಕೂಡಲಿನ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭಾರತದ ನೆಲದಲ್ಲಿ ಗುರು ಪರಂಪರೆಯು ಪುರಾತನ ಕಾಲದಿಂದ ನಡೆದುಕೊಂಡು ಬಂದಿದೆ. ಅಂತಹ ಗುರು ಪರಂಪರೆಯು ದೇಶದ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಹೊರಹೊಮ್ಮಿಸುವಲ್ಲಿ ಸಹಕಾರಿಯಾಗಿದೆ, ಶಿಕ್ಷಕರಾದವರು ನಾವು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರೆ,ಮಕ್ಕಳೇ ನಮ್ಮನ್ನು ಗೌರವಿಸುತ್ತಾರೆ. ಉತ್ತಮ ಬೋಧನೆ ನೀಡಿದರೆ ಮಕ್ಕಳ ಭವಿಷ್ಯ ಭದ್ರವಾಗುತ್ತದೆ ಎಂದರು. ಶಿಕ್ಷಕರು ಎಂದರೆ ಹೊಸ ಪೀಳಿಗೆಯ ಬದುಕು ಬೆಳಗುವ ಜ್ಯೋತಿ ಸ್ವರೂಪಿಯಾಗಿದ್ದಾರೆ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಭಾರತದ ಪರಂಪರೆಯನ್ನು ಪಾಶ್ಚಿಮಾತ್ಯ ದೇಶಗಳಿಗೆ ಬೋಧಿಸಿದ ಮಹಾನ್ ಪಂಡಿತರಾಗಿದ್ದರು. ವಿದ್ಯಾರ್ಥಿಗಳನ್ನು ಜ್ಞಾನವೆಂಬ ಬೆಳಕಿನತ್ತ ಮುನ್ನಡೆಸುವ ಕಾರ್ಯದಲ್ಲಿ ಪ್ರಮುಖವಾಗಿ ಪ್ರಾಥಮಿಕ ಶಿಕ್ಷಕರು ಹೆಚ್ಚಿನ ಶ್ರಮ ವಹಿಸುತ್ತಿದ್ದಾರೆ ಎಂದು ಹೇಳಿದರು.

ಆಧುನೀಕರಣದ ಪ್ರಭಾವದಿಂದಾಗಿ ಜನಪದ, ವಚನ, ಕಲೆ, ಸಾಹಿತ್ಯ, ದಾಸರ ಕೀರ್ತನೆಗಳು ನಶಿಸುವ ಹಂತ ತಲುಪಿವೆ. ದೇಶದ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸಬೇಕಾದ ಜವಾಬ್ದಾರಿ ಶಿಕ್ಷಕರ ಮೇಲಿದೆ. ಶಿಕ್ಷಕರು ಮಕ್ಕಳಿಗೆ ಕೇವಲ ಪಠ್ಯದಲ್ಲಿರುವುದನ್ನು ಬೋಧನೆ ಮಾಡಿದರೆ ಸಾಲದು. ಜೀವನದಲ್ಲಿ ಸೋಲುಕಂಡಾಗ ಅಥವಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ವಿಶ್ವಾಸ ಕಳೆದುಕೊಂಡಾಗ ಆತ್ಮವಿಶ್ವಾಸದ ಜತೆಗೆ ಬದುಕಿನ ಮಹತ್ವ ತಿಳಿಸಬೇಕು. ಆಗ ಶಿಕ್ಷಕ ವೃತ್ತಿ ಮಹತ್ವ ಪಡೆಯಲಿದೆ ಎಂದು ಹೇಳಿದರು.

ಶಿಕ್ಷಕರು ಕೇವಲ ಮಕ್ಕಳಿಗೆ ವಿಷಯವನ್ನು ತುಂಬುವ ಯಂತ್ರ ಆಗದೇ, ಮಕ್ಕಳಿಗೆ ಉತ್ಸಾಹ ಹಾಗೂ ವಿಷಯದ ಕುರಿತು ಕುತೂಹಲ ಮೂಡುವ ಹಾಗೆ ಪರಿಣಾಮಕಾರಿಯಾಗಿ ಬೋಧನೆ ಮಾಡಬೇಕು. ಪ್ರತಿಭಾವಂತ ಶಿಕ್ಷಕರಿದ್ದರೂ ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಕೌಶಲ್ಯ ಬೆಳೆಸಿಕೊಳ್ಳಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯ ಬೆಳೆಸುವ ಹಾಗೆ ಎಲ್ಲರೂ ಚಿಂತನೆ ಮಾಡಬೇಕು. ಶಿಕ್ಷಣದ ಗುಣಮಟ್ಟ ಕುಸಿಯದಂತೆ ಬೋಧನೆ ನೀಡಬೇಕು ಎಂದರು.

ಶಿಕ್ಷಕ ಸಮುದಾಯದಲ್ಲೂ ಹಲವಾರು ಸಮಸ್ಯೆಗಳಿವೆ ಅವುಗಳನ್ನೆಲ್ಲಾ ಬದಿಗೊತ್ತಿ ಯಾವುದನ್ನೂ ತೋರ್ಪಡಿಸಿಕೊಳ್ಳದೆ ಮಕ್ಕಳ ಭವಿಷ್ಯ ರೂಪಿಸುವೆಡೆಗೆ ಆಲೋಚಿಸುವ ಶಿಕ್ಷಕರ ಸೇವೆ ಶ್ಲಾಘನೀಯವಾಗಿದೆ. ನ್ಯಾಯಾಧೀಶರು ನ್ಯಾಯಕ್ಕಾಗಿ, ವೈದ್ಯರು ರೋಗಿಗಳ ಪ್ರಾಣ ಉಳಿಸಲು ಹೋರಾಟ ನಡೆಸಿದರೆ, ಶಿಕ್ಷಕರು ರಾಷ್ಟ್ರಕ್ಕೆ ಉತ್ತಮ ಸಮಾಜ ರೂಪಿಸುವ ಡೆಗೆ ಗಮನ ಹರಿಸುತ್ತಾರೆ ಹಾಗಾಗಿಯೇ ವ್ಯಕ್ತಿಯ ಹಿಂದೆ ಗುರು ಇರಬೇಕು, ಮುಂದೆ ಗುರಿ ಇರಬೇಕು ಎಂದು ಹೇಳಲಾಗುತ್ತದೆ. ಹಾಗಾದಾಗ ಮಾತ್ರವೇ ಯಾವುದೇ ಗುರಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸೋಸಲೆ ಗಂಗಾಧರ್ ಪ್ರಧಾನ ಭಾಷಣ ಮಾಡಿದರು, ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ, ಸರ್ಕಾರಿ ನೌಕರ ಸಂಘದ ತಾಲೂಕು ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಕುಪ್ಯ ಪುಟ್ಟ ಸ್ವಾಮಿ, ಬಿಆರ್‌ಸಿ ನಾಗೇಶ್, ದೈಹಿಕ ಶಿಕ್ಷಣ ಪರಿವೀಕ್ಷಕ ಮರಿಸ್ವಾಮಿ, ಸೋಸಲೆ ನಾಗೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುಬ್ಬಣ್ಣ,ಪತ್ರಾಂಕಿತ ವ್ಯವಸ್ಥಾಪಕ ಎಚ್. ಗೋವಿಂದರಾಜು, ತಾ.ಪಂ. ಮಾಜಿ ಸದಸ್ಯರುಗಳಾದ ಕುಕ್ಕೂರು ಗಣೇಶ್, ನರಸಿಂಹ ಮಾದ ನಾಯಕ, ರಾಮಲಿಂಗಯ್ಯ ಸೇರಿದಂತೆ ಮತ್ತಿತರರಿದ್ದರು.

# ಮೂಗೂರಲ್ಲಿ ಶ್ರೀ ಶನೇಶ್ವರ ಸ್ವಾಮಿಯ ವೈಭವದ ಹೂವಿನ ಪಲ್ಲಕ್ಕಿ ಉತ್ಸವ



ಶ್ರೀ ಶನೇಶ್ವರಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವ

**ಮೂಗೂರು:** ಗ್ರಾಮದ ಶ್ರೀ ಶನೈಶ್ಚರ ಸ್ವಾಮಿಯವರ 69ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ಶನೇಶ್ವರ ಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವವು ಶನಿವಾರ ಸಂಜೆ ಮೂಗೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು.

ಶನಿವಾರ ಬೆಳಿಗ್ಗೆ 8.30ಕ್ಕೆ ಗ್ರಾಮದ ಶ್ರೀ ಶನೈಶ್ಚರ ಸ್ವಾಮಿಯವರ ದೇವಾಲಯದಿಂದ ಮಧ್ಯದ ಬೀದಿಯವರೆಗೆ ಕಾಕ ವಾಹನೋತ್ಸವ ನಡೆಯಿತು. ಪ್ರತಿ ವರ್ಷದಂತೆ ಗ್ರಾಮದ ಪ್ರಮುಖ ಬೀದಿಗಳು ತಳಿರು ತೋರಣ ಹಾಗೂ ವಿಶೇಷ ವಿದ್ಯುತ್ ದೀಪಾಲಂಕಾರಗಳಿಂದ ಶೃಂಗಾರಗೊಂಡಿದ್ದವು. ಬೆಳಗ್ಗೆಯಿಂದ ಸಂಜೆವರೆಗೂ ಗ್ರಾಮಸ್ಥರು ದೇವಾಲಯದ ಬಳಿ ತೆರಳಿ ಶ್ರೀ ಶನೈಶ್ಚರ ಸ್ವಾಮಿಯವರಿಗೆ ಭಕ್ತಿ ಶ್ರದ್ಧೆಯಿಂದ ಪೂಜೆ ಸಲ್ಲಿಸಿ ದರ್ಶನ ಪಡೆದರು. ಸಂಜೆ 6.30ಕ್ಕೆ ವಾದ್ಯ ಗೋಷ್ಠಿ, ಪೂಜಾ ಕುಣಿತದೊಂದಿಗೆ ಹೂವಿನ ಪಲ್ಲಕ್ಕಿ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮೆರವಣಿಗೆ ನಡೆಯಿತು. ಉತ್ಸವದ ನಿಮಿತ್ತ ಅಲ್ಲಲ್ಲಿ ಭಕ್ತರು ಅನ್ನಸಂತರ್ಪಣೆ ಮಾಡಿದರು.

# ವಿದ್ಯಾರ್ಥಿಗಳನ್ನು ಶಿಕ್ಷಣದೊಂದಿಗೆ ಉತ್ತಮ ಪ್ರಜೆಯಾಗಿ ರೂಪಿಸುವ ಜವಾಬ್ದಾರಿ ಶಿಕಕರಿಗಿದೆ: ಶಾಸಕ ದರ್ಶನ್



ಕಾರ್ಯಕ್ರಮದಲ್ಲಿ ವಯೋನಿವೃತ್ತಿಗೊಂಡ ಶಾಲಾ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

**ನಂಜನಗೂಡು:** ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಉತ್ತಮ ಪ್ರಜೆಯಾಗಿ ರೂಪಿಸುವ ಮೂಲಕ ದೇಶವನ್ನು ಸದೃಢವಾಗಿ ಕಟ್ಟುವಂತಹ ಮಹತ್ತರ ಜವಾಬ್ದಾರಿ ಶಿಕ್ಷಕರಿಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಂಜನಗೂಡು ಶಿಕ್ಷಣ ಇಲಾಖೆ ವತಿಯಿಂದ ಏರ್ಪಡಿಸಲಾಗಿದ್ದ ಶಿಕ್ಷಕರ ದಿನಾಚರಣೆ, ಗುರುವಂದನೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ಕೇವಲ ಪಾಠ ಬೋಧಿಸುವವರಲ್ಲ, ನಮ್ಮೆಲ್ಲರಿಗೂ ಶಿಸ್ತು ಮತ್ತು ಜೀವನ ಮೌಲ್ಯಗಳನ್ನು ಬೆಳೆಸಿ ಉತ್ತಮ ಸಮಾಜ ಕಟ್ಟಲು ಶ್ರೇಷ್ಠ ಮಾನವರನ್ನು ರೂಪಿಸುವ ಶಿಲ್ಪಿಗಳಾಗಿದ್ದಾರೆ. ಮನುಷ್ಯನಿಗೆ ಗುರಿ ಎಷ್ಟು ಮುಖ್ಯವೋ ಆ ಗುರಿಯನ್ನು ತಲುಪಲು ಗುರುವಿನ ಮಾರ್ಗದರ್ಶನವೂ ಕೂಡ ಅಷ್ಟೇ ಮುಖ್ಯವಾಗುತ್ತದೆ ಎಂದರು.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮಾತನಾಡಿ, 2006 ನಂತರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ, ಇದರಿಂದಾಗಿ ರಾಜ್ಯದಲ್ಲಿ ಸುಮಾರು 1.50 ಲಕ್ಷ ಶಿಕ್ಷಕರ ಕೊರತೆಯಿದೆ. ರಾಜ್ಯ ಸರ್ಕಾರ ಅತಿಥಿ ಶಿಕ್ಷಕರನ್ನು ನೇಮಕಾತಿಗೊಳಿಸಿ ಅವರಿಗೆ ಕಡಿಮೆ ಸಂಬಳ ನೀಡಿ ದುಡಿಸಿಕೊಳ್ಳುತ್ತಿದ್ದಾರೆ, ಕೆಲ ಅತಿಥಿ ಶಿಕ್ಷಕರ, ಅತಿಥಿ ಉಪನ್ಯಾಸಕರ ವಯೋಮಿತಿ ಕೂಡ ಮೀರಿದೆ. ಜೊತೆಗೆ ಹಲವಾರು ವರ್ಷಗಳಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರಿಗೆ ಬಡ್ತಿ ನೀಡದೆ ಶಿಕ್ಷಕರನ್ನು ಕಡೆಗಣಿಸಲಾಗುತ್ತಿದೆ, ಅವರಿಗೆ ನ್ಯಾಯ ಒದಗಿಸಲು ಸರ್ಕಾರ [illegible] ಪ್ರಕ್ರಿಯೆಯನ್ನು ನಡೆಸಬೇಕು ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮ ರತ್ನಾಕರ ಮಾತನಾಡಿ, [illegible] ಶಿಕ್ಷಕರಿಗೆ ಬೋಧನೆಯ ಜೊತೆಗೆ ಬೋಧಕೇತರ ಕೆಲಸಗಳನ್ನು ವಹಿಸುತ್ತಿರುವುದರಿಂದ ಶಿಕ್ಷ ವೃತ್ತಿಯೂ ಒತ್ತಡ ಮಯವಾಗಿದೆ, ಆದ್ದರಿಂದ ಶಿಕ್ಷಕರನ್ನು ಬೋಧನೆಗೆ ಮಾತ್ರ ಸೀಮಿತಗೊಳಿಸುವಂತೆ ಶಾಸಕರು ಸದನದಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯಬೇಕು ಎಂದು ಒತ್ತಾಯಿಸಿದರು.

ಮುಖ್ಯ ಭಾಷಣಕಾರರಾಗಿದ್ದ ಎಸ್.ಎಂ. ಸಿದ್ದಪ್ಪಸ್ವಾಮಿ ಮಾತನಾಡಿ, ಶಿಕ್ಷಣದಿಂದ ಮಾತ್ರ ಜಗತ್ತನ್ನು ಪರಿವರ್ತಿಸಲು ಸಾಧ್ಯ, ಮಾನವೀಯ ನೆಲೆಗಳನ್ನು ಕಲಿಸುವುದೇ ಶಿಕ್ಷಣ, ಮಾನವೀಯ ಮೌಲ್ಯವಿಲ್ಲದ ಎಷ್ಟೇ ಪದವಿ ಗಳಿದ್ದರೂ ಕೂಡ ಅದು ವ್ಯರ್ಥ ಎಂದರು.

ಸಮಾರಂಭದಲ್ಲಿ ವಯೋನಿವೃತ್ತಿಗೊಂಡ ಶಾಲಾ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಉತ್ತಮ ಸಾಧನೆಗೈದ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಡಾ.ದೀಪು, ಶಿಕ್ಷಕರಾದ ಎಚ್.ಸಿ.ಸ್ವಾಮೇಶ್, ಮುದ್ದು ಮಾದೇಗೌಡ, ಎಂ.ಎ.ರಂಗನಾಥನ್, ಸತೀಶ್ ದಳವಾಯಿ, ಹೆಚ್‌ಎಸ್. ಮಹೇಶ್, ಕಾರಯ್ಯ, ಸುನಂದ, ಎನ್.ಎಸ್.ರಮೇಶ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

### ನದಿ ಫಾಸಲೆಯ ಜಾಗ, ಸ್ಮಶಾನ ಒತ್ತುವರಿ ಖಂಡಿಸಿ

# ಚಾಮಲಾಪುರ ಹುಂಡಿ ನಿವಾಸಿಗಳ ಪ್ರತಿಭಟನೆ



**ನಂಜನಗೂಡು:** ಖಾಸಗಿಯವರು ನದಿ ಫಾಸಲೆಯ ಜಾಗ ಹಾಗೂ ಗ್ರಾಮಸ್ಥರು ಬಳಸುತ್ತಿದ್ದ ಸ್ಮಶಾನಕ್ಕೆ ಸೇರಿದ ಭೂಮಿಯನ್ನು ಒತ್ತುವರಿ ಮಾಡಿಕೊಂಡು ರೆಸಾರ್ಟ್ ನಿರ್ಮಾಣ ಮಾಡಲು ತಯಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಚಾಮಲಾಪುರದ ಹುಂಡಿ ಬಡಾವಣೆಯ ನಿವಾಸಿಗಳು ನಗರದ ದೇವರಾಜ ಅರಸು ಸೇತುವೆ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

ಚಾಮಲಾಪುರ ಹುಂಡಿ ಸ್ಮಶಾನದ ಬಳಿ ಜಮಾವಣೆಗೊಂಡ ಗ್ರಾಮಸ್ಥರು ಸ್ಮಶಾನ ಒತ್ತುವರಿ ತೆರವು ಮಾಡದಿದ್ದರೆ ತಾಲೂಕು ಕಚೇರಿ ಮುಂಭಾಗವೇ ಅಂತ್ಯಕ್ರಿಯೆ ನಡೆಯಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಚಾಮಲಾಪುರದ ಹುಂಡಿ ಗ್ರಾಮದ ಮುಖಂಡ ಚಂದ್ರಶೇಖರ್, ಹಾಗೂ ಶಂಕರಪ್ಪ ಮಾತನಾಡಿ ಗ್ರಾಮದ ಸ್ಮಶಾನಕ್ಕೆ ಸೇರಿದ ಜಾಗ ಹಾಗೂ ನದಿ ಪಾತ್ರವನ್ನು ಅಕ್ರಮವಾಗಿ ರಾತ್ರೋ ರಾತ್ರಿ ಮಣ್ಣು ತುಂಬಿ ಹದವಾಡಿಕೊಳ್ಳುತ್ತಿದ್ದಾರೆ, ಈ ಬಗ್ಗೆ ತಹಸೀಲ್ದಾರ್ ಅವರಿಗೆ 2 ತಿಂಗಳ ಹಿಂದೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಕಪಿಲಾ ನದಿ ಒಡಲಿಗೆ ಮಣ್ಣು ತುಂಬುವ ಕೆಲಸ ಭರದಿಂದಲೇ ಸಾಗುತ್ತಿದೆ, ತಾಲ್ಲೂಕು ಆಡಳಿತ ಖಾಸಗಿ ವ್ಯಕ್ತಿಗಳ ವಿರುದ್ಧ ಕ್ರಮಕೈಗೊಂಡು ಒತ್ತುವರಿ ತೆರವು ಮಾಡಿಸದಿದ್ದಲ್ಲಿ ಇನ್ನು ಮುಂದೆ ತಾಲೂಕು ಕಚೇರಿಯ ಆವರಣದಲ್ಲಿ ಶವಗಳ ಅಂತ್ಯಕ್ರಿಯೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸ್ಥಳಕ್ಕೆ ತಹಸೀಲ್ದಾರ್ ಬಂದು ಸಮಸ್ಯೆ ಬಗೆಹರಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು, ಪ್ರತಿಭಟನಾಕಾರರನ್ನು ಮನವೊಲಿಸಿದ ರಾಜಸ್ವ ನಿರೀಕ್ಷಕ ಹರೀಶ್, ನಾಳೆ ತಹಸೀಲ್ದಾರ್ ನೇತೃತ್ವದಲ್ಲಿ ಅಳತೆ ನಡೆಸಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ನಗರ ಠಾಣೆಯ ಪೊಲೀಸರು ಅನಧಿಕೃತವಾಗಿ ಮಣ್ಣು ಸಾಗಾಣಿಕೆ ಮಾಡುತ್ತಿದ್ದ ಮೂರು ಲಾರಿ ಸೇರಿದಂತೆ ಒಂದು ಜೆಸಿಬಿ ವಶಕ್ಕೆ ಪಡೆದಿದ್ದಾರೆ.

# ಮನೆಯವರು ಆಸ್ಪತ್ರೆಗೆ ಹೋಗಿದ್ದಾಗ ಬೀಗ ಮುರಿದು ನಗ ನಾಣ್ಯ ಕಳವು

ಹುಣಸೂರು, ಸೆ.6– ಮನೆ ಮಂದಿ ಆಸ್ಪತ್ರೆಗೆ ಹೋಗಿದ್ದ ಸಂದರ್ಭದಲ್ಲಿ ಮನೆ ಬೀಗ ಒಡೆದು ಬೀರುವಿನಲ್ಲಿದ್ದ 2 ಲಕ್ಷ ನಗದು ಸೇರಿದಂತೆ ಬೆಳ್ಳಿ ಪದಾರ್ಥ, ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ನಗರದ ಮಂಜುನಾಥ ಬಡಾವಣೆಯಲ್ಲಿ ನಡೆದಿದೆ.

ಮಂಜುನಾಥ ಬಡಾವಣೆಯ ರವಿಕುಮಾರ್ ಮನೆಯಲ್ಲಿ ಕಳ್ಳತನವಾಗಿದ್ದು, ತಮ್ಮ ಪತ್ನಿಯನ್ನು ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಿಸಿದ್ದರು, ಮನೆಯ ಮುಂಬಾಗಿಲ ಬೀಗ ಒಡೆದು ಒಳ ನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 2 ಕೆ.ಜಿ. ಬೆಳ್ಳಿ ಪದಾರ್ಥ, 19 ಗ್ರಾಂ. ಚಿನ್ನಾಭರಣ, 2 ಲಕ್ಷ ರೂ. ನಗದು ಕಳ್ಳತನ ಮಾಡಿ ಪರಾರಿಯಾಗಿದ್ದಾರೆ. ಕಳ್ಳತನ ಮಾಡಿರುವ ದೃಶ್ಯ ಸಿ.ಸಿ.ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಬ್‌ಇನ್ಸ್‌ಪೆಕ್ಟರ್ ನಾಗಯ್ಯ ಭೇಟಿ ನೀಡಿ ಪರಿಶೀಲಿದರು. ಮನೆ ಬಿಟ್ಟು ಬೇರೆ ಊರಿಗೆ ಹೋಗುವ ವೇಳೆ ಬೀಟ್ ಪೊಲೀಸರಿಗೆ ಮಾಹಿತಿ ನೀಡುವಂತೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಮನವಿ ಮಾಡಿದ್ದಾರೆ.

# ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ




**ಹೆಚ್.ಡಿ.ಕೋಟೆ:** ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಅಕ್ರಮ ಸಕ್ರಮ ಸದಸ್ಯ ಕೆಂಡಗಂಡೆಗೌಡ ಒತ್ತಾಯಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಸಂಘದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಅತ್ಯಧಿಕ ಮತಗಳ ಮೂಲಕ ಸತತ ಎರಡನೇ ಬಾರಿಗೆ ಕಿರಿಯ ವಯಸ್ಸಿನಲ್ಲಿ ವಿಧಾನಸಭೆ ಪ್ರವೇಶಿಸುವ ಮೂಲಕ ಜನಸೇವೆ ಮಾಡುತ್ತಿದ್ದಾರೆ. ಜೊತೆಗೆ ಅವರು ತಾಲೂಕಿನ ಅಭಿವೃದ್ಧಿಗಾಗಿ ಪ್ರತಿಯೊಂದು ಹಳ್ಳಿ, ಕಾಡಂಚಿನ ಗ್ರಾಮಗಳ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳನ್ನು ವಿಧಾನಸಭೆ ಕಲಾಪಗಳಲ್ಲಿ ಚರ್ಚಿಸಿ, ಸರ್ಕಾರದ ಗಮನಕ್ಕೆ ತಂದು ಸರ್ಕಾರದಿಂದ ಹೆಚ್ಚಿನ ಅನುದಾನ ತರುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಕೊಡಗು, ಜಿಲ್ಲೆಗಳು ಸೇರಿದಂತೆ ಆಯ್ಕೆಗೊಂಡಿರುವ ಏಕೈಕ ಪರಿಶಿಷ್ಟ ಪಂಗಡ ಶಾಸಕರಾಗಿರುವ ಅನಿಲ್ ಚಿಕ್ಕಮಾದುರನ್ನು ಪರಿಗಣಿಸಿ ಸಚಿವ ಸ್ಥಾನ ನೀಡಬೇಕು ಎಂದರು.

ಸ್ವಾತಂತ್ರ್ಯನಂತರ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಈವರೆಗೆ ಕೇವಲ ಒಂದು ಬಾರಿ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಹೆಚ್.ಡಿ.ಕೋಟೆ ತಾಲೂಕಿಗೆ ಈ ಬಾರಿ ಸಚಿವ ಸ್ಥಾನ ನೀಡಬೇಕೆಂದು ತಾಲೂಕಿನ ಮಹಾಜನತೆಯ ಅಭಿಪ್ರಾಯವಾಗಿದೆ. ರಾಜ್ಯದ ನಾಯಕ ಸಮಾಜದ ಹಿರಿಯ ಪ್ರಭಾವಿ ಮುಖಂಡರಾಗಿದ್ದ ಮಾಜಿ ಶಾಸಕರಾದ ದಿ.ಚಿಕ್ಕಮಾದು ಅವರ ಪುತ್ರರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ ಶಿಷ್ಯ ಅನಿಲ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ಬಾಲಯ್ಯ, ತಾಯಮ್ಮ ಸೋಮೇಗೌಡ, ಹನುಮಂತ ಹಾಜರಿದ್ದರು.

# ಸಮಾಜ ಸೇವೆಯಿಂದ ಸಮಾಧಾನ ದೊರಕುತ್ತದೆ

## ಗೌರವ ಡಾಕ್ಟರೇಟ್ ಪುರಸ್ಕೃತ ಮರಯ್ಯ, ಮನ್ಸೂರ್ ಅಲಿಗೆ ಸನ್ಮಾನ



ಗೌರವ ಡಾಕ್ಟರೇಟ್ ಪುರಸ್ಕೃತ ಮರಯ್ಯ, ಮನ್ಸೂರ್ ಅಲಿಗೆ ಸನ್ಮಾನ

ತಿ.ನರಸೀಪುರ, ಸೆ.6– ಚೆನ್ನೈನ ಏಷ್ಯಾ ಇಂಟರ್ನೆಟ್ ಕಲ್ಚರ್ ಸರ್ಚ್ ಅಕಾಡೆಮಿ ವತಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ತಾ.ಪಂ.ಮಾಜಿ ಉಪಾಧ್ಯಕ್ಷ ಬಿ. ಮರಯ್ಯ ಹಾಗೂ ನ್ಯೂಡೆಲ್ಲಿಯ ಸೌತ್ ವೆಸ್ಟ್ರನ್ ಅಮೆರಿಕನ್ ಯೂನಿವರ್ಸಿಟಿ ವತಿಯಿಂದ ಡಾಕ್ಟರೇಟ್ ಪ್ರಶಸ್ತಿಗೆ ಭಾಜನರಾದ ಮನ್ಸೂರ್ ಆಲಿಯವರನ್ನು ಪಟ್ಟಣದಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಸರಳ ಸಮಾರಂಭದಲ್ಲಿ ಪಟ್ಟಣದ ನಾಗರಿಕ ಸೇವಾ ಸಂಘ ಹಾಗೂ ವಿವಿಧ ಸಂಘಟನೆಗಳ ಮುಖ್ಯಸ್ಥರು ಗೌರವ ಪೂರ್ವಕವಾಗಿ ಬಿ.ಮರಯ್ಯ ಹಾಗೂ ಮನ್ಸೂರ್ ಆಲಿಯವರನ್ನು ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಯಾವುದೇ ಸ್ವಾರ್ಥವಿಲ್ಲದೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಇಬ್ಬರೂ ಪ್ರಶಸ್ತಿ ಪುರಸ್ಕೃತರು ತಿ.ನರಸೀಪುರ ಪಟ್ಟಣದ ಮುಕುಟಮಣಿಗಳಿದ್ದಂತೆ, ಮನುಷ್ಯನ ಹುಟ್ಟು ಮತ್ತು ಸಾವು ಸಹಜ. ಆದರೆ, ಇವರೆಡರ ಮಧ್ಯೆ ಹೇಗೆ ಬದುಕಬೇಕೆಂಬುದೇ ಜೀವನವಾಗಿದ್ದು, ಸ್ವಾರ್ಥಕ್ಕಾಗಿ ಬದುಕದೇ ಸಮಾಜ ಸೇವೆಗೆ ಮೀಸಲಾಗಿಡಬೇಕು. ಇದರಿಂದ ಬದುಕು ಸಾರ್ಥಕತೆಯ ಜತೆಗೆ ಸಮಾಧಾನವು ಇರುತ್ತದೆ. ಈ ನಿಟ್ಟಿನಲ್ಲಿ ಬಿ.ಮರಯ್ಯರವರ ಸೇವೆ ಶ್ಲಾಘನೀಯವಾಗಿದ್ದು ಅವರಿಗೆ ಮತ್ತಷ್ಟು ಪ್ರಶಸ್ತಿಗಳು ದೊರಕುವಂತಾಗಲಿ ಹಾಗೂ ರಾಜಕಾರಣದಲ್ಲೂ ಉನ್ನತ ಸ್ಥಾನ ಲಭಿಸಲಿ ಎಂದು ಆಶಿಸಿದರು.

ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಮಾತನಾಡಿ, ಸಮಾಜಸೇವೆ ಎಲ್ಲರೂ ಮಾಡುವಂತದ್ದಲ್ಲ. ಅದಕ್ಕೆ ಪರಿಶುದ್ಧವಾದ ಮನಸ್ಸಿರಬೇಕು.ಹಣ ಇದ್ದ ವ್ಯಕ್ತಿ ಸಮಾಜ ಸೇವೆ ಮಾಡುತ್ತಾನೆಂಬುದು ತಪ್ಪು ಕಲ್ಪನೆಯಾಗುತ್ತದೆ. ಮರಯ್ಯ ಹಾಗು ಮನ್ಸೂರ್ ಆಲಿಯವರು ಉತ್ತಮ ಮನಸ್ಥಿತಿಯಳ್ಳವರಾಗಿದ್ದು ಅವರ ಸಮಾಜ ಸೇವೆ ನಿರಂತರವಾಗಿ ಸಾಗುತ್ತಿರಲಿ ಎಂದರು.

ನಾಗರೀಕ ಸನ್ಮಾನ ಸ್ವೀಕರಿಸಿ ಮಾತನಾಡಿದ ಬಿ.ಮರಯ್ಯ ಡಾಕ್ಟರೇಟ್ ದೊರಕಿರುವ ನನಗೆ ನಾಗರೀಕರು ಸನ್ಮಾನಿಸಿರುವುದು ಸಂತಸ ತಂದಿದೆ. ಸನ್ಮಾನ ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದ್ದು, ಬಡವರು, ಶೋಷಿತ ಸಮಾಜದವರ ಕಲ್ಯಾಣಕ್ಕಾಗಿ ನನ್ನ ಕೈಲಾದ ಸೇವೆ ಮಾಡುವುದಾಗಿ ತಿಳಿಸಿದರು.

ರೈತ ಮುಖಂಡ ಕಿರಗಸೂರು ಶಂಕರ್, ನಿವೃತ್ತ ಪ್ರಾಚಾರ್ಯ ಸೋಮಣ್ಣ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಮಾದೇಶ್, ಆಲಗೂಡು ಬಸವರಾಜು,ಗೌಡರ ಪ್ರಭು, ಕೈಯ್ಯಂಬಳ್ಳಿ ಅಶೋಕ್, ಸಿದ್ದಪ್ಪ, ಪುರಸಭಾ ಸದಸ್ಯ ನಾಗರಾಜು, ನಯನಜ ಕ್ಷತ್ರಿಯ ಸಮಾಜದ ಅಧ್ಯಕ್ಷ ನಾಗೇಂದ್ರ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಶ್ರೀನಿವಾಸ್, ಡಿವೈಎಫ್‌ಐ ಅಧ್ಯಕ್ಷ ಪುಟ್ಟಮಲ್ಲಯ್ಯ, ಶರಣ,ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಅಕ್ಬರ್, ರೈತ ಮುಖಂಡ ಬಿ.ಪಿ. ಪರಶಿವಮೂರ್ತಿ, ಪುರಸಭೆ ಕೆಡಿಪಿ ಸದಸ್ಯ ದಿವಾಕರ್, ವಕೀಲ ಜ್ಞಾನೇಂದ್ರ ಮೂರ್ತಿ, ಸೋಸಲೆ ರಾಜಶೇಖರ್ ಸೇರಿದಂತೆ ಮತ್ತಿತರರಿದ್ದರು.

# ರೈತರಿಗೆ, ಸ್ತ್ರೀಶಕ್ತಿ ಸಂಘಟನೆಗಳಿಗೂ ಸಾಲ ಸೌಲಭ್ಯ ನೀಡಬೇಕು

## ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ ಸಲಹೆ



ವಾರ್ಷಿಕ ಮಹಾಸಭೆಯಲ್ಲಿ ದೊಡ್ಡಸ್ವಾಮೇಗೌಡ ಮಾತನಾಡಿದರು.

**ಭೇರ್ಯ:** ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಸಕಾಲದಲ್ಲಿ ಸಾಲ ಸೌಲಭ್ಯ ನೀಡಬೇಕು ಎಂದು ಎಂಸಿಡಿಸಿಸಿ ಬ್ಯಾಂಕಿನ ನಿರ್ದೇಶಕ ದೊಡ್ಡಸ್ವಾಮೇಗೌಡ ಹೇಳಿದರು.

ತಾಲೂಕಿನ ಚಿಕ್ಕವಡ್ಡರಗುಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಸಾಲ ನೀಡುವುದರ ಜತೆಗೆ ಸ್ತ್ರೀಶಕ್ತಿ ಮಹಿಳಾ ಸ್ವ–ಸಹಾಯ ಸಂಘಗಳಿಗೂ ಸಾಲ ಸೌಲಭ್ಯ ನೀಡುವ ಮೂಲಕ ಅವರ ಆರ್ಥಿಕಾಭಿವೃದ್ಧಿಗೆ ಸಹಕರಿಸಬೇಕೆಂದರು.

ಸಂಘದ ವತಿಯಿಂದ ರೈತರಿಗೆ ಬೇಕಾಗುವಂತಹ ಗೊಬ್ಬರ ಮತ್ತಿತರ ಪರಿಕರಗಳನ್ನು ಮಾರಾಟ ಮಾಡಬೇಕು. ಇದರಿಂದ ಸಂಘಕ್ಕೆ ಆರ್ಥಿಕ ಲಾಭವಾಗಲಿದೆ. ಇಂತಹ ವಿಚಾರವನ್ನು ಆಡಳಿತ ಮಂಡಳಿಯವರು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಸಂಘದ ಅಧ್ಯಕ್ಷೆ ಪದ್ಮಮ್ಮ ಮಾತನಾಡಿ, 11.71 ಕೋಟಿ ರೂಗಳನ್ನು ರೈತ ಸದಸ್ಯರಿಗೆ ವಿತರಿಸಲಾಗಿದ್ದು, ಈ ಬಾರಿ ಹೊಸ ಸದಸ್ಯರಿಗೂ ಸಾಲ ವಿತರಿಸಲು ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದ ಅಧ್ಯಕ್ಷರು ಸಂಘ 8.68 ಲಕ್ಷ ನಿವ್ವಳ ಲಾಭಗಳಿಸಿದ್ದು, ಇದರ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಪಿಕಾರ್ಡ್ ಬ್ಯಾಂಕಿನ ಅಧ್ಯಕ್ಷೆ ಪುಷ್ಪಲತರಮೇಶ್, ರೈತ ಮುಖಂಡರಾದ ಕೆ.ಹೆಚ್.ಬುಡೀಗೌಡ, ನಾಗರಾಜು, ಕಿಟ್ಟಿಪ್ರಸಾದ್, ಸಿ.ವಿ. ಗುಡಿಜಗದೀಶ್, ದೇವರಾಜು ಮಾತನಾಡಿದರು. ಸಂಘದ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಎಸ್.ಭಾಸ್ಕರ್ ವಾರ್ಷಿಕ ವರದಿಯನ್ನು ಮಂಡಿಸಿದರು. ಇದೇ ಸಂದರ್ಭದಲ್ಲಿ 2025–26ನೇ ಸಾಲಿನ ಆಯ–ವ್ಯಯವನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು.

ಉಪಾಧ್ಯಕ್ಷ ಮಹದೇವನಾಯಕ, ನಿರ್ದೇಶಕರಾದ ರಂಗೇಗೌಡ, ಜಿ.ಆರ್.ಕೃಷ್ಣೇಗೌಡ, ನಾಗಮ್ಮ, ಕಾಮಾಕ್ಷಮ್ಮ, ನಾರಾಯಣ್, ಕೆಂಪೇಗೌಡ, ಮಹದೇವ್, ನಿಂಗಾಜೋಗಿ, ರಮೇಶ್‌ಬಾಬು, ವೀರಭದ್ರಸ್ವಾಮಿ, ಸಂಘದ ಸಿಬ್ಬಂದಿಗಳಾದ ಜಯರಾಮು, ಎ.ಕೆ.ನಂದೀಶ್, ಈಶ್ವರ್ ಹಾಜರಿದ್ದರು.

## ವಾರ್ಷಿಕ ಮಹಾಸಭೆ

ಬನ್ನೂರು, ಸೆ.6– ಇಲ್ಲಿಗೆ ಸಮೀಪದ ಚಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ.16ರಂದು ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ಅಧ್ಯಕ್ಷ ಹೆಚ್.ಎಂ.ಮಾದೇಗೌಡರ ನೇತೃತ್ವದಲ್ಲಿ ನಡೆಯಲಿದ್ದು, ಎಲ್ಲಾ ಸದಸ್ಯರು ಆಗಮಿಸಿ ಸಭೆ ಯಶಸ್ವಿಗೊಳಿಸುವಂತೆ ಸಿಇಓ ಹೆಚ್.ಎಂ.ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉತ್ತಮ ಶಿಕ್ಷಣದಿಂದ ಮಾತ್ರ ದೇಶದ ಭವಿಷ್ಯ ರೂಪಿಸಲು ಸಾಧ್ಯ

## ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಸಲಹೆ



ಪಟ್ಟಣದ ಕನಕ ಭವನದಲ್ಲಿ ವಿಜೃಂಭಣೆಯಿಂದ ನಡೆದ ಶಿಕ್ಷಕರ ದಿನಾಚರಣೆ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.6– ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದರೆ ಮಾತ್ರ ದೇಶದ ಭವಿಷ್ಯ ರೂಪಿಸಲು ಸಾಧ್ಯ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣ ಅವರ ಜನ್ಮ ದಿನಾಚರಣೆ ಅಂಗವಾಗಿ ನಡೆದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಅತಿ ಹೆಚ್ಚು ಬಡ ಕುಟುಂಬಗಳ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಶಿಕ್ಷಕರುಗಳು ಮಕ್ಕಳ ಭವಿಷ್ಯವನ್ನ ರೂಪಿಸಲು ಉತ್ತಮ ಶಿಕ್ಷಣ ನೀಡಬೇಕು ಎಂದರು.

ಈ ಬಾರಿ ಶಿಕ್ಷಕರ ದಿನಾಚರಣೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಅವರು ಎಲ್ಲರನ್ನು ಒಟ್ಟುಗೂಡಿಸಿ, ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಸಂತಸ ತಂದಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಹೆಚ್.ಡಿ. ಕೋಟೆ ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ಸಾವಿತ್ರಿ ಬಾಫುಲೆ, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುರಸಭಾ ಅಧ್ಯಕ್ಷೆ ಶಿವಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಅವರುಗಳ ಸಮ್ಮುಖದಲ್ಲಿ ಪುಷ್ಪಾರ್ಚನೆ ನೆರವೇರಿಸಿ ಬೆಳ್ಳಿರಥದ ಮೂಲಕ, ಪೂರ್ಣ ಕುಂಭ, ಮಂಗಳ ವಾದ್ಯ, ವೀರಗಾಸೆ, ಡೊಳ್ಳು ಕುಣಿತ, ಕಂಸಾಳೆ, ನಗಾರಿ, ಮೂಲಕ ಸಾವಿರಾರು ಶಿಕ್ಷಕರು, ಶಿಕ್ಷಕಿಯರು ಮೆರವಣಿಯಲ್ಲಿ ಪಟ್ಟಣದ ಮುಖ್ಯರಸ್ತೆ ಮೂಲಕ ಸಾಗಿ ಕನಕ ಭವನದ ವೇದಿಕೆ ಕಾರ್ಯಕ್ರಮಕ್ಕೆ ಸಮಾವೇಶಗೊಂಡಿತು.

ಕಾರ್ಯಕ್ರಮ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾತನಾಡಿದರು. ಮುಖ್ಯ ಭಾಷಣಕಾರರಾಗಿ ಖ್ಯಾತ ಸಾಹಿತಿ ಹನೂರು ಚನ್ನಪ್ಪನವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಮಾಡಲಾಯಿತು.

ಕನಕ ಭವನದ ಬಳಿ ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿ ಬಾಪುಲೆ ಅವರ ಭಾವಚಿತ್ರವನ್ನು ಫೋಟೋ ಪಾಯಿಂಟ್ ಮಾಡಲಾಗಿತ್ತು. ಅಲ್ಲಿ ಶಿಕ್ಷಕರುಗಳು ಶಿಕ್ಷಕಿಯರುಗಳು ಫೋಟೋ ಕ್ಲಿಕ್ಕಿಸಿಕೊಂಡು ಸಂತಸ ಪಟ್ಟರು.

ಕಾರ್ಯಕ್ರಮದಲ್ಲಿ ಪುರಸಭಾ ಅಧ್ಯಕ್ಷೆ ಶಿವಮ್ಮ ಚಾಕಳ್ಳಿ ಕೃಷ್ಣ, ಸ್ಥಾಯಿ ಸಮಿತಿ ಅಧ್ಯಕ್ಷ ಮಧು ಕುಮಾರ್, ಸದಸ್ಯರುಗಳಾದ ಎಚ್.ಸಿ.ನರಸಿಂಹಮೂರ್ತಿ, ಪ್ರೇಮ್ ಸಾಗರ್, ನಂಜಪ್ಪ, ಗೀತಾ, ಸುಹಾಸಿನಿ, ಕವಿತಾ, ಸರಗೂರು ಪಪಂ ಸದಸ್ಯ ಶ್ರೀನಿವಾಸ್, ಹುಣಸೂರು ಬಿಇಓ ಮಹದೇವ್, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಕೃಷ್ಣಯ್ಯ, ಕೋಟೆ, ಸರಗೂರು, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಜಗದೀಶ್, ಸೋಮ ಶೇಖರ್, ಕಾಸಪ್ಪ ಅಧ್ಯಕ್ಷ ಕನ್ನಡ ಪ್ರಮೋದ್, ಶಿಕ್ಷಕರುಗಳಾದ ಸಿದ್ದರಾಜು, ಲಿಂಗರಾಜು, ಪ್ರಕಾಶ್, ಲಿಂಗರಾಜು, ಯಶವಂತ್ ಕುಮಾರ್, ಕೃಷ್ಣಮೂರ್ತಿ, ಗಿರೀಶ್‌ಮೂರ್ತಿ, ಎ.ಎಸ್. ಮಾದೇವ್, ಕೆಂಪರಾಜು, ಮಂಜುನಾಥ್ ಜ್ಯೋತಿ ರಾಮೇಗೌಡ ನಾರಾಯಣ ಸ್ವಾಮಿ, ಪ್ರಶಾಂತ್, ಸೋಮಸುಂದರ, ಜಯರಾಮೇಗೌಡ, ಶಿವಶಂಕರ್, ಮಹೇಶ್, ಪ್ರಸನ್ನ, ಪ್ರಸನ್ನ, ಜಯರಾಮ, ಶಿವಣ್ಣ, ನಾಗರಾಜು, ಪ್ರತಿಭಾ ರಾಣಿ, ಬಬಿತಾ ರಾಣಿ, ರೂಪ, ಪ್ರತಿಭಾ, ಮುಖಂಡರುಗಳು, ಸಾವಿರಾರು ಸಂಖ್ಯೆಯಲ್ಲಿ ಶಿಕ್ಷಕರುಗಳು ಶಿಕ್ಷಕಿಯರು ಭಾಗವಹಿಸಿದ್ದರು.

> ಈ ಬಾರಿ ಶಿಕ್ಷಕರ ದಿನಾಚರಣೆಯನ್ನು ಶಾಸಕ ಅನಿಲ್ ಚಿಕ್ಕಮಾದು ಅವರ ಮಾರ್ಗದರ್ಶನದಲ್ಲಿ ವಿಶಿಷ್ಟವಾಗಿ ನೆರವೇರಿಸಲಾಗಿದೆ, ಶಾಸಕರು ತಾಲೂಕಿನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ, ಅವರ ನಿರೀಕ್ಷೆಗೆ ತಕ್ಕಂತೆ ಮುಂದಿನ ದಿನಗಳಲ್ಲಿ ತಾಲೂಕಿನ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು, ಉತ್ತಮ ರೀತಿಯಲ್ಲಿ ಬರುವಂತೆ ನಾವೆಲ್ಲರೂ ಶ್ರಮಿಸುತ್ತೇವೆ.
> –ಸಿ.ಎನ್. ರಾಜು ಕ್ಷೇತ್ರ ಶಿಕ್ಷಣಾಧಿಕಾರಿ.

## ತಾಯಮ್ಮ ನಿಧನ



**ನಂಜನಗೂಡು:** ಬೊಕ್ಕಳ್ಳಿ ಗ್ರಾಮದ ರೈತ ಮಹಿಳೆ ತಾಯಮ್ಮ ಶನಿವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ , ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು. ಜಿಲ್ಲೆಯ ಹಾಗೂ ತಾಲೂಕಿನ ರೈತ ಸಂಘದ ಸದಸ್ಯರು ರೈತ ಮಹಿಳಾ ಸ್ವಸಹಾಯ ಸಂಘಗಳು ಸಂತಾಪ ಸೂಚಿಸಿದ್ದಾರೆ.

## ಹೆಚ್.ಪಿ.ದೇವರಾಜು



ಹುಣಸೂರು, ಸೆ.6– ನಗರದ ಗಣೇಶನಗುಡಿ ಬೀದಿ ವಾಸಿ ಹಾಗೂ ಟಿಎಪಿಸಿ.ಎಂಎಸ್ ಸೊಸೈಟಿಯ ನಿವೃತ್ತ ಕಾರ್ಯದರ್ಶಿ ಪುಟ್ಟಸ್ವಾಮಶೆಟ್ಟರ ಮಗ ಹೆಚ್.ಪಿ.ದೇವರಾಜು (63ವರ್ಷ) ಶುಕ್ರವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಿಕ್ಕಹುಣಸೂರಿನ ಮೃತರ ತೋಟದಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ಸೇವೆಯ ದಕ್ಷಿಣ ಭಾರತದಾದ್ಯಂತ ವಿಸ್ತರಿಸುವ ಗುರಿ

**● ಬ್ಯಾಂಕ್‌ನ 105ನೇ ವರ್ಷದ ಶತಪಯಣ ಸಮಾರಂಭದಲ್ಲಿ ಅಧ್ಯಕ್ಷ ಡಾ. ಮಂಜೇಗೌಡ ವಿಶ್ವಾಸ ● ಬ್ಯಾಂಕ್‌ನಲ್ಲಿ 10,006 ರೈಲ್ವೆ ನೌಕರರ ಸದಸ್ಯತ್ವ ● 510 ಕೋಟಿ ಠೇವಣಿ; 2024–25 ಅವಧಿಯಲ್ಲಿ 12.28 ಕೋಟಿ ಲಾಭ**



ಮೈಸೂರಿನ ಜೆ.ಕೆ.ಮೈದಾನದಲ್ಲಿನ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಶನಿವಾರ ನಡೆದ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್‌ನ 105ನೇ ವರ್ಷದ ಶತಪಯಣದ ಸಮಾರಂಭದಲ್ಲಿ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನೌಕರರನ್ನು ಸನ್ಮಾನಿಸಲಾಯಿತು.

ಮೈಸೂರು, ಸೆ.6(ಬಿಎಲ್‌ಯು)– ಬೆಂಗಳೂರು, ಮೈಸೂರು ಸೇರಿದಂತೆ ಕರ್ನಾಟಕದಲ್ಲಿರುವ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ಸೇವೆಯನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಣೆ ಮಾಡುವ ಗುರಿ ಹೊಂದಲಾಗಿದೆ ಎಂದು ಬ್ಯಾಂಕ್ ಅಧ್ಯಕ್ಷ ಡಾ.ಎಂ.ಬಿ.ಮಂಜೇಗೌಡ ತಿಳಿಸಿದರು.

ನಗರದ ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಇಂದು ನಡೆದ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್‌ನ 105ನೇ ವರ್ಷದ ಶತಪಯಣದ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬ್ಯಾಂಕ್ ಸ್ಥಾಪನೆ, ನಡೆದು ಬಂದ ದಾರಿ ಹಾಗೂ ಮುಂದಿನ ಗುರಿ ಸೇರಿದಂತೆ ಬ್ಯಾಂಕ್ ಬೆಳವಣಿಗೆಯನ್ನು ಸಮಾರಂಭದಲ್ಲಿ ಮಂಡಿಸಿದರು.

ರೈಲ್ವೆ ಸಹಕಾರ ಸಂಘವು ಮೂಲತಃ ಬೆಂಗಳೂರಿನಲ್ಲಿ ಏಪ್ರಿಲ್ 1, 1920 ರಿಂದ ಕಾರ್ಯನಿರ್ವಹಿಸಲು ಪ್ರಾರಂಭವಾಯಿತು. 112 ಸದಸ್ಯರನ್ನು ಒಳಗೊಂಡ ರೈಲ್ವೆ ಆಡಿಟ್ ಕಚೇರಿಯು 2,500 ರೂಪಾಯಿಯೊಂದಿಗೆ ಒಂದು ಕೋಣೆಯಲ್ಲಿ ಪ್ರಾರಂಭಗೊಂಡಿತು. ರೈಲ್ವೆ ಇಲಾಖೆ ಬೆಳವಣಿಗೆ ಸಾಧಿಸಿದಂತೆ ಮೈಸೂರು ರೈಲ್ವೇಸ್, ಮೈಸೂರು ರಾಜ್ಯ ರೈಲ್ವೇಸ್ ಎಂಬ ಪದನಾಮ ಬದಲಾವಣೆಗೊಂಡಿತು. ಅದರಂತೆ ರೈಲ್ವೆ ಸಹಕಾರ ಸಂಘದ ಹೆಸರು ಕೂಡ ಬದಲಾವಣೆಗೊಳ್ಳುತ್ತಾ ಬಂದಿತು. ಪ್ರಸ್ತುತ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ಎಂಬ ಹೆಸರಿನಿಂದ ಪ್ರಖ್ಯಾತಿ ಪಡೆದಿದೆ ಎಂದರು.

ಬ್ಯಾಂಕ್ 1945ರಲ್ಲಿ ಸಿಲ್ವರ್ ಜುಬ್ಲಿ, 1970ರಲ್ಲಿ ಗೋಲ್ಡನ್ ಜುಬ್ಲಿ, 1980ರಲ್ಲಿ ಡೈಮಂಡ್ ಜುಬ್ಲಿ ಆಚರಿಸಿಕೊಂಡು, ಈಗ 105ನೇ ವರ್ಷದ ಶತಪಯಣ ಆಚರಣೆ ಮಾಡಿಕೊಳ್ಳುತ್ತಿದೆ. ಬ್ಯಾಂಕಿನ ಸದಸ್ಯರಿಗೆ ಪ್ರಾರಂಭದಲ್ಲಿ 200 ರೂಪಾಯಿ ನೀಡುತ್ತಿದ್ದ ಸಾಲವನ್ನು ಇಂದು 25 ಲಕ್ಷ ರೂಪಾಯಿ ವರೆಗೆ ವಿಸ್ತರಿಸಿ ನೀಡಲಾಗುತ್ತಿದೆ. 3 ಲಕ್ಷದ ವರೆಗೆ ವಿದ್ಯಾಭ್ಯಾಸ ಸಾಲ, 2 ಲಕ್ಷದವರೆಗೆ ಗ್ರಾಹಕರ ಸಾಲ, 8 ಲಕ್ಷದ ವರೆಗೆ ವೇತನ ಸಾಲ ನೀಡಲಾಗುತ್ತಿದೆ ಎಂದು ಡಾ.ಮಂಜೇಗೌಡ ಅಂಕಿ–ಅಂಶ ಸಹಿತ ವಿವರ ನೀಡಿದರು.

ಪ್ರಸ್ತುತ ಬ್ಯಾಂಕ್ ಬೃಹದಾಕಾರವಾಗಿ ಪ್ರಗತಿ ಸಾಧಿಸಿದ್ದು, 510 ಕೋಟಿ ಠೇವಣಿ ಹೊಂದಿದೆ. 66 ಕೋಟಿ ರೂಪಾಯಿ ಷೇರು ಬಂಡವಾಳವಿದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಗ್ರಾಹಕರಿಗೆ ಅನುಕೂಲವಾಗುಂತೆ ಬ್ಯಾಂಕ್ ವ್ಯವಹಾರವನ್ನು ಸರಳೀಕರಣಗೊಳಿಸಲಾಗಿದೆ ಎಂದರು.

ಬ್ಯಾಂಕ್‌ನಲ್ಲಿ 10,006 ರೈಲ್ವೆ ನೌಕರರ ಸದಸ್ಯತ್ವ ಇದ್ದು, 2024–25 ನೇ ಸಾಲಿನಲ್ಲಿ 12.28 ಕೋಟಿ ಲಾಭಗಳಿಸಿದೆ ಬ್ಯಾಂಕ್ ಸದಸ್ಯರಿಗೆ ಎಲ್‌ಐಸಿಯಿಂದ ಗುಂಪು ವಿಮೆ ಮಾಡಿಸಲಾಗಿದ್ದು, ಮೃತರಾದ 60 ಸದಸ್ಯರಿಗೆ 6 ಕೋಟಿ ವಿಮೆ ದೊರೆತಿದೆ ಎಂದು ಮಾಹಿತಿ ನೀಡಿದರು.

ಮೈಸೂರಿನ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಬೆಂಗಳೂರಿನ ವಿಶ್ವ ಒಕ್ಕಲಿಗರ ಸಂಸ್ಥಾನದ ಶ್ರೀ ನಿಶ್ಚಲಾನಂದ ಸ್ವಾಮೀಜಿ, ಶಾಸಕ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸೌತ್–ವೆಸ್ಟರ್ನ್ ರೈಲ್ವೆ ಮೈಸೂರು ಕಾರ್ಯಾಗಾರದ ಚೀಫ್ ವರ್ಕ್ಸ್ ಮ್ಯಾನೇಜರ್ ವಿ.ಕೆ.ಚಡ್ಡಾ, ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ಉದ್ಯಮ ಕುಶಿ ವಿನು ಸೇರಿದಂತೆ ಬ್ಯಾಂಕ್ ನಿರ್ದೇಶಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

### 25 ಲಕ್ಷದಿಂದ 75 ಲಕ್ಷಕ್ಕೆ ಸಾಲ ಪ್ರಮಾಣ ಹೆಚ್ಚಳ

ವರ್ಷಗಳು ಕಳೆದಂತೆ ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ಆರ್ಥಿಕವಾಗಿ ಬೆಳವಣಿಗೆ ಸಾಧಿಸುತ್ತಿದ್ದು ಬ್ಯಾಂಕ್ ಸದಸ್ಯರಿಗೆ 75 ಲಕ್ಷದವರೆಗೆ ಗೃಹ ಸಾಲ ನೀಡಲು ತೀರ್ಮಾನ ಮಾಡಲಾಗುವುದು. ಇದಲ್ಲದೆ 40 ಲಕ್ಷದವರೆಗೆ ವಿಶೇಷ ಸಾಲ ನೀಡಲಾಗುವುದು ಎಂದು ಡಾ.ಮಂಜೇಗೌಡ ತಿಳಿಸಿದರು.

ಭಾರತೀಯ ರೈಲ್ವೆ ನೌಕರರಿಗೆ ಬ್ಯಾಂಕ್ ಸೇವೆಯನ್ನು ಒದಗಿಸುವ ಸಂಬಂಧ ಬ್ಯಾಂಕ್‌ನ್ನು ಬಹು ರಾಜ್ಯ ಸಹಕಾರ ಬ್ಯಾಂಕ್ ಆಗಿ ವಿಸ್ತರಣೆ ಮಾಡುವ ಗುರಿ ಹೊಂದಲಾಗಿದೆ ಎಂದರು.

ಪ್ರಸ್ತುತ 1,200 ಕೋಟಿ ವಾರ್ಷಿಕ ವಹಿವಾಟು ಹೊಂದಿರುವ ಬ್ಯಾಂಕ್ ವ್ಯವಹಾರವನ್ನು 2.000 ಕೋಟಿಗೆ ಹೆಚ್ಚಳ, 510 ಕೋಟಿ ಇರುವ ಠೇವಣಿಯನ್ನು 1000 ಕೋಟಿಗೆ ಹೆಚ್ಚಳ ಮಾಡುವ ಗುರಿ ಹೊಂದಲಾಗಿದೆ ಎಂದು ಅವರು ತಿಳಿಸಿದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮದ್ರಾಸಿ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಮದರಾಸಿ(ತ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಬಾಘಿ–4 (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ರುಧಿರಂ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕೂಲಿ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಘಾಟಿ (ತ+ತೆ) | 2+2 ಪ್ರದರ್ಶನಗಳು |
| **ಸಂಗಂ** | |
| ಸು ಫ್ರಮ್ ಸೋ (ಕ) | 4 ಪ್ರದರ್ಶನಗಳು |
| **ಲಿಡೋ** | |
| ನಮೋ ವೆಂಕಟೇಶ(ಕ) + ಬ್ಯಾಡ್‌ಗರ್ಲ್(ತ) | 2+2 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ರುಧಿರಂ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ. |
| ಸ್ಕ್ರೀನ್ 2 | ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ. |
| ಸ್ಕ್ರೀನ್ 3 | ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ. |
| ಸ್ಕ್ರೀನ್ 4 | ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ |
| ಸ್ಕ್ರೀನ್ 2 | ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ. |
| ಸ್ಕ್ರೀನ್ 3 | ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ. |
| ಸ್ಕ್ರೀನ್ 4 | ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

**ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್‌ಗೆ ಆಹ್ವಾನ ಖಂಡಿಸಿ**

# ಸೆ.9, ಹಿಂದೂ ಜಾಗರಣ ವೇದಿಕೆ ಚಾಮುಂಡಿ ಬೆಟ್ಟಕ್ಕೆ ಪಾದಯಾತ್ರೆ

ಮೈಸೂರು, ಸೆ.6(ಜಿಎ)–ನಮ್ಮ ಧರ್ಮ, ಸಂಸ್ಕೃತಿ ಬಗ್ಗೆ ಟೀಕೆ ಮಾಡುವ ಬಾನು ಮುಷ್ತಾಕ್ ಅವರು ಈ ಬಾರಿಯ ನಾಡಹಬ್ಬ ದಸರಾ ಉದ್ಘಾಟಿಸಲು ಆಹ್ವಾನಿಸಿರುವುದನ್ನು ಖಂಡಿಸಿ, ಸೆ.9 ರಂದು ಹಿಂದೂ ಜಾಗರಣ ವೇದಿಕೆ ವತಿಯಿಂದ ಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಂತ್ಯ ಸಂಚಾಲಕ ಕೇಶವಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7.30ಕ್ಕೆ ಕುರುಬಾರಹಳ್ಳಿ ವೃತ್ತದಿಂದ ಪಾದಯಾತ್ರೆ ಹೊರಡಲಿದ್ದು, ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ. ಬೆಟ್ಟದ ಮೇಲೆ ಪ್ರತಿಭಟನಾ ಸಭೆ ಸಹ ನಡೆಯಲಿದೆ. ಈ ಸಂಬಂಧ ಪೊಲೀಸ್ ಇಲಾಖೆಯಿಂದ ಅನುಮತಿ ಕೋರಲಾಗಿದೆ ಎಂದರು.

ಬಾನು ಮುಷ್ತಾಕ್ ಅವರ ಆಯ್ಕೆ ವಿರುದ್ಧ ಈಗಾಗಲೇ ವೇದಿಕೆ ಮಾತ್ರವಲ್ಲದೆ, ಅನೇಕ ಸಂಘ ಸಂಸ್ಥೆಗಳು, ಕನ್ನಡಪರ ಸಂಘಟನೆಗಳು, ಸಾಹಿತಿಗಳು, ಧಾರ್ಮಿಕ ವ್ಯಕ್ತಿಗಳು ಮಾತನಾಡಿದ್ದಾರೆ. ಹೀಗಿದ್ದರೂ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿದಿಲ್ಲ. ಬಾನು ಮುಷ್ತಾಕ್ ಅವರು ಈ ಹಿಂದೆ ಸಾಹಿತ್ಯ ಸಮ್ಮೇಳನದಲ್ಲಿ ತಾಯಿ ಭುವನೇಶ್ವರಿಯ ಅರಿಶಿನ ಕುಂಕುಮದ ಬಗ್ಗೆ ಅವಹೇಳನಕಾರಿಯಾಗಿ ಮಾತನ್ನಾಡಿದ್ದಾರೆ.

ನಾಡಿನ ಆಚಾರ, ವಿಚಾರಗಳ ಬಗ್ಗೆ, ಸಂಸ್ಕೃತಿ ಬಗ್ಗೆ, ಧಾರ್ಮಿಕ ಆಚರಣೆ ಬಗ್ಗೆ ನಂಬಿಕೆ ಇಲ್ಲದವರಿಗೆ ತಾಯಿ ಚಾಮುಂಡೇಶ್ವರಿಯ ಬಗ್ಗೆ, ನವರಾತ್ರಿ ಬಗ್ಗೆ ನಿಲುವು ಹೇಗಿರಬಹುದು? ಎಂಬುದು ನಮ್ಮ ಪ್ರಶ್ನೆಯಾಗಿದೆ. ಹೀಗಾಗಿ ಬಹುಸಂಖ್ಯಾತ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ಆಗದ ರೀತಿಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರೆ ನಮ್ಮ ಅಭ್ಯಂತರವಿಲ್ಲ. ಆದರೆ ಧಾರ್ಮಿಕ ಭಾವನೆಗೆ, ಶ್ರದ್ಧೆಗೆ ಚ್ಯುತಿ ಬರುವಂತೆ ಮಾಡಿದರೆ ಸಹಿಸುವುದಿಲ್ಲ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮನು ಶ್ರೀನಿವಾಸ್, ರಾಜನ್, ಚಂದ್ರಸ್ವಾಮಿ, ವಸಂತ್‌ಕುಮಾರ್ ಉಪಸ್ಥಿತರಿದ್ದರು.

# ಸೆ.9ಕ್ಕೆ ಬಾನು ಮುಷ್ತಾಕ್ ದಸರಾ ಉದ್ಘಾಟನೆ ಬೆಂಬಲಿಸಿ ದಲಿತಾ ಮಹಾಸಭಾ ಚಾಮುಂಡಿಬೆಟ್ಟ ಚಲೋ



ಮೈಸೂರು, ಸೆ.6(ಎಸ್‌ಪಿಎನ್)– ಸಾಹಿತಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟನೆ ಮಾಡುವುದನ್ನು ವಿರೋಧಿಸಿ ಸೆ.9ರಂದು ಮೈಸೂರಿನ ಕುರುಬಾರಹಳ್ಳಿ ವೃತ್ತದಿಂದ ಚಾಮುಂಡಿಬೆಟ್ಟ ಚಲೋ ನಡೆಸುವುದಾಗಿ ಹಿಂದೂ ಜಾಗರಣಾ ವೇದಿಕೆ ಘೋಷಿಸಿರುವ ಬೆನ್ನಲ್ಲೇ ಅದೇ ದಿನ ಅದೇ ಸ್ಥಳದಿಂದ ಬಾನು ಮುಷ್ತಾಕ್ ದಸರಾ ಉದ್ಘಾಟನೆ ಬೆಂಬಲಿಸಿ ಚಾಮುಂಡಿಬೆಟ್ಟ ಚಲೋ ನಡೆಸುವುದಾಗಿ ಘೋಷಿಸಿದೆ. ಈ ಸಂಬಂಧ ನಗರ ಪೊಲೀಸ್ ಆಯುಕ್ತರಿಗೆ ಅನುಮತಿ ಕೋರಿ ಪತ್ರ ಬರೆದಿರುವ ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್, ಸೆ.9ರಂದು 'ಚಾಮುಂಡಿ ತಾಯಿಯನ್ನು ರಾಜಕೀಯ ಗೊಳಿಸದಿರಿ ಹಾಗೂ ಕೋಮುಗಲಭೆ ಸೃಷ್ಟಿಸದಿರಿ' ಎಂಬ ಘೋಷವಾಕ್ಯದಡಿ ಚಾಮುಂಡಿ ಬೆಟ್ಟ ಚಲೋ ಹಮ್ಮಿಕೊಂಡಿರುವುದಾಗಿ ತಿಳಿಸಿದ್ದಾರೆ.

ಅಂದು ಬೆಳಗ್ಗೆ 7.30ಕ್ಕೆ ಕುರುಬಾರಹಳ್ಳಿ ವೃತ್ತದಿಂದ ಸುಮಾರು 10 ಸಾವಿರ ಮಂದಿ ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ಚಾಮುಂಡಿಬೆಟ್ಟ ಚಲೋ ಹಮ್ಮಿಕೊಂಡಿರುವುದಾಗಿ ತಿಳಿಸಿರುವ ಅವರು, ಸಾಹಿತಿ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟಿಸಲು ಸರ್ಕಾರ ಆಹ್ವಾನಿಸಿರುವುದನ್ನು ಕೆಲ ಸಂಘಟನೆಗಳು ವಿರೋಧಿಸುವ ಮೂಲಕ ಕೋಮುಗಲಭೆ ಸೃಷಿಸಲು ಪ್ರಯತ್ನಿಸುತ್ತಿವೆ ಎಂದು ಅವರು ಆರೋಪಿಸಿದ್ದಾರೆ.

# ಮತಪತ್ರದ ಮೂಲಕ ಚುನಾವಣೆ ಆಮ್ ಆದ್ಮಿ ಪಕ್ಷ ಸ್ವಾಗತ



ಎಲ್.ರಂಗಯ್ಯ

ಮೈಸೂರು, ಸೆ.6(ಜಿಎ)–ಸ್ಥಳೀಯ ಸಂಸ್ಥೆ ಚುನಾವಣೆಗಳನ್ನು ಬ್ಯಾಲೆಟ್ ಪೇಪರ್‌ಗಳ ಮೂಲಕ ನಡೆಸುವ ಕರ್ನಾಟಕ ರಾಜ್ಯ ಸರ್ಕಾರದ ಕ್ರಮವನ್ನು ಆಮ್ ಆದ್ಮಿ ಪಕ್ಷ ಸ್ವಾಗತಿಸಿದೆ.

ಇತ್ತೀಚೆಗೆ ಅನೇಕ ರಾಜ್ಯಗಳಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಮತಗಳ್ಳತನ ಆಗಿದೆ ಎಂಬ ಸಾಕ್ಷ್ಯ ಸಮೇತದ ಇಂಡಿಯಾ ಒಕ್ಕೂಟದ ನಾಯಕರುಗಳ ಗುರುತರ ಆರೋಪಗಳಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡದ ಪ್ರಧಾನಿಗಳ ಉದ್ದಟತನ ಒಂದು ಕಡೆ. ಮತ್ತೊಂದು ಕಡೆ ಆರೋಪಿತ ಸ್ಥಾನದ ಕೇಂದ್ರ ಚುನಾವಣಾ ಆಯೋಗವು ಸೂಕ್ತ ಸ್ಪಷ್ಟೀಕರಣಗಳನ್ನು ಹಾಗೂ ಸಮಜಾಯಿಷಿಗಳನ್ನು ನೀಡದೆ. ಆರೋಪ ಮಾಡಿದ್ದ ನಾಯಕರುಗಳ ವಿರುದ್ಧವೇ ರಾಜಕೀಯ ಪ್ರತಿಕ್ರಿಯೆಗಳನ್ನು ನೀಡಿ ಮುಚ್ಚಿ ಹಾಕುವ ತಂತ್ರಗಾರಿಕೆಯಲ್ಲಿ ತೊಡಗಿತ್ತು.

ಇವರ ನಡೆಯಿಂದಾಗಿ ಕೇಂದ್ರ ಚುನಾವಣಾ ಆಯೋಗಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಆಮೂಲಾಗ್ರ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಇಚ್ಛೆ ಇಲ್ಲದಿರುವುದು ದೇಶದ ಜನತೆಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಇಂತಹ ಕಠಿಣ ಸಂದರ್ಭದಲ್ಲಿ ಬ್ಯಾಲೆಟ್ ಪೇಪರ್ ಬಳಕೆಯ ನಿರ್ಧಾರ ಕೈಗೊಂಡಿರುವುದು ಅತ್ಯಂತ ಸ್ವಾಗತಾರ್ಹ ಕ್ರಮ ಎಂದು ಆಮ್ ಆದಿ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷರಾದ ಎಲ್.ರಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದ ಸಾಂವಿಧಾನಿಕ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿಯ ಮತ ಕಳ್ಳತನ ಮಾಡಿ ಅಧಿಕಾರ ಪಡೆದುಕೊಳ್ಳುವ ಪ್ರಬಲರ ಹುನ್ನಾರ ತಪ್ಪಬೇಕಾದರೆ ಬ್ಯಾಲೆಟ್ ಪೇಪರ್‌ನ ಅವಶ್ಯಕತೆ ಅತ್ಯಂತ ಜರೂರಾಗಿದೆ. ಪಕ್ಷವು ಎಲ್ಲ ಸ್ತರಗಳಲ್ಲಿಯೂ ರಾಜ್ಯ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತದೆ. ಭಾರತೀಯ ಜನತಾ ಪಕ್ಷಕ್ಕೆ ಮತ ಕಳ್ಳತನವನ್ನು ನಿಜಕ್ಕೂ ತಡೆಗಟ್ಟುವ ಮನಸ್ಸಿದ್ದಲ್ಲಿ ಬಿಜೆಪಿ ಅಧಿಕಾರ ಹೊಂದಿರುವ ಇನ್ನಿತರ ರಾಜ್ಯಗಳಲ್ಲಿಯೂ ಸಹ ಇದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

# ಮನುಷ್ಯನನ್ನು ಮನುಷ್ಯನನ್ನಾಗಿಸುವುದೇ ಕಲೆ

**ಸಾಕ್ಷ್ಯಚಿತ್ರ ನಿರ್ದೇಶಕ ಆತ್ಮಾನಂದ ವಾಸನ್ ಅಭಿಪ್ರಾಯ**



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಶಿಕ್ಷಕರ ದಿನಾಚರಣೆಯನ್ನು ಸಾಕ್ಷ್ಯಚಿತ್ರ ನಿರ್ದೇಶಕ ಆತ್ಮಾನಂದ ವಾಸನ್ ಉದ್ಘಾಟಿಸಿದರು.

ಮೈಸೂರು, ಸೆ. 6– ಪ್ರತಿಯೊಬ್ಬ ರಂಗನಟನಿಗೂ ಸಮಾಜದ ಒಳನೋಟಗಳು ಬಹಳ ಮುಖ್ಯವಾಗಿದ್ದು, ಪ್ರತಿಯೊಬ್ಬರಲ್ಲೂ ಅಡಗಿರುವ ಸಂಸ್ಕಾರವನ್ನು ಜಾಗೃತಗೊಳಿಸಿ ಮನುಷ್ಯನನ್ನು ಮನುಷ್ಯನನ್ನಾಗಿಸುವುದೇ ಕಲೆ ಎಂದು ಪ್ರಸಿದ್ಧ ಛಾಯಾಚಿತ್ರಗಾರ, ನಟ, ಸಾಕ್ಷ್ಯಚಿತ್ರ ನಿರ್ದೇಶಕ ಆತ್ಮಾನಂದ ವಾಸನ್ ಅಭಿಪ್ರಾಯಪಟ್ಟರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಸಕ್ತ ಸಾಲಿನ ಕಾಜಾಣ ನಾಟಕ ತಂಡದ ಉದ್ಘಾಟನೆ ಹಾಗೂ ಶಿಕ್ಷಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ನಾಟಕ, ಸಂಗೀತ, ನೃತ್ಯ ಎಲ್ಲವನ್ನು ನೋಡಿ ಶ್ರೀಸಾಮಾನ್ಯರು ಸಂತೋಷ ಪಡುವುದಷ್ಟೇ ಅಲ್ಲದೇ ಹಲವು ಸಂಗತಿಗಳನ್ನು ಕಲಿಯಲು ಮನುಷ್ಯನಿಗೆ ಕಲೆ ಎನ್ನುವುದು ಬೇಕೇ ಬೇಕು. ಜೀವನದಲ್ಲಿ ಎಲ್ಲರೂ ನಟರೇ, ಅವಶ್ಯಕತೆಗೆ ತಕ್ಕಂತೆ ಅಭಿನಯಿಸುವ ಮೂಲಕ ತಮ್ಮ ನಟನೆಯನ್ನು ವ್ಯಕ್ತಪಡಿಸುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ವಿದ್ಯಾರ್ಥಿಗಳು ಅವಕಾಶ ಸಿಕ್ಕಾಗ ಅತ್ಯುತ್ತಮ ಪ್ರದರ್ಶನ ನೀಡಿ ಭವಿಷ್ಯವನ್ನು ಸುಭದ್ರಪಡಿಸಿಕೊಳ್ಳಬೇಕು, ನಾಟಕದ ಬಗ್ಗೆ ಕೇವಲ ಆಸಕ್ತಿ ಇದ್ದರಷ್ಟೆ ಸಾಲದು. ಅದಕ್ಕೆ ತಕ್ಕಂತೆ ರಂಗ ತರಬೇತಿಯನ್ನು ಪಡೆದು ಯಶಸ್ವಿ ನಟರಾಗಿ ಬೆಳೆಯಿರಿ ಎಂದ ಅವರು, ಸಮಾಜದಲ್ಲಿರುವ ಎಲ್ಲರೂ ಜೀವನದಲ್ಲಿ ಸಮಯಕ್ಕೆ ತಕ್ಕಂತೆ ನಟಿಸುವವರೇ ಆಗಿರುತ್ತಾರೆ. ಕತ್ತಲಿನಿಂದ ಬೆಳಕಿನೆಡೆಗೆ ಕರೆತರುವವನೇ ನಿಜವಾದ ಶಿಕ್ಷಕ. ನಿಮ್ಮ ಶಿಕ್ಷಕರನ್ನು ನೆನೆಯುವಂತಹ ಸುದಿನ ಇದಾಗಿದೆ ಎಂದು ತಿಳಿಸಿದರು.

# ಸಾಮಾಜಿಕ ಜಾಲತಾಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಪೋಸ್ಟ್: ಹಲವರ ವಿರುದ್ಧ ಪ್ರಕರಣ ದಾಖಲು



ಬೆಂಗಳೂರು, ಸೆ.6– ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಅವಹೇಳನಕಾರಿ ಪದಗಳಿಂದ ಹೀಯಾಳಿಸಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ಹಲವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ವಿರುದ್ಧ ಅವಹೇಳನಕಾರಿ ಪೋಸ್ಟ್ ಕುರಿತು ಸಾಮಾಜಿಕ ಮಾಧ್ಯಮ ಮೇಲ್ವಿಚಾರಣಾ ವಿಭಾಗದ ಗಮನಕ್ಕೆ ಬಂದಿದ್ದು, ಈ ಹಿನ್ನೆಲೆಯಲ್ಲಿ ಸೆ.3 ರಂದು ಸೈಬರ್ ಅಪರಾಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆಂದು ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಉಪ ಆಯುಕ್ತ (ಅಪರಾಧ –2) ರಾಜಾ ಇಮಾಮ್ ಖಾಸಿಂ ಅವರು ಹೇಳಿದ್ದಾರೆ.

ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಮೈಸೂರಿನಲ್ಲಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಎಐಐಎಸ್‌ಎಚ್)ಯ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸ್ವಾಗತವನ್ನು ಕೋರುತ್ತಾ, 'ಮೇಡಂ ಯು ನೊ ಕನ್ನಡ' ಎಂದು ಪ್ರಶ್ನಿಸಿದ್ದರು. ಬಳಿಕ ನಾನು ಕನ್ನಡದಲ್ಲೇ ಮಾತನಾಡುತ್ತೇನೆಂದು ಭಾಷಣ ಮಾಡಿದ್ದರು. ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ರಾಷ್ಟ್ರಪತಿಗಳಿಗೆ ಸಿದ್ದರಾಮಯ್ಯ ಅವರು ಅಗೌರವ ತೋರಿದ್ದಾರೆಂದು ಹಲವರು ಟೀಕೆಗಳನ್ನು ಮಾಡುತ್ತಿದ್ದಾರೆ.

**ಮಾಜಿ ಸಚಿವ ರಾಜಣ್ಣ ಬಿಜೆಪಿಗೆ ಹೋಗುತ್ತಾರೆ ಎಂದು ಹೇಳಿಕೆ ನೀಡಿರುವ**

# ಮಾಗಡಿ ಶಾಸಕ ಬಾಲಕೃಷ್ಣರನ್ನು ಮಂಪರು ಪರೀಕ್ಷೆಗೆ ಒಳಪಡಿಸಲಿ

**ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ. ಕಾಟೂರು ಆಗ್ರಹ**



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ. ಕಾಟೂರು ಮಾತನಾಡಿದರು.

ಮೈಸೂರು, ಸೆ.6(ಜಿಎ)–ಮಾಜಿ ಸಚಿವ ಕೆ.ಎನ್.ರಾಜಣ್ಣ ಬಿಜೆಪಿಗೆ ಹೋಗಲು ಅರ್ಜಿ ಹಾಕಿಕೊಂಡಿದ್ದಾರೆ ಎಂಬ ಹೇಳಿಕೆ ನೀಡಿರುವ ಮಾಗಡಿ ಶಾಸಕ ಬಾಲಕೃಷ್ಣ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕೆಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷರಾದ ದೇವರಾಜ್ ಟಿ. ಕಾಟೂರು ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಲಕೃಷ್ಣ ಅವರು ರಾಜಕೀಯ ನೆಲೆಯನ್ನು ಕಲ್ಪಿಸಿಕೊಟ್ಟ ಬಿಜೆಪಿ, ಜೆಡಿಎಸ್ ಪಕ್ಷಕ್ಕೆ ದ್ರೋಹ ಮಾಡಿ, ಹೆಚ್.ಡಿ.ಕುಮಾರಸ್ವಾಮಿ ಅವರ ಬೆನ್ನಿಗೆ ಚೂರಿ ಹಾಕಿ, ಕಾಂಗ್ರೆಸ್ ಪಕ್ಷಕ್ಕೆ ಅರ್ಜಿ ಹಾಕಿಕೊಂಡು ಬಂದಿರುವ ಇವರಿಗೆ ಕೆ.ಎನ್. ರಾಜಣ್ಣ ಅವರ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ? ಎಂದು ಪ್ರಶ್ನಿಸಿದರು.

ಕೆ.ಎನ್.ರಾಜಣ್ಣ ಅವರು ಮೂಲ ಕಾಂಗ್ರೆಸ್ ಪಕ್ಷದಲ್ಲಿ ಇದ್ದು, ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷವನ್ನು ಕಟ್ಟಲು ಮಾಜಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಕಾಂಗ್ರೆಸ್ ನಾಯಕರಾದ ಡಿ.ದೇವರಾಜ್ ಅರಸು, ಎಸ್.ಎಂ.ಕೃಷ್ಣ, ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಅವರ ಕಾಲದಿಂದಲೂ ಪಕ್ಷಕ್ಕಾಗಿ ಹಗಲು ರಾತ್ರಿ ದುಡಿದಿದ್ದಾರೆ. ಈಗ ಕೆ.ಎನ್ ರಾಜಣ್ಣ ಅವರು ಬಿಜೆಪಿ ಪಕ್ಷಕ್ಕೆ ಹೋಗಲು ಅರ್ಜಿ ಹಾಕಿಕೊಂಡಿದ್ದಾರೆ ಎಂದು ಬಾಲಕೃಷ್ಣರವರು ಅವಿವೇಕದ ಮಾತು ಗಳನ್ನು ಮಾಧ್ಯಮಗಳ ಮೂಲಕ ಹೇಳಿಕೆ ನೀಡಿ ಕಾಂಗ್ರೆಸ್ ಪಕ್ಷದಲ್ಲಿ ಗೊಂದಲ ಸೃಷ್ಟಿ ಮಾಡಿದ್ದಾರೆ ಡಿಕೆಶಿವಕುಮಾರ್ ಅವರನ್ನು ಓಲೈಸುವ ಮೂಲಕ ಸ್ವತಃ ಮಂತ್ರಿ ಸ್ಥಾನಕ್ಕಾಗಿ ಅರ್ಜಿ ಹಾಕಿದ್ದಾರೆಂದು ಆರೋಪಿಸಿದರು.

ಕಾಂಗ್ರೆಸ್ ಪಕ್ಷದ ವಿರುದ್ಧ ಅಥವಾ ಹೈಕಮಾಂಡ್ ವಿರುದ್ಧ ಕೆ.ಎನ್.ರಾಜಣ್ಣ ಯಾವತ್ತಾದರೂ, ಎಲ್ಲಿಯಾದರೂ ಮಾತನಾಡಿದ್ದಾರೆಯೇ, ಪಕ್ಷದ ಒಳಗೆ ಇದ್ದು ಅಧಿಕಾರಕ್ಕಾಗಿ ಕಾಂಗ್ರೆಸ್ ಪಕ್ಷವನ್ನೇ ಒಡೆದು ಆಳುವಂತ ಕುತಂತ್ರಿಗಳ ವಿರುದ್ಧ ಮಾತನಾಡಿದ್ದಾರಷ್ಟೇ ಎಂದು ಸಮರ್ಥಿಸಿಕೊಂಡರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು, ಕಟ್ಟಾ ಬೆಂಬಲಿಗರಾದ ರಾಜಣ್ಣ ಮುಂದೆ ಕೆಪಿಸಿಸಿ ಅಧ್ಯಕ್ಷರಾಗುವುದನ್ನು ತಪ್ಪಿಸಬೇಕೆಂಬ ಕಾರಣದಿಂದ ಹೈಕಮಾಂಡ್‌ಗೆ ಸುಳ್ಳು ಮಾಹಿತಿಯನ್ನು ನೀಡಿ ಸಚಿವ ಸ್ಥಾನದಿಂದ ವಜಾ ಮಾಡಿಸಿದ್ದಾರೆ. ಸುಳ್ಳು ಅಪಪ್ರಚಾರದ ಮೂಲಕ ಸಿದ್ದರಾಮಯ್ಯ ಅವರ ಬಣವನ್ನು ಕುಗ್ಗಿಸಬಹುದು ಎಂದು ಭಾವಿಸಿಕೊಂಡಿದ್ದಾರೆಂದು ಆರೋಪಿಸಿದರು.

ಮದ್ದೂರು ಶಾಸಕ ಉದಯ ಸಹ ಕೆ.ಎನ್. ರಾಜಣ್ಣ ಪಕ್ಷಕ್ಕೆ ಅನಿವಾರ್ಯ ಅಲ್ಲ ಎಂದು ಹೇಳಿದ್ದಾರೆ. ಆದರೆ ಇವರು ಮತ್ತು ಹಿಂದೆ ಇರುವ ನಾಯಕ ಕೂಡ ಅನಿವಾರ್ಯ ಅಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್ ಅದನ್ನು ಅರ್ಥ ಮಾಡಿಕೊಂಡು ಶಾಸಕ ಬಾಲಕೃಷ್ಣ ಮತ್ತು ಇವರ ಹಿಂದೆ ಇರುವ ಪಟ್ಟಬದ್ಧ ಹಿತಾಸಕ್ತಿಗಳಿಗೆ ಬುದ್ಧಿವಾದ ಹೇಳಿ ತೆಪ್ಪಗೆ ಇರುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವಕುಮಾರ ಸ್ವಾಮಿ, ಉದ್ಬೂರು ಎಂ. ಸೋಮಣ್ಣ, ರಮ್ಮನಹಳ್ಳಿ ಮಂಜುನಾಥ್, ಶಿವಸ್ವಾಮಿ, ಆಲನಹಳ್ಳಿ ಪ್ರಕಾಶ್ ಉಪಸ್ಥಿತರಿದ್ದರು.

# ವೈಯಕ್ತಿಕ ತೇಜೋವಧೆ ವಿರುದ್ಧ ಒಡನಾಡಿ ಸ್ಟ್ಯಾನ್ಲಿ ಪೊಲೀಸರಿಗೆ ದೂರು



ಕೆ.ವಿ.ಸ್ಟ್ಯಾನ್ಲಿ

ಮೈಸೂರು, ಸೆ.6(ಎಂಕೆ)– ಸಾಮಾಜಿಕ ಜಾಲತಾಣಗಳ ಮೂಲಕ ಆಧಾರರಹಿತ ವೈಯಕ್ತಿಕ ತೇಜೋವಧೆ ಮಾಡುತ್ತಿರುವ ವ್ಯಕ್ತಿ ವಿರುದ್ಧ ಒಡನಾಡಿ ಸೇವಾ ಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ ಹಾಗೂ ನಿರ್ದೇಶಕ ಕೆ.ವಿ.ಸ್ಟ್ಯಾನ್ಲಿ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಉಡುಪಿ ಜಿಲ್ಲೆಯ ಗಿಳಿಯಾರ್ ಗ್ರಾಮದ ವಸಂತ ಗಿಳಿಯಾರ್ (38) ಎಂಬಾತ ನನ್ನನ್ನು ಕ್ರೈಸ್ತ ಧರ್ಮದವನೆಂದು ಗುರುತಿಸಿ, ಹಿಂದೂ ಧರ್ಮ ಹಾಗೂ ದೇವಸ್ಥಾನಗಳನ್ನು ಒಡೆಯಲು ಬಂದವನೆಂದು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ವದಂತಿಯನ್ನು ಸಮಾಜದಲ್ಲಿ ಹರಡುತ್ತಾ, ಧಾರ್ಮಿಕ ಭಾವನೆಗಳಿಗೆ ದಕ್ಕೆ ತಂದು, ಧರ್ಮಗಳ ನಡುವೆ ಕಲಹ ತಂದಿರುವುದಲ್ಲದೆ ವೈಯಕ್ತಿಕವಾಗಿ ತೇಜೋವಧೆ ಮಾಡುತ್ತಿದ್ದು, ಆತನ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸುವಂತೆ, ತಮಗೆ ಭದ್ರತೆ ನೀಡುವಂತೆ ದೂರಿನಲ್ಲಿ ತಿಳಿಸಿದ್ದಾರೆ.

# ಬಾಲಾಪುರ್ ಖ್ಯಾತಿಯ ಗಣೇಶ ಲಡ್ಡು 35 ಲಕ್ಷಕ್ಕೆ ಹರಾಜು



ಹೈದರಾಬಾದ್, ಸೆ.6– ರಾಷ್ಟ್ರವ್ಯಾಪಿ ಗಮನ ಸೆಳೆಯುವ ಜನಪ್ರಿಯ 'ಬಾಲಾಪುರ ಗಣೇಶ ಲಡ್ಡು'ವನ್ನು ಬಹಿರಂಗ ಹರಾಜಿನಲ್ಲಿ ಕರ್ಮನ್ ಘಾಟ್‌ನ ಲಿಂಗಲ ದಶರತ್‌ಗೌಡ್ 35 ಲಕ್ಷ ರೂ.ಗೆ ಖರೀದಿಸಿದರು. ಇದು ಕಳೆದ 31 ವರ್ಷಗಳಲ್ಲಿ ನಡೆದ ಹರಾಜಿನಲ್ಲಿ ಅತ್ಯಧಿಕ ಮೊತ್ತವಾಗಿದೆ. ಹರಾಜಿನ ಮೊತ್ತವನ್ನು ಸ್ಥಳದಲ್ಲೇ ಪಾವತಿಸಲಾಯಿತು. ಕಳೆದ 3 ದಶಕಗಳಲ್ಲಿ ಬಾಲಾಪುರ ಲಡ್ಡು ಸರಳ ಪ್ರಸಾದದಿಂದ ಸಾಮೂಹಿಕ ನಂಬಿಕೆಯ ಸಂಕೇತವಾಗಿ ಬೆಳೆದಿದೆ. ಹರಾಜಿನಲ್ಲಿ ಖರೀದಿಯಾಗುವ ಬೆಲೆಗಳು ಪ್ರತಿ ವರ್ಷವೂ ಏರಿಕೆಯಾಗುತ್ತಿದೆ. ಕಳೆದ ವರ್ಷವು ಕೆ. ಶಂಕರ್‌ರೆಡ್ಡಿ ಲಡ್ಡುವನ್ನು 30.01 ಲಕ್ಷ ರೂ.ಗೆ ಖರೀದಿಸಿದ್ದರು.

ಕಳೆದ ವರ್ಷ ಹೊಸ ನಿಯಮವನ್ನು ಜಾರಿಗೆ ತರಲಾಯಿತು, ಇದರಲ್ಲಿ ಹರಾಜಿನಲ್ಲಿ ಭಾಗವಹಿಸುವವರು ಹಿಂದಿನ ವರ್ಷದ ಹರಾಜು ಬೆಲೆಗೆ ಸಮಾನವಾದ ಮೊತ್ತವನ್ನು ಠೇವಣಿ ಇಡಬೇಕು. ಈ ವರ್ಷ ಒಟ್ಟು 7 ಮಂದಿ 30.01 ಲಕ್ಷ ರೂ.ಗಳನ್ನು ಮುಂಗಡವಾಗಿ ಪಾವತಿಸಿ ನೋಂದಾಯಿಸಿಕೊಂಡಿದ್ದರು.

ಲಡ್ಡು ಬೆಲೆ ಸುಲಭವಾಗಿ 40 ಲಕ್ಷ ರೂಪಾಯಿ ಮೀರಬಹುದಾಗಿದ್ದರೂ, ಬಾಲಾಪುರ ಗಣೇಶ ಉತ್ಸವ ಸಮಿತಿ ಸದಸ್ಯರು ಬಿಡ್ಡಿಂಗ್ ಅನ್ನು ಮೊದಲೇ ಕಡಿತಗೊಳಿಸಿ ವಿಜೇತರನ್ನು ಘೋಷಿಸಿದರು. ಸಮಿತಿಯು ಪ್ರತಿ ವರ್ಷ ಲಡ್ಡು ಹರಾಜಿನ ಗರಿಷ್ಠ ಮಿತಿಯನ್ನು ಹಿಂದಿನ ವರ್ಷದ ಬೆಲೆಗಿಂತ 3–5 ಲಕ್ಷ ರೂ. ಹೆಚ್ಚು ಕಾಯ್ದುಕೊಳ್ಳುತ್ತಿದೆ. ಹರಾಜಿನಲ್ಲಿ ಸುಮಾರು 10–20 ಲಕ್ಷ ರೂಪಾಯಿ ಅಸಹಜ ಏರಿಕೆ ಕಂಡುಬಂದರೆ, ಮುಂದಿನ ವರ್ಷದ ಹರಾಜಿನಲ್ಲಿ ಅದರ ಪರಿಣಾಮ ಬೀರಬಹುದು.

ಹರಾಜಿನ ಮೊತ್ತವನ್ನು ದೇವಾಲಯ ಮತ್ತು ಗ್ರಾಮ ಅಭಿವೃದ್ಧಿ ಮತ್ತು ಕಲ್ಯಾಣ ಚಟುವಟಿಕೆಗಳಿಗೆ ಮುಖ್ಯವಾಗಿ ಶಿಕ್ಷಣ ಕ್ಷೇತ್ರಕ್ಕೆ ಖರ್ಚು ಮಾಡಲಾಗುವುದು ಎಂದು ಬಿಜೆಯುಎಸ್ ಸದಸ್ಯರು ಸುದ್ದಿಸಂಸ್ಥೆಗೆ ತಿಳಿಸಿದರು.

ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಚಟುವಟಿಕೆಗಳಿಗೆ ಕೆಲವು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಪ್ರತಿ ವರ್ಷವೂ ಲಡ್ಡುವಿನ ಜನಪ್ರಿಯತೆ ಹೆಚ್ಚುತ್ತಿದೆ. ವಿಜೇತರಿಗೆ ಪವಿತ್ರವೆಂದು ನಂಬಲಾದ ಬಾಲಾಪುರ ಲಡ್ಡು ಕಳೆದ ಮೂರು ದಶಕಗಳಿಂದ ಗಣೇಶ ಹಬ್ಬದ ಸಂದರ್ಭದಲ್ಲಿ ಆಕರ್ಷಣೆಯ ಕೇಂದ್ರವಾಗಿದೆ.






# ಸಿಎಂ ಸಿದ್ದರಾಮಯ್ಯರಿಂದ ರಾಜಕೀಯ ಲಾಭಕ್ಕೆ ಒಳಮೀಸಲಾತಿ ಜಾರಿ

## ಸುಪ್ರೀಂ ಆದೇಶ, ನ್ಯಾ.ನಾಗಮೋಹನ್ ದಾಸ್ ವರದಿ ಪಾಲನೆ ಮಾಡದೇ ಸಾಮಾಜಿಕ ಅನ್ಯಾಯ: ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಟೀಕೆ



ಸಿದ್ದರಾಮಯ್ಯ



ಬಸವರಾಜ ಬೊಮ್ಮಾಯಿ

ಬೆಂಗಳೂರು, ಸೆ.6(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಲಾಭಕ್ಕಾಗಿ ಒಳಮೀಸಲಾತಿ ಜಾರಿ ಮಾಡಿದ್ದು, ಸುಪ್ರೀಂಕೋರ್ಟ್ ಆದೇಶ ಹಾಗೂ ನ್ಯಾಯಮೂರ್ತಿ ನಾಗಮೋಹನ ದಾಸ್ ವರದಿ ಪಾಲಿಸದೇ ಸಾಮಾಜಿಕ ಅನ್ಯಾಯ ಎಸಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ವಂಚಿತ ಸಮುದಾಯಗಳಿಗೆ ನ್ಯಾಯ ದೊರಕಿಸಲು ಬಿಜೆಪಿ ಹೋರಾಟ ಮಾಡಲಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಕಾಲದಲ್ಲಿ ತುಳಿತಕ್ಕೊಳಗಾದವರಿಗೆ ನ್ಯಾಯ ಕೊಡಿಸಲು ಪೂನಾ ಒಪ್ಪಂದ (ಪೂನಾ ಫ್ಯಾಕ್ಟ್) ಮಾಡಿಕೊಳ್ಳಲಾಯಿತು. ಸಂವಿಧಾನ ರಚನೆ ವೇಳೆ ಒಪ್ಪಂದದ ಆಧಾರದಲ್ಲಿ ಮೀಸಲಾತಿ ತೀರ್ಮಾನ ಮಾಡಲಾಯಿತು.

ಕಾಂಗ್ರೆಸ್ ತನ್ನ ರಾಜಕೀಯ ಲಾಭಕ್ಕೆ ಒತ್ತು ಕೊಟ್ಟಿತು. ಡಾ.ಅಂಬೇಡ್ಕರ್ ಸಂವಿಧಾನದಲ್ಲಿ ಸೇರಿಸಿರುವ ಅಂಶಗಳನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದ್ದರು.

ಸಮುದಾಯಕ್ಕೆ ತಕ್ಕಂತೆ ಮೀಸಲಾತಿ ನಿರಂತರ ನೀಡಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು. ಕಾಂಗ್ರೆಸ್ ಎಸ್‌ಸಿ ಸಮುದಾಯಗಳನ್ನು ಸೇರಿಸಿತು. ಆದರೆ, ಮೀಸಲಾತಿ ಹೆಚ್ಚಳ ಮಾಡಲಿಲ್ಲ.

ರಾಜ್ಯದಲ್ಲಿ ಎಸ್‌ಸಿ ಪ್ರವರ್ಗದಲ್ಲಿ ಆರು ಜಾತಿ ಇದ್ದದ್ದು ಈಗ 101 ಜಾತಿಗಳಾಗಿವೆ. ಕಾಂಗ್ರೆಸ್ ಮೀಸಲಾತಿ ಹೆಚ್ಚಳ ಮಾಡದೇ ಅನ್ಯಾಯ ಮಾಡಿತು. ಇದರಿಂದ ಅಸಮಾಧಾನ ಹೆಚ್ಚಾಯಿತು. ಒಳ ಮೀಸಲಾತಿಗೆ ಆಂಧ್ರದಲ್ಲಿ ಚಳವಳಿ ಆರಂಭವಾಗಿ ಕರ್ನಾಟಕಕ್ಕೂ ಹಬ್ಬಿತು ಎಂದರು.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮೀಸಲಾತಿ ಹೆಚ್ಚಳಕ್ಕೆ ನ್ಯಾಯಮೂರ್ತಿ ನಾಗಮೋಹದಾಸ್ ಸಮಿತಿ ರಚನೆ ಮಾಡಲಾಯಿತು. ವರದಿ ಸಲ್ಲಿಕೆಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಾಲ ಮಿತಿ ನಿಗದಿ ಮಾಡಿದರು.

ನಾನು ಮುಖ್ಯಮಂತ್ರಿ ಆಗಿದ್ದಾಗ ನವೆಂಬರ್ 2022ರಲ್ಲಿ ಎಸ್‌ಸಿ ಶೇ.15 ರಿಂದ ಶೇ.17ಕ್ಕೆ ಹೆಚ್ಚಳ ಮಾಡಿದೆ. ಎಸ್‌ಟಿಗೆ ಶೇ.3 ರಿಂದ ಶೇ.7ಕ್ಕೆ ಹೆಚ್ಚಳ ಮಾಡಿದೆವು. ಅದು ಲ್ಯಾಂಡ್ ಮಾರ್ಕ್ ತೀರ್ಮಾನವಾಗಿದೆ.

**ರಾಜ್ಯಗಳಿಗೆ ಅಧಿಕಾರ :** ಆಗ ಪ್ರತಿ ಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ, ಮೀಸಲಾತಿ ಹೆಚ್ಚಳ ಆಗಿಲ್ಲವೆಂದು ಹೇಳುತ್ತಿದ್ದರು. ಸಂವಿಧಾನ ತಿದ್ದುಪಡಿ ಆಗಬೇಕು ಎಂದಿದ್ದರು. ಮುಖ್ಯಮಂತ್ರಿ ಆದಾಗಲೂ ಅದನ್ನೇ ಹೇಳಿದರು.

ಒಳ ಮೀಸಲಾತಿ ಅಧಿಕಾರವನ್ನು ಸುಪ್ರೀಂಕೋರ್ಟ್ ರಾಜ್ಯಗಳಿಗೆ ನೀಡಿತು. ಆದೇಶದ ಪ್ರಕಾರ ನಿಖರ ಡಾಟಾ ಇರಬೇಕು. ಅಸಮರ್ಥರನ್ನು ಪ್ರಾಬಲ್ಯ ಇದ್ದವರ ಜೊತೆ ಸೇರಿಸಬಾರದು ಎಂದು ಹೇಳಿತು.

ರಾಜ್ಯ ಸರ್ಕಾರ ನ್ಯಾಯಮೂರ್ತಿ ನಾಗಮೋಹನದಾಸ್ ಸಮಿತಿ ರಚನೆ ಮಾಡಿತು. ಆದರೆ, ಸರ್ಕಾರ ನ್ಯಾ. ನಾಗಮೋಹನ ದಾಸ್ ವರದಿ, ನ್ಯಾ.ಸದಾಶಿವ ಆಯೋಗದ ವರದಿ, ಮಾಧುಸ್ವಾಮಿ ವರದಿ ಎಲ್ಲವನ್ನು ಕೈಬಿಟ್ಟು, ಎಸ್‌ಸಿ ಪ್ರವರ್ಗ ಎಗೆ ಶೇ.6, ಎಸ್‌ಸಿ ಪ್ರವರ್ಗ ಬಿಗೆ ಶೇ.6 ಹಾಗೂ ಎಸ್‌ಸಿ ಪ್ರವರ್ಗ ಸಿಗೆ ಶೇ.5 ಮೀಸಲಾತಿ ವರ್ಗೀಕರಿಸಿ ರಾಜಕೀಯ ನಿರ್ಣಯ ಮಾಡಿತು.

ಇದನ್ನೇ ಮಾಡುವುದಾದರೆ ಆಯೋಗ ಮಾಡುವ ಅಗತ್ಯವೇನಿತ್ತು. ಅಲೆಮಾರಿಗಳಿಗೆ ಶೇ.1 ಮೀಸಲಾತಿ ಕೊಡಬೇಕೆಂದು ಮಾಧುಸ್ವಾಮಿ ಹಾಗೂ ನಾಗಮೋಹನ ದಾಸ್ ವರದಿಯಲ್ಲಿ ತಿಳಿಸಿದ್ದರೂ, ಮತ ಬ್ಯಾಂಕ್ ರಾಜಕಾರಣಕ್ಕಾಗಿ ಸುಪ್ರೀಂಕೋರ್ಟ್ ಆದೇಶ ಪಾಲಿಸದೆ ಸಾಮಾಜಿಕ ಅನ್ಯಾಯ ಮಾಡಿದ್ದಾರೆ ಎಂದರು.

ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ವರ್ಗೀಕರಣ ಮಾಡಲಿಲ್ಲ. ಆದಿ ಆಂಧ್ರ, ಆದಿ ಕರ್ನಾಟಕ, ಆದಿ ದ್ರಾವಿಡ ಅಂತ ಇದ್ದುದನ್ನು ತಿರಸ್ಕರಿಸಿದರು. ಅಲೆಮಾರಿಗಳು ಅತ್ಯಂತ ಕನಿಷ್ಠ ಜೀವನ ಸ್ಥಿತಿಯಲ್ಲಿದ್ದಾರೆ, ಅವರಿಗೆ ಯಾವುದೇ ಮೀಸಲಾತಿ ಇಲ್ಲ. ರಾಜ್ಯ ಸರ್ಕಾರದ ಒಳ ಮೀಸಲಾತಿ ತೀರ್ಮಾನದಿಂದ ಯಾರೂ ಸಂತುಷ್ಟರಾಗಿಲ್ಲ. ಎಸ್‌ಸಿ ಬಲಗೈ ಸಮುದಾಯ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ಲಂಬಾಣಿ, ಬೋವಿ ಜೊತೆಗೆ 59 ಜಾತಿಗಳನ್ನು ಸೇರಿಸಲಾಗಿದೆ. ರಾಜಕೀಯ ನಿರ್ಣಯ ಕೈಗೊಂಡಿದ್ದೇವೆ. ನೀವು ಬೇಕಾದರೆ ಕೋರ್ಟ್‌ಗೆ ಹೋಗಿ ಎಂದು ಸರ್ಕಾರ ಹೇಳುತ್ತಿದೆ. ಇದು ಬಗೆಹರಿಯದ ಕಗ್ಗಂಟಾಗಿದೆ.

ನಾವು ಮೀಸಲಾತಿ ಹೆಚ್ಚಳ ಮಾಡಿದ್ದಾಗ ಸಿದ್ದರಾಮಯ್ಯ ವಿರೋಧಿಸಿದರು. ಈಗ ಅದೇ ಆಧಾರದಲ್ಲಿ ಒಳ ಮೀಸಲಾತಿ ನೀಡಿರುವುದಕ್ಕೆ ಜನರ ಕ್ಷಮೆ ಕೇಳುವಿರಾ ಅಥವಾ ಇನ್ನೊಂದು ಪರ್ಸೆಂಟ್ ಹೆಚ್ಚಳ ಮಾಡಿ ನ್ಯಾಯ ಕೊಡಿಸುತ್ತೀರಾ. ಪ್ಯಾಕೆಜ್ ಕೊಡುವ ಮಾತನಾಡುತ್ತಾರೆ, ಇದೇನು ವ್ಯವಹಾರಿಕ ಡೀಲ್ ಅಲ್ಲ, ಸಮುದಾಯಗಳಿಗೆ ಶಾಶ್ವತ ನ್ಯಾಯ ಕೊಡಬೇಕು. ನಾಗಮೋಹನದಾಸ್ ವರದಿ ಒಪ್ಪಿಕೊಳ್ಳಬೇಕು, ಇನ್ನೊಂದು ಪರ್ಸೆಂಟ್ ಹೆಚ್ಚಳ ಮಾಡಿ ಅಲೆಮಾರಿಗಳಿಗೆ ನೀಡಿ, ಬೋವಿ, ಲಂಬಾಣಿಗೆ ನೀಡಿರುವ ಮೀಸಲಾತಿ ಇನ್ನೊಮ್ಮೆ ಪರಿಷ್ಕರಿಸಿ, ಎಕೆ, ಎಡಿ, ಎಎ ಸಮುದಾಯಗಳಿಗೆ ನ್ಯಾಯ ಕೊಡಬೇಕು.

ಶಿಕ್ಷಣ, ನೇಮಕಾತಿ, ಬಡ್ತಿ ಎಲ್ಲದರಲ್ಲೂ ಒಳ ಮೀಸಲಾತಿ ಪಾಲನೆಯಾಗಬೇಕು, ಬಿಜೆಪಿ ಎಲ್ಲ ಸಮುದಾಯಗಳ ಜೊತೆ ನಿಲ್ಲುತ್ತದೆ. ನ್ಯಾಯ ಕೊಡಿಸಲು ಪ್ರಯತ್ನಿಸಲಿದೆ, ಸರ್ಕಾರಿ ಮಟ್ಟದಲ್ಲಿ ಪರಿಹರಿಸದಿದ್ದರೆ ಕಾನೂನು ಹೋರಾಟ ಮಾಡುತ್ತೇವೆ ಎಂದರು.

# ಗುಜರಾತ್‌ನ ಪಾವಗಡ ಬೆಟ್ಟದ ದೇವಾಲಯದ ರೋಪ್‌ವೇ ಮುರಿದು 6 ಮಂದಿ ದುರ್ಮರಣ



ಗಾಂಧಿನಗರ, ಸೆ.6– ಗುಜರಾತ್‌ನ ಪಾವಗಡ ಶಕ್ತಿಪೀಠದ ಬಳಿ ಭೀಕರ ದುರಂತ ಸಂಭವಿಸಿದೆ. ಪಾವಗಡ ರೋಪ್‌ವೇಗಾಗಿ ನಿರ್ಮಾಣ ಸಾಮಗ್ರಿ ಸಾಗಿಸುತ್ತಿದ್ದ ಟ್ರಾಲಿ ಮುರಿದು ಬಿದ್ದ ಪರಿಣಾಮ 6 ಮಂದಿ ಸಾವನ್ನಪ್ಪಿದ್ದಾರೆ.

ಪಂಚಮಹಲ್ ಜಿಲ್ಲೆಯಲ್ಲಿ ಘಟನೆ ನಡೆದಿದ್ದು, 6 ಮಂದಿ ಸಾವನ್ನಪ್ಪಿರುವುದಾಗಿ ಡಿಎಸ್‌ಪಿ ಹರ್ಷ ದುಧಾತ್ ತಿಳಿಸಿದ್ದಾರೆ. ಮೃತರ ಪೈಕಿ ಇಬ್ಬರು ಲಿಫ್ಟ್ ಆಪರೇಟರ್, ಇಬ್ಬರು ಕಾರ್ಮಿಕರು ಹಾಗೂ ಇಬ್ಬರು ಇತರ ವ್ಯಕ್ತಿಗಳು ಸೇರಿದ್ದಾರೆ.

ಪಾವಗಡ ಬೆಟ್ಟದ ದೇವಸ್ಥಾನದಲ್ಲಿ ರೋಪ್‌ವೇನ ಕೇಬಲ್ ತಂತಿ ತುಂಡಾಗಿ ದುರಂತ ಸಂಭವಿಸಿದೆ ಎಂದು ಗುಜರಾತ್ ಪೊಲೀಸರು ತಿಳಿಸಿದ್ದಾರೆ. ಘಟನೆ ಬಳಿಕ ಗುಜರಾತ್ ಪೊಲೀಸ್ ಮತ್ತು ಅಗ್ನಿಶಾಮಕ ದಳದ ತಂಡಗಳು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಕೈಗೊಂಡಿವೆ.

ಪಾವಗಡ ಬೆಟ್ಟದ ದೇವಾಲಯ ಸುಮಾರು 800 ಮೀಟರ್ ಎತ್ತರದಲ್ಲಿದೆ. ಯಾತ್ರಿಕರಾಗಲಿ, ಪ್ರವಾಸಿಗರಾಗಲಿ ಇಲ್ಲಿನ ಶಿಖರ ತಲುಪಬೇಕಾದರೆ ಸುಮಾರು 2,000 ಮೆಟ್ಟಿಲುಗಳನ್ನು ಹತ್ತಿ ದೇವರ ದರ್ಶನ ಪಡೆಯಬೇಕು. ಅಥವಾ ಕೇಬಲ್ ಕಾರುಗಳ ಮೂಲಕವೇ (ರೋಪ್‌ವೇ) ಹೋಗಬೇಕು.

## ಪರಿಕರ ವಿತರಣೆ...



ಎಲ್‌ಐಸಿಯ ನಿವೃತ್ತ ನೌಕರರ ಸಂಘದ ವತಿಯಿಂದ ಚಾಮರಾಜನಗರ ಜಿಲ್ಲೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆನೆಮಾಳದ ಹಾಡಿ ಶಾಲೆಯ ಮಕ್ಕಳಿಗೆ ಲೋಟ, ತಟ್ಟೆ, ಕುಡಿಯುವ ನೀರಿನ ಫ್ಲಾಸ್ಕ್ ಸೇರಿದಂತೆ ಇತರೆ ಪರಿಕರಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಪಾರ್ಥಸಾರಥಿ, ಕಾರ್ಯದರ್ಶಿ ಪಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿಗಳಾದ ಶಂಕರಪ್ಪ, ಬೂಕನಕೆರೆ ವಿಜೇಂದ್ರ ಹಾಗೂ ಪದಾಧಿಕಾರಿಗಳು, ಹಾಡಿಯ ನಿವಾಸಿಗಳು ಹಾಜರಿದ್ದರು.



ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ತಾವರೆಕಟ್ಟೆ ಗ್ರಾಮ, ಚಾಮುಂಡಿ ಬೆಟ್ಟದ ಮುಖ್ಯ ರಸ್ತೆ, 3ನೇ ತಿರುವು, ಮನೆ ನಂ: 36 ರಲ್ಲಿ ವಾಸವಾಗಿರುವ ಸುಮಾರು 66 ವರ್ಷ ವಯಸ್ಸುಳ್ಳ ವಿ.ಶ್ರೀನಿವಾಸ್ ಬಿನ್ ಲೇಟ್ ಎಸ್.ವೆಂಕಟೇಶ್ ಒಂದು, ಸದರಿ ತಾವರೆಕಟ್ಟೆ ಗ್ರಾಮ, ಚಾಮುಂಡಿ ಬೆಟ್ಟದ ಮುಖ್ಯ ರಸ್ತೆ, 3ನೇ ತಿರುವು, ಮನೆ ನಂ: 37ರಲ್ಲಿ ವಾಸವಾಗಿರುವ ಸುಮಾರು 66 ವರ್ಷ ವಯಸ್ಸುಳ್ಳ ನಾಗೇಶ್ ಬಿನ್ ಲೇಟ್ ಓಬಳೇಶ್ @ ಓಬಳಯ್ಯ ಎರಡು ಮತ್ತು ಸದರಿ ತಾವರೆಕಟ್ಟೆ ಗ್ರಾಮ, ಚಾಮುಂಡಿ ಬೆಟ್ಟದ ಮುಖ್ಯ ರಸ್ತೆ, 4ನೇ ತಿರುವು, ಮನೆ ನಂ:50 ರಲ್ಲಿ ವಾಸವಾಗಿರುವ ಸುಮಾರು 61 ವರ್ಷ ವಯಸ್ಸುಳ್ಳ ಮುತ್ತಣ್ಣ ಬಿನ್ ಲೇಟ್ ಓಬಳೇಶ್ @ ಓಬಳಯ್ಯ ಮೂರು ರವರುಗಳ ಇರಾದೆ ಮೇರೆಗೆ ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ: ನಮ್ಮ ಕಕ್ಷಿದಾರರು 'ಎ' ಮತ್ತು 'ಬಿ' ಷೆಡ್ಯೂಲ್ ಸ್ವತ್ತಿನ ಸಂಬಂಧ ದಿನಾಂಕ: 13–02–2025 ರಂದು 'ಆಂದೋಲನ' ಕನ್ನಡ ದಿನಪತ್ರಿಕೆಯಲ್ಲಿ ನೀಡಿರುವ ಸಾರ್ವಜನಿಕ ತಿಳುವಳಿಕೆ ಪತ್ರದಲ್ಲಿನ ಅಂಶಗಳನ್ನು ಮತ್ತು 'ಬಿ' ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರಿನ ಗೌರವಾನ್ವಿತ 7ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಅಸಲು ದಾವಾ ಸಂಖ್ಯೆ 854/2025 ರ ವಾದಪತ್ರದಲ್ಲಿನ ಅಂಶಗಳನ್ನು ಮತ್ತು ಸದರಿ ಅಸಲು ದಾವೆಯ ಈ ವರೆವಿಗಿನ ನಡಾವಳಿಗಳನ್ನು ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ತಿಳುವಳಿಕೆ ಪತ್ರದ ಭಾಗವೆಂದು ಪರಿಗಣಿಸಬೇಕೆಂದು ಈ ಮೂಲಕ ನಮ್ಮ ಕಕ್ಷಿದಾರರು ಸಾರ್ವಜನಿಕರನ್ನು ಕೋರಿರುತ್ತಾರೆ. ಮೈಸೂರಿನ ಘನತೆವೆತ್ತ ಶ್ರೀಮಾನ್ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಕೆ.ಆರ್.ಎಸ್ ಅಣೆಕಟ್ಟು ಕಟ್ಟುವ ಮತ್ತು ಚಾಮುಂಡಿ ಬೆಟ್ಟಕ್ಕೆ ರಸ್ತೆಯನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಅಂದರೆ 1911 ರಿಂದ 1913 ರ ಅವಧಿಯಲ್ಲಿ ಭೋವಿ ಮತ್ತು ಆದಿಕರ್ನಾಟಕ ಜನಾಂಗದವರ ಶಾಶ್ವತ ವಸತಿ ಉದ್ದೇಶಕ್ಕಾಗಿ 'ಎ' ಮತ್ತು 'ಬಿ' ಷೆಡ್ಯೂಲ್ ಸ್ವತ್ತುಗಳನ್ನು ಬಾಯಿ ಮಾತಿನ ಮೂಲಕ ಭೋವಿ ಮತ್ತು ಆದಿಕರ್ನಾಟಕ ಜನಾಂಗದವರಿಗೆ ದಾನವಾಗಿ ನೀಡಿರುತ್ತಾರೆ, ಆ ಪೈಕಿ ಕ್ರಮವಾಗಿ ನಮ್ಮ ಕಕ್ಷಿದಾರರ ಮುತ್ತಜ್ಜ ಮತ್ತು ಅವರ ಕುಟುಂಬದವರುಗಳು ಸಹ ಒಬ್ಬರಾಗಿರುತ್ತಾರೆ, ಪ್ರಸ್ತುತ ನಮ್ಮ ಕಕ್ಷಿದಾರರು ಕ್ರಮವಾಗಿ ಸದರಿ ಭೋವಿ ಮತ್ತು ಆದಿಕರ್ನಾಟಕ ಜನಾಂಗದ ನಾಲ್ಕನೇ ತಲೆಮಾರಿನವರಾಗಿರುತ್ತಾರೆ. ಷೆಡ್ಯೂಲ್ ಸ್ವತ್ತು ಭೋವಿ ಮತ್ತು ಆದಿಕರ್ನಾಟಕ ಜನಾಂಗದವರಿಗೆ (ಒಡ್ಡರ ವಸತಿ ಪ್ರದೇಶ) ಸೇರಿದ ಸ್ವತ್ತೆಂಬ ಅಂಶವೂ, ಕ್ರಮವಾಗಿ ಕುರುಬಾರಳ್ಳಿಯ ಸರ್ವೆ ನಂ:4 ರಲ್ಲಿನ 1563 ಎಕರೆ 31 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ತಯಾರಿಸಿರುವ 1921 ರ, 1961 ರ ಮತ್ತು ದಿನಾಂಕ: 28–03–1985 ರ ಆರ್.ಕೆ.ಪಿ.ಆರ್–ಎಂ.ಎ.ಪಿ–93/1984–85 ನಕ್ಷೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿರುತ್ತದೆ. ವಸ್ತುಸ್ಥಿತಿ ಹೀಗಿದ್ದರೂ, ಕೆಲವು ವ್ಯಕ್ತಿಗಳು ಸೃಷ್ಟಿತ ದಾಖಲೆಗಳ ಆಧಾರದ ಮೇಲೆ 'ಬಿ' ಷೆಡ್ಯೂಲ್ ಸ್ವತ್ತನ್ನು ಅಕ್ರಮವಾಗಿ ಹೊಡೆದುಕೊಳ್ಳಲು ಪ್ರಯತ್ನಿಸಿದ ಕಾರಣ ನಮ್ಮ ಕಕ್ಷಿದಾರರುಗಳು 'ಬಿ' ಷೆಡ್ಯೂಲ್ ಸ್ವತ್ತನ್ನು ಸಂಪೂರ್ಣವಾಗಿ ಭೋವಿ ಮತ್ತು ಆದಿಕರ್ನಾಟಕ ಜನಾಂಗದವರಿಗಾಗಿ ಸಂರಕ್ಷಿಸುವ ಉದ್ದೇಶಕ್ಕಾಗಿ ಸರ್ಕಾರಿ ಇಲಾಖೆಗಳಾದ ಕಂದಾಯ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ, ಭೂ–ದಾಖಲೆಗಳ ಮತ್ತು ಇತರರ ವಿರುದ್ಧ ಪ್ರತಿನಿಧಿಸುವ ಹಕ್ಕಿನ/ಸಾಮರ್ಥ್ಯದ ಅಡಿಯಲ್ಲಿ (**Representative Capacity**) ಈ ಮೇಲೆ ಹೇಳಿರುವ ಮೈಸೂರಿನ ಗೌರವಾನ್ವಿತ 7ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯದಲ್ಲಿ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಹಾಗೂ ಇನ್ನಿತರ ಪರಿಹಾರಗಳನ್ನು ಕೋರಿ ಈ ಮೇಲೆ ಉಲ್ಲೇಖಿಸಿರುವ ಅಸಲು ದಾವಾ ಸಂಖ್ಯೆ 854/2025 ಅನ್ನು ಸಲ್ಲಿಸಿದ್ದು ಹಾಲಿ ಚಾಲ್ತಿಯಲ್ಲಿರುತ್ತದೆ. ಆದ್ದರಿಂದ ಸಾರ್ವಜನಿಕರ್‍ಯಾರು 'ಬಿ' ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಅಸಲು ದಾವಾ ಸಂಖ್ಯೆ 854/2025 ರ ಮತ್ತು ಮೇಲ್ಕಂಡ ಅಂಶಗಳ ಉಪಸ್ಥಿತಿಯಲ್ಲಿ ಯಾವುದೇ ವ್ಯಕ್ತಿಯೊಂದಿಗಾಗಲೀ ಅಥವಾ ಯಾವುದೇ ಸರ್ಕಾರಿ/ ಖಾಸಗಿ ಸಂಸ್ಥೆಯೊಂದಿಗಾಗಲೀ ಯಾವುದೇ ರೀತಿಯಿಂದಾಗಲೀ ವ್ಯವಹರಿಸಬಾರದೆಂದು, ಒಂದು ವೇಳೆ ವ್ಯವಹರಿಸಿದಲ್ಲಿ, ಸದರಿ ವ್ಯವಹರಣೆಯ ಸಂಬಂಧ 'ಬಿ' ಷೆಡ್ಯೂಲ್ ಸ್ವತ್ತಿನ ಸಂಬಂಧ ಮುಂದೆ ಉದ್ಭವಿಸುವ ಸಕಲ ರೀತಿಯ ಖರ್ಚುಗಳಿಗೂ ಸದರಿ ವ್ಯವಹಾರದಲ್ಲಿ ಭಾಗಿಯಾದವರು ಮಾತ್ರವೇ ಸಂಪೂರ್ಣವಾಗಿ ಜವಾಬ್ದಾರರಾಗುತ್ತಾರೆಂದು ಮತ್ತು ಸದರಿ ವ್ಯವಹಾರವು 'ಬಿ' ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರನ್ನೊಳಗೊಂಡಂತೆ ಸದರಿ ಭೋವಿ ಮತ್ತು ಆದಿಕರ್ನಾಟಕ ಜನಾಂಗದವರನ್ನು ಯಾವುದೇ ರೀತಿಯಿಂದಲೂ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

'ಎ' ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕುರುಬಾರಳ್ಳಿಯ ಸರ್ವೆ ನಂಬರ್ 4 ರಲ್ಲಿನ 1563 ಎಕರೆ 31 ಗುಂಟೆ ಜಮೀನಿನ ಭಾಗವಾದ, ಹಾಲಿ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ತಾವರೆಕಟ್ಟೆ ಗ್ರಾಮವೆಂದು ಸುಮಾರು 70 ವರ್ಷಗಳ ಹಿಂದೆಯೇ ನಾಮಾಂಕಿತಗೊಂಡಿರುವ, ಮೈಸೂರು ಮಹಾರಾಜರು ಭೋವಿ ಮತ್ತು ಆದಿ ಕರ್ನಾಟಕ ಜನಾಂಗದವರಿಗೆ ಶಾಶ್ವತ ವಸತಿಗಾಗಿ ಬಾಯಿಮಾತಿನ ಮೂಲಕ ದಾನವಾಗಿ ನೀಡಿರುವ ಸುಮಾರು 12 ಎಕರೆ ಪ್ರದೇಶದಲ್ಲಿರುವ ನಮ್ಮ ಕಕ್ಷಿದಾರರ ವಾಸದ ಮನೆಗಳನ್ನೊಳಗೊಂಡಂತೆ 150 ಕ್ಕಿಂತ ಹೆಚ್ಚು ವಾಸದ ಮನೆಗಳು, ಖಾಲಿ ನಿವೇಶನ, ಶಾಲೆ, ಖಾಲಿ ಜಾಗ, ಅಂಗನವಾಡಿ ಕೇಂದ್ರ ಮತ್ತು ಮಹಿಳಾ ಸ್ವ–ಸಹಾಯ ಸಹಕಾರ ಸಂಘದ ಕಛೇರಿ ಕಟ್ಟಡ ಒಳಗೊಂಡಿರುವ ಪ್ರದೇಶಕ್ಕೆ / ಸ್ವತ್ತಿಗೆ ಚೆಕ್ಕುಬಂಧಿ: ಪೂರ್ವಕ್ಕೆ: ಚಾಮುಂಡಿ ಬೆಟ್ಟಕ್ಕೆ ಹೋಗುವ ಸರ್ಕಾರಿ ಮುಖ್ಯ ರಸ್ತೆ, ಪಶ್ಚಿಮಕ್ಕೆ: ಚಾಮುಂಡಿ ಬೆಟ್ಟದ ತಪ್ಪಲು, ಉತ್ತರಕ್ಕೆ: 'ಬಿ' ಷೆಡ್ಯೂಲ್ ಸ್ವತ್ತು ನಂತರ ಚಾಮುಂಡಿ ಬೆಟ್ಟದಿಂದ ನಂದಿ ವಿಗ್ರಹದ ಮಾರ್ಗವಾಗಿ ಮೈಸೂರಿಗೆ ಬರುವ ಸರ್ಕಾರಿ ರಸ್ತೆ, ದಕ್ಷಿಣಕ್ಕೆ: ಚಾಮುಂಡಿಬೆಟ್ಟದ ತಪ್ಪಲು.

'ಬಿ' ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕುರುಬಾರಳ್ಳಿಯ ಸರ್ವೆ ನಂಬರ್ 4 ರಲ್ಲಿನ 1563 ಎಕರೆ 31 ಗುಂಟೆ ಜಮೀನಿನ ಭಾಗವಾದ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ತಾವರೆಕಟ್ಟೆ ಗ್ರಾಮದ ಉತ್ತರಕ್ಕೆ ಲಗತ್ತಾಗಿರುವ ಮತ್ತು ತಾವರೆಕಟ್ಟೆ ಗ್ರಾಮಕ್ಕೆ ಸೇರಿರುವ ಮೈಸೂರು ಮಹಾರಾಜರು ಭೋವಿ ಮತ್ತು ಆದಿಕರ್ನಾಟಕ ಜನಾಂಗದವರಿಗೆ ಶಾಶ್ವತ ವಸತಿಗಾಗಿ ಬಾಯಿಮಾತಿನ ಮೂಲಕ ದಾನವಾಗಿ ನೀಡಿರುವ, ಪ್ರಸ್ತುತ ವಿವಿಧ ಅಳತೆಯ ರೆವಿನ್ಯೂ ನಿವೇಶನಗಳನ್ನೊಂದಿರುವ ನಮ್ಮ ಕಕ್ಷಿದಾರರ ಮತ್ತು ತಾವರೆಕಟ್ಟೆ ಗ್ರಾಮದಲ್ಲಿನ ಫಲಾನುಭವಿಗಳ ನಿವೇಶನಗಳನ್ನು ಒಳಗೊಂಡಂತೆ, ಸುಮಾರು 5 ಎಕರೆ 10 ಗುಂಟೆ ಪ್ರದೇಶಕ್ಕೆ / ಸ್ವತ್ತಿಗೆ ಚೆಕ್ಕುಬಂಧಿ: ಪೂರ್ವಕ್ಕೆ: ಚಾಮುಂಡಿ ಬೆಟ್ಟಕ್ಕೆ ಹೋಗುವ ಸರ್ಕಾರಿ ಮುಖ್ಯ ರಸ್ತೆ, ಪಶ್ಚಿಮಕ್ಕೆ: ಚಾಮುಂಡಿ ಬೆಟ್ಟದ ತಪ್ಪಲು, ಉತ್ತರಕ್ಕೆ: ಚಾಮುಂಡಿ ಬೆಟ್ಟದಿಂದ ನಂದಿ ವಿಗ್ರಹದ ಮಾರ್ಗವಾಗಿ ಮೈಸೂರಿಗೆ ಬರುವ ಸರ್ಕಾರಿ ರಸ್ತೆ ನಂತರ ಚಾಮುಂಡಿ ಬೆಟ್ಟದ ತಪ್ಪಲು, ದಕ್ಷಿಣಕ್ಕೆ: 'ಎ' ಷೆಡ್ಯೂಲ್ ಸ್ವತ್ತು.

ಕಕ್ಷಿದಾರರು:
ವಕೀಲರು: ವಿಜಯಶ್ರೀ ಲಾ–ಅಸೋಸಿಯೇಟ್ಸ್, ಎಂ.ಸಿ ದೀಲಿಪ್‌ಕುಮಾರ್, ಬಿ,ಕಾಂ.,ಎಲ್.ಎಲ್.ಬಿ., ವಕೀಲರು, ನಂ. ಕೆ–8/1, ಕೆ–8/1ಎ, 2ನೇ ಮಹಡಿ, ವಾಣಿವಿಲಾಸ ಮುಖ್ಯ ರಸ್ತೆ, ಕೆ.ಆರ್ ಮೊಹಲ್ಲಾ, ಮೈಸೂರು–570024.
ಸ್ಥಳ: ಮೈಸೂರು ದಿನಾಂಕ: 06–09–2025

ಸ್ಥಾಪನೆ : 1910 ದೂರವಾಣಿ : 0821–2520026

## ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ (ಲಿ.),

ಶ್ರೀ ಹರ್ಷ ರಸ್ತೆ, ಮೈಸೂರು–570001

ಸರ್ವ ಸದಸ್ಯರುಗಳಿಗೂ ನಾಡಹಬ್ಬ ದಸರಾ ಶುಭಾಶಯಗಳು

**115ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ಬ್ಯಾಂಕಿನ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 07.09.2025 ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಮೈಸೂರು ನಗರದ ಚಂದ್ರಗುಪ್ತ ರಸ್ತೆಯಲ್ಲಿರುವ ಎಂ.ಎಲ್.ವರ್ಧಮಾನಯ್ಯ ಸ್ಮಾರಕ ಭವನ, ಸಂಗಮ್ ಟಾಕೀಸ್ ಹತ್ತಿರ, ಮೈಸೂರು ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸ್ವರೂಪ್.ಎಂ.ಎನ್. ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಈಗಾಗಲೇ ಪ್ರತಿಯೊಬ್ಬ ಸದಸ್ಯರಿಗೂ ಅಂಚೆ ಮೂಲಕ ಸದಸ್ಯರುಗಳ ವಿಳಾಸಕ್ಕೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ಆಹ್ವಾನ ಪತ್ರದ ವರದಿ ಪುಸ್ತಕ ಈವರೆಗೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು, ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡುವಂತೆ ಈ ಮೂಲಕ ಕೋರಲಾಗಿದೆ.

| ಶ್ರೀ ಸ್ವರೂಪ್ ಎಂ.ಎನ್. | ಶ್ರೀ ಎಸ್.ಸ್ವಾಮಿ | ಶ್ರೀ ಹೆಚ್.ರಾಜಶೇಖರ |
|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕರು (ಪ್ರ) |

ನಿರ್ದೇಶಕರುಗಳಾದ : ಶ್ರೀ ಶಿವ.ಎಸ್.ಬಿ., ಶ್ರೀ ಎನ್.ಧ್ರುವರಾಜ್, ಶ್ರೀ ಮಧು.ವಿ., ಶ್ರೀ ಎಂ.ಪುಟ್ಟಸ್ವಾಮಿ, ಶ್ರೀ ಪ್ರಸನ್ನ.ಎನ್. ಲಕ್ಷ್ಮಣ್, ಶ್ರೀ ದಿನೇಶ್.ಎಂ. ವೆಂಕಟಲಿಂಗಯ್ಯ, ಶ್ರೀ ಜಯಕುಮಾರ್, ಶ್ರೀ ಎಂ.ಕೆ.ಅಶೋಕ, ಶ್ರೀ ಜೆ.ಪ್ರಕಾಶ್, ಶ್ರೀಮತಿ ಪುಷ್ಪಲತ

ಸೂಚನೆ : ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವ ಸದಸ್ಯರುಗಳು ಕಡ್ಡಾಯವಾಗಿ ಬ್ಯಾಂಕಿನಿಂದ ನೀಡಿರುವ ಪಾಸ್ ಪುಸ್ತಕವನ್ನು ತರಬೇಕಾಗಿ ವಿನಂತಿ.

ಸಹಿ/– ವ್ಯವಸ್ಥಾಪಕರು(ಪ್ರ)